ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

ಕನ್ನಡ ಎಂ.ಫಿಲ್ ಪದವಿಯ ಭಾಗವಾಗಿ ಸಾದರಪಡಿಸಿದ ಸಂಪ್ರಬಂಧ

'ಮಳೆ ಜಾನಪದ' : ಒಂದು ಅಧ್ಯಯನ
(ಮೈಸೂರು ಜಿಲ್ಲೆ ವ್ಯಾಪ್ತಿ)

ನಿಬಂಧಕಾರರು

ಉಮೇಶ

ಕನ್ನಡ ಎಂ.ಫಿಲ್

ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು.

ಮಾರ್ಗದರ್ಶಕರು :

ಡಾ. ಸಿ.ಪಿ. ಕೃಷ್ಣಕುಮಾರ್,

ನಿವೃತ್ತ ಪ್ರಾಧ್ಯಾಪಕರು

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.

ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

[illegible]

[illegible]

[illegible]

ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

ಕನ್ನಡ ಎಂ.ಫಿಲ್ ಪದವಿಯ ಭಾಗವಾಗಿ ಸಾದರಪಡಿಸಿದ ಸಂಪ್ರಬಂಧ

'ಮಳೆ ಜಾನಪದ' : ಒಂದು ಅಧ್ಯಯನ

(ಮೈಸೂರು ಜಿಲ್ಲೆ ವ್ಯಾಪ್ತಿ)

ನಿಬಂಧಕಾರರು

ಉಮೇಶ

ಕನ್ನಡ ಎಂ.ಫಿಲ್

ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು.

ಮಾರ್ಗದರ್ಶಕರು :

ಡಾ. ಸಿ.ಪಿ. ಕೃಷ್ಣಕುಮಾರ್,

ನಿವೃತ್ತ ಪ್ರಾಧ್ಯಾಪಕರು

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.

ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

ಮಾರ್ಗದರ್ಶಕರ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಕನ್ನಡ ಎಂ.ಫಿಲ್ ಪದವಿಯ ವಿದ್ಯಾರ್ಥಿಯಾದ **ಉಮೇಶ** ಅವರು ನನ್ನ ಮಾರ್ಗದರ್ಶನದಲ್ಲಿ **'ಮಳೆ ಜಾನಪದ' : ಒಂದು ಅಧ್ಯಯನ** ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಲು ಸಿದ್ಧಪಡಿಸಿದ್ದಾರೆ.

ಈ ನಿಬಂಧವನ್ನು ಈ ಹಿಂದೆ ಭಾಗಶಃವಾಗಲಿ, ಪೂರ್ಣವಾಗಿಯಾಗಲಿ ಈ ವಿಶ್ವವಿದ್ಯಾನಿಲಯಕ್ಕೆ ಅಥವಾ ಬೇರೆ ಯಾವುದೇ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮಾ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು
ನಿವೃತ್ತ ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು.

ದಿನಾಂಕ : 30-08-08

ಸ್ಥಳ : ಮೈಸೂರು

ಅಭ್ಯರ್ಥಿಯ ಘೋಷಣಾ ಪತ್ರ

ಡಾ. ಸಿ.ಪಿ. ಕೃಷ್ಣಕುಮಾರ್ - ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರ ಮಾರ್ಗದರ್ಶನದಲ್ಲಿ **'ಮಳೆ ಜಾನಪದ' : ಒಂದು ಅಧ್ಯಯನ** ಎಂಬ ವಿಷಯದ ಬಗ್ಗೆ ನಡೆಸಿದ ಅಧ್ಯಯನದ ಫಲವೇ ಈ ಸಂಪ್ರಬಂಧ.

ಈ ಸಂಪ್ರಬಂಧವನ್ನು ಈ ಹಿಂದೆ ಭಾಗಶಃವಾಗಲಿ, ಪೂರ್ಣವಾಗಿಯಾಗಲಿ ಈ ವಿಶ್ವವಿದ್ಯಾನಿಲಯಕ್ಕೆ ಅಥವಾ ಬೇರೆ ಯಾವುದೇ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮಾ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 30-08-08.
ಸ್ಥಳ : ಮೈಸೂರು.

ನಿಬಂಧಕಾರರು
ಕನ್ನಡ ಎಂ.ಫಿಲ್
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು.

'ಮಳೆ ಜಾನಪದ' : ಒಂದು ಅಧ್ಯಯನ

(ಮೈಸೂರು ಜಿಲ್ಲೆ ವ್ಯಾಪ್ತಿ)

* * * * *

'ಮಳೆ ಜಾನಪದ' : ಒಂದು ಅಧ್ಯಯನ

(ಮೈಸೂರು ಜಿಲ್ಲೆ ವ್ಯಾಪ್ತಿ)

ಅಧ್ಯಾಯ - ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಸಾಹಿತ್ಯ ಒಂದು ಸಾಮಾಜಿಕ ಸೃಷ್ಟಿಯಾಗಿದೆ. ಮನುಷ್ಯ ತಾನು ಅನುಭವಿಸಿದ ಜೀವನಾನುಭವಗಳನ್ನು ಆಲೋಚನೆ ಮತ್ತು ಅಭಿಪ್ರಾಯಗಳನ್ನು ಭಾಷೆಯ ಮೂಲಕ ವ್ಯಕ್ತಪಡಿಸಲು ಕಂಡುಕೊಂಡಾಗ ಭಾಷೆ ಒಂದು ಸಂಪರ್ಕ ಮಾಧ್ಯಮವಾಗಿ ಸಮಾಜದಲ್ಲಿ ಸ್ಥಾನ ಪಡೆಯಿತು. ಸಮಾಜದಲ್ಲಿನ ಎಲ್ಲ ಜನಗಳನ್ನು ಒಂದೆಡೆ ಸೇರಿಸುವ ಪರಸ್ಪರ ಸಂಪರ್ಕ ಬೆಳೆಸುವ ಮತ್ತು ಅವರ ಹಿತವನ್ನು ಕಾಪಾಡುವ ನಿಟ್ಟಿನಲ್ಲೂ ಭಾಷೆ ಸಾಮಾಜಿಕ ಜವಾಬ್ದಾರಿಗಳನ್ನು ನಿರ್ವಹಿಸಿತು. ಇಲ್ಲಿಂದ ಮುಂದೆ ಭಾಷೆ ಇತರ ಸಾಧ್ಯತೆಗಳನ್ನು ನಿರ್ವಹಿಸುವಲ್ಲಿ ಹೆಜ್ಜೆ ಇರಿಸಿತು. ಅಂದರೆ ಮಾನವ ತನ್ನ ವಿಶಿಷ್ಟ ಅನುಭವಗಳನ್ನು ಭಾಷೆಯ ಮೂಲಕ ವ್ಯಕ್ತಪಡಿಸಲು ಕಲಿತುಕೊಂಡಮೇಲೆ ಈ ಅನುಭವಗಳೇ ಕಥೆಗಳಾಗಿ, ಹಾಡುಗಳಾಗಿ ಪ್ರಸಾರ ಹೊಂದಿದವು.

ಈ ಹಿನ್ನೆಲೆಯಲ್ಲಿ ಯಾವುದೇ ಭಾಷೆಯ ಸಾಹಿತ್ಯಕ್ಕೆ ಸಾಮಾಜಿಕ ಹೊಣೆಗಾರಿಕೆ ಇರುವುದನ್ನು ಕಂಡುಕೊಳ್ಳಬಹುದಾಗಿದೆ. ಭಾಷೆಗೆ ಲಿಪಿಯನ್ನು ಕಂಡುಕೊಳ್ಳುವ ಪೂರ್ವದಲ್ಲಿ ಈ ಸಾಹಿತ್ಯವೆಲ್ಲ ಮೌಖಿಕ ನೆಲೆಯಲ್ಲಿಯೇ ರೂಪುಗೊಂಡಿತು. ಮೌಖಿಕವಾಗಿಯೇ ಪ್ರಸಾರಗೊಳ್ಳುತ್ತಿತ್ತು. ಈ ಸಾಹಿತ್ಯದ ಒಡಲಲ್ಲಿ ಸಮಾಜದ ಎಲ್ಲ ಜನಗಳನ್ನೂ ಭಾವನಾತ್ಮಕವಾಗಿ ಒಂದುಗೂಡಿಸುವ, ಸಹಬಾಳ್ವೆ ನಡೆಸಲು ನೆರವಾಗುವ ಸಾಮಾಜಿಕ ಇಲ್ಲವೇ ಸಾಂಸ್ಕೃತಿಕ ಮೌಲ್ಯಗಳು ಅಡಕವಾಗಿದ್ದವು.

ಭಾರತೀಯ ವಾಙ್ಮಯ ಪ್ರಕಾರಗಳಲ್ಲಿ ಜನಪದಕ್ಕೆ ಒಂದು ವಿಶೇಷ ಸ್ಥಾನಮಾನವಿದೆ. ಅದೇ ಒಂದು ಸಾಗರ. ಜನಪದ ಸಾಹಿತ್ಯವೆಂಬ ಅಪಾರ ವಾರಾಶಿಯಲ್ಲಿ ಮುತ್ತು ಹವಳಗಳಂತಹ ಅನರ್ಘ್ಯ ರತ್ನಗಳು ಅಡಗಿವೆ. ಜನಜೀವನದ ವಿವಿಧ ಮುಖಗಳು ಆ ಸಾಗರದ ಜೀವ ವೈವಿಧ್ಯವಾಗಿ ಮೆರೆದಿವೆ. ಜನಪದ ಅಧ್ಯಯನವೇ ಅನೇಕ ವಿದ್ವಾಂಸರ ಕಾರ್ಯಕ್ಷೇತ್ರವಾಗಿರುವುದು ಆ ವಾಙ್ಮಯ ಪ್ರಕಾರವು ಅತ್ಯಂತ ಸಾರವತ್ತಾಗಿರುವುದರ ದ್ಯೋತಕವಾಗಿದೆ.

ಜೀವನ ಮೌಲ್ಯಗಳ ಸಾರಸರ್ವಸ್ವವನ್ನು ಹಿನ್ನೆಲೆಯಾಗಿ ಹೊಂದಿ, ನಮ್ಮ ಜನಪದರು ಬಾಳಿ ಬದುಕುವ ಮೂಲಕ ಅಂಥವೇ ಮೌಲ್ಯಗಳನ್ನುಳ್ಳ ಜನಪದ ಸಂಸ್ಕೃತಿ ನಮ್ಮಲ್ಲಿ ಮೈದಾಳಿದೆ. ಜನಪದರು ಮುಗ್ಧರೆಂದು ಭಾವಿಸಲಾಗುತ್ತದೆ. ಆ ಮುಗ್ಧತೆಯಲ್ಲೇ ಅವರು ಜೀವನದ ಸರ್ವ ಮುಖಗಳನ್ನು ಯಶಸ್ವಿಯಾಗಿ ಅನುಭವಿಸುತ್ತಾರೆ.

ಮಾನವನಿಗೆ ಮೊದಲಿನಿಂದಲೂ ನಿಗೂಢವೂ, ವಿಸ್ಮಯಕರವೂ ಕುತೂಹಲಪೂರ್ಣವೂ, ಅನ್ವೇಷಣ ಶಕ್ತಿ ಜನಕವೂ, ಆರಾಧನೀಯವೂ, ಸವಾಲು ಆಗಿರುವುದೆಂದರೆ ಪ್ರಾಕೃತಿಕ ಲೋಕ. ಅದು ತನ್ನ ಮೇಲೆ ಬೀರುವ ನಿರಂತರ ಪ್ರಭಾವ ಮತ್ತು ಪರಿಣಾಮಗಳ ರಹಸ್ಯವನ್ನು ಬಿಡಿಸಲು ಆತ ಹಿಂದಿನಿಂದಲೂ ಒಂದಲ್ಲ ಒಂದು ರೀತಿಯಲ್ಲಿ ಪ್ರಯತ್ನಿಸುತ್ತಲೇ ಬಂದಿದ್ದಾನೆ.

ಪ್ರತಿಯೊಂದು ಜೀವರಾಶಿಯ ಬದುಕಿನ ಮೂಲಸೆಲೆ 'ನೀರು' ಸಂಸ್ಕೃತದಲ್ಲಿ ಜೀವನ ಶಬ್ದಕ್ಕೆ ನೀರು ಎಂಬ ಅರ್ಥವೂ ಉಂಟು. ನೀರಿನ ಮೂಲತಾಣ 'ಮಳೆ' ಆದ್ದರಿಂದಲೇ ಎಲ್ಲ ಸಂಸ್ಕೃತಿಗಳಲ್ಲೂ ಮಳೆಯನ್ನು 'ವರದಾಯಕ'ವೆಂದು ಕರೆಯಲಾಗಿದೆ.

"ಪ್ರಾಚೀನ ಕಾಲದ ಮಾನವ ಪ್ರಕೃತಿಯಲ್ಲಿನ ಗಿಡ, ಸರ, ಬಳ್ಳಿ, ಪ್ರಾಣಿಗಳೊಂದಿಗೆ ತನ್ನ ಗೆಳೆತನವನ್ನು ಬೆಳೆಸಿಕೊಂಡಿದ್ದ. ಪ್ರಕೃತಿದತ್ತವಾದ, ಕೌಟುಂಬಿಕವಾದ ಇಂಥ ಹೊಂದಾಣಿಕೆ, ಆರಂಭದಲ್ಲಿ ಮಾನವನಿಗೆ ಸಾಧ್ಯವಾದುದರಿಂದಲೇ ಪ್ರಕೃತಿಯಲ್ಲಿ ನಡೆಯುವ ಪ್ರತಿಯೊಂದು ಕಾರ್ಯಾಚಾರಣೆಗಳನ್ನು ಕಂಡುಕೊಳ್ಳಲು ಸಾಧ್ಯವಾಯಿತು. ಇಲ್ಲದಿದ್ದರೆ ಆಗಿನ ಮನುಷ್ಯ ಆದಿ ಮಾನವನಾಗಿಯೇ ಉಳಿಯುತ್ತಿದ್ದ. ಪರಿಸರ ಪ್ರಜ್ಞೆಯಿಲ್ಲದೆ, ಬುದ್ಧಿ ವಿಕಾಸವಿಲ್ಲದ ಆದಿಮಾನವ ಇಂದಿನ ಮನುಷ್ಯನ ಮಟ್ಟವನ್ನು ಮುಟ್ಟಲು ಕಷ್ಟವಾಗುತ್ತಿತ್ತು. ತನ್ನ ಸುತ್ತಮುತ್ತ ಸಂಚರಿಸುವ ಪ್ರಾಣಿಗಳ, ಹಾರಾಡುವ ಕೂಗುವ ಪಕ್ಷಿಗಳ ವರ್ತನೆಗಳು ಆದಿಮಾನವನಿಗೆ ಆಶ್ಚರ್ಯಕರವಾಗಿ ಕಂಡವು. ಇವನ ಬುದ್ಧಿವಿಕಾಸದ ಕಸರತ್ತಿಗೆ ಅವು ಕಾರಣವಾದವು. ಹೀಗೆ ಪ್ರಪಂಚದ ಅನೇಕ ವಿಷಯಗಳು ಅವನಿಗೆ ಆಶ್ಚರ್ಯವನ್ನು ತಂದೊಡ್ಡಿದವು. ಸೂರ್ಯ, ಚಂದ್ರ, ಗ್ರಹ, ನಕ್ಷತ್ರ, ಮೋಡ, 'ಮಳೆ', ಗಾಳಿ, ಕಾಮನ ಬಿಲ್ಲು - ಮೊದಲಾದವುಗಳ ಬಗೆಗೆ ತನ್ನ ಕುತೂಹಲ ವ್ಯಕ್ತಪಡಿಸುತ್ತ ಬಂದ. ಇವುಗಳನ್ನು ಕಂಡಮೇಲೆ ತನ್ನಲ್ಲಿ ಉದ್ಭವವಾದ ಒಂದು ನಮೂನೆಯ ಚೇತನದಿಂದ ಅವುಗಳಿಗೂ ತನಗೂ ಯಾವುದೋ ಸಂಬಂಧವಿರಬೇಕು ಎಂದು ಭಾವಿಸಿಬಿಟ್ಟ. ಜೊತೆಗೆ ಅವುಗಳಿಂದ ತನಗೇನೋ ಪ್ರಯೋಜನವಿದೆ ಎಂದೂ ನಂಬಿಬಿಟ್ಟ."[1] ಇಂಥ ವಿಷಯಗಳಲ್ಲಿ ಲೀನವಾದ ಮಾನವ ತನ್ನದೇ ಆದ ರೀತಿಯಲ್ಲಿ ಅವುಗಳನ್ನು ಅರಿತುಕೊಳ್ಳಲು ಯತ್ನಿಸಿದ. ಹೀಗೆ ಅರಿತುಕೊಳ್ಳಲು ಯತ್ನಿಸಿದ ವಿಷಯಗಳಲ್ಲಿ ಮಳೆಯೂ ಒಂದು.

ಈ ನೆಲದ ಮೇಲೆ ವ್ಯವಸಾಯ ಎನ್ನುವುದು ಆರಂಭವಾಗಿ ಹತ್ತು ಸಾವಿರ ಕಾಲವಾಯಿತು ಎನ್ನುತ್ತಾರೆ. ಹಾಗಿದ್ದರೆ ಮಳೆಯನ್ನು ಕುರಿತ ಆಚರಣೆಗಳು, ನಂಬಿಕೆಗಳು, ಶಕುನ ಕೇಳುವುದು ಇತ್ಯಾದಿಗಳೆಲ್ಲಾ ಏಳೆಂಟು ಸಾವಿರ ವರುಷಗಳಷ್ಟು ಹಿಂದೆಯೇ ಆರಂಭವಾಗಿರಬೇಕು. ಮರುಭೂಮಿ ಪ್ರದೇಶದಲ್ಲಿಯಂತೂ ಇದು ಇನ್ನೂ ಹಿಂದೆಯೇ ಆರಂಭವಾಗಿರಬೇಕು. ಭಾಷೆಯೇ ಸರಿಯಾಗಿ ರೂಪುಗೊಂಡಿರದಿದ್ದ ವಾದ್ಯಗಳನ್ನು ಬಹುಮಟ್ಟಿಗೆ ರೂಪಿಸಿರದಿದ್ದ ಆ ದಿನಗಳಲ್ಲಿ ಈ ಅತ್ಯಂತ ತುರ್ತಿನ ಆಚರಣೆಗಳು ಹೇಗಿದ್ದಿರಬಹುದೆಂಬುದನ್ನು ಊಹಿಸಿಕೊಳ್ಳುವುದೇ ರೋಮಾಂಚನಕಾರಿ. ಅದೊಂದು ಥರ ಹೆಚ್.ಜಿ.

ವೇಲ್ಸ್‌ನ ಕಾಲಯಂತ್ರದಲ್ಲಿ ಕುಳಿತು ಹೋದ ಹಾಗೆ. ಅದನ್ನು ಬರಿದೇ ಕಲ್ಪಿಸಿಕೊಳ್ಳಬೇಕಷ್ಟೆ. ಮಳೆ ವರುಣದೇವನಾಗಿ, ಮೋಡಗಳು ಮೇಘರಾಜನಾಗಿ ಕಾಮನಬಿಲ್ಲು ಇಂದ್ರಚಾಪವಾಗಿಯೋ, ಮಳೆದೇವನ ಮಗನಾಗಿಯೋ ರೂಪುಗೊಳ್ಳುವುದಕ್ಕಿಂತ ಎಷ್ಟೋ ವರುಷಗಳ ಹಿಂದೆಯೇ ಇವನ್ನು ಕುರಿತು ಪ್ರಾಕೃತ ಆಚರಣೆಗಳು ಚಾಲ್ತಿಗೆ ಬಂದವು. ಇಂದಿಗೂ ಪ್ರಪಂಚದ ಹಲವೆಡೆ ತೀರಾ ಸರಳ ರೀತಿಯಿಂದ ಹಿಡಿದು ಸಂಕೀರ್ಣ ಸ್ವರೂಪದ ಆಚರಣೆಗಳನ್ನು, ನಂಬಿಕೆಗಳನ್ನು ಗಮನಿಸಬಹುದು. ಇವುಗಳ ಅಧ್ಯಯನ ಮಾನವನ ಸಾಂಸ್ಕೃತಿಕ ವಿಕಾಸವನ್ನು ಅರ್ಥಮಾಡಿಕೊಳ್ಳುವುದರಲ್ಲಿ ಮಹತ್ವದ ಪಾತ್ರ ವಹಿಸಬಲ್ಲದು.

ಭಾರತ ದೇಶವು ಹಳ್ಳಿಗಳಿಂದ ಕೂಡಿದ ನಾಡು. ಇಲ್ಲಿಯ ಜನರ ಮೂಲಭೂತ ಕಸಬು ವ್ಯವಸಾಯ. ವ್ಯವಸಾಯವು ಬಹುಪಾಲು ಮಳೆಯನ್ನು ಅವಲಂಬಿಸಿದೆ. ಅದರಲ್ಲೂ ಮಾನ್ಸೂನ್ (ಮಳೆ ಮಾರುತ) ಮಾರುತದ ಪಾತ್ರ ಪ್ರಧಾನವಾಗಿದೆ. ಈ ಹಿನ್ನಲೆಯಲ್ಲಿ ಭಾರತದ ವ್ಯವಸಾಯವನ್ನು ''Indian Agriculture is a Gambling with mansoon''[೭] ಎಂದು ವರ್ಣಿಸಲಾಗಿದೆ. ಮಳೆಯ ಬಗ್ಗೆ ನಮ್ಮ ಗ್ರಾಮೀಣ ಜನತೆಯಲ್ಲಿರುವ ಕಲ್ಪನೆಯನ್ನು ಅಂದರೆ 'ಜನಪದದ ಹಿನ್ನಲೆಯಲ್ಲಿ ಮಳೆಯ' ಬಗ್ಗೆ ಇರುವ ಕಲ್ಪನೆ, ನಂಬಿಕೆಗಳನ್ನು ತಿಳಿಸುವುದೇ ಪ್ರಸ್ತುತ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ಮಳೆಯನ್ನು ಕುರಿತಂತೆ ಅಧ್ಯಯನ ಮಾಡಲು ಹೊರಟ ಸಂದರ್ಭದಲ್ಲಿ ಇಂತಹ ಒಂದು ವಿಷಯದ ವ್ಯಾಪ್ತಿ ವಿಶಾಲವಾದುದರಿಂದ ಈ ಅಧ್ಯಯನವನ್ನು ಮೈಸೂರು ಜಿಲ್ಲೆಯ ವ್ಯಾಪ್ತಿಗೆ ಸೀಮಿತಗೊಳಿಸಿಕೊಂಡು, ನನ್ನ ಸಂಪ್ರಬಂಧವನ್ನು ಅಧ್ಯಯನದ ವ್ಯಾಪ್ತಿಯ ದೃಷ್ಟಿಯಿಂದ ಐದು ಭಾಗಗಳಾಗಿ ವಿಂಗಡಿಸಿಕೊಂಡು ಅಧ್ಯಯನದಲ್ಲಿ ತೊಡಗಿಕೊಂಡಿದ್ದೇನೆ. ಇದರ ರೂಪರೇಷೆಗಳು ಈ ಕೆಳಗಿನಂತಿವೆ.

ಅಧ್ಯಾಯ - ೧ : ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ.

ಈ ಅಧ್ಯಾಯದಲ್ಲಿ ವಿಷಯ ಆಯ್ಕೆಯ ಮಹತ್ವ ಮತ್ತು ಅದರ ಉದ್ದೇಶ. ವ್ಯಾಪ್ತಿ, ಸ್ವರೂಪಗಳನ್ನು ತಿಳಿಸುವ ಜೊತೆಗೆ ಈ ಅಧ್ಯಯನದ ಪರಿಮಿತಿಗಳನ್ನು ವಿವರಿಸಿದೆ.

ಅಧ್ಯಾಯ -೨ : ಮಳೆಯ ಹುಟ್ಟಿನ ಬಗೆಗಿರುವ ಕಲ್ಪನೆ.

ಈ ಭಾಗದಲ್ಲಿ ಮಳೆಯ ಹುಟ್ಟಿನ ಬಗ್ಗೆ ನಮ್ಮ ಜನಪದರಲ್ಲಿರುವ ಕಲ್ಪನೆ ಹಾಗೂ ಈ ಸಂಬಂಧವಾಗಿ ಜನಪದರಿಂದ ಸಂಗ್ರಹಿಸಿರುವ ಮಾಹಿತಿಯನ್ನು ದಾಖಲಿಸುವತ್ತ ಈ ಅಧ್ಯಾಯದ ಬರವಣಿಗೆ ಸಾಗುತ್ತದೆ.

ಅಧ್ಯಾಯ - ೩ : ಮಳೆಯ ನಕ್ಷತ್ರಗಳು

ಮಳೆಯ ನಕ್ಷತ್ರಗಳು ಎಂಬ ಮೂರನೆಯ ಅಧ್ಯಾಯದಲ್ಲಿ ಮಳೆಯ ನಕ್ಷತ್ರಗಳ ವಿವೇಚನೆಯನ್ನು ಪಂಚಾಂಗದ ಹಿನ್ನಲೆಯಿಂದ ಜನಪದರ ಹಿನ್ನಲೆಯವರೆಗೆ ಸಂಗ್ರಹಿಸಿದ ಮಳೆ ನಕ್ಷತ್ರಗಳ ವಿಚಾರಗಳನ್ನು ಕೂಲಂಕಷವಾಗಿ ವಿವರಿಸುವ ದಿಕ್ಕಿನಲ್ಲಿ ಈ ಅಧ್ಯಾಯದ ಬರವಣಿಗೆ ಸಾಗಿದೆ.

ವಿವಿಧ ಮಳೆಗಳನ್ನು ಕುರಿತ ಮಳೆಗಳ ಲೆಕ್ಕಾಚಾರದ್ದೇ ಇಲ್ಲಿ ಪ್ರತ್ಯೇಕ ವಿಭಾಗ. ಇಲ್ಲಿ ಆ ಲೆಕ್ಕಾಚಾರ ಪದ್ಧತಿಯ ಒಂದು ಸ್ಥೂಲ ಚಿತ್ರವನ್ನು ಕೊಡಲಾಗಿದೆ. ಅಧ್ಯಾಯವನ್ನು ಬರೆಯುವಲ್ಲಿ ಮುಖ್ಯವಾಗಿ

ಜನಶ್ರುತಿಯನ್ನು ಆಧರಿಸಿದ್ದರೂ ಪಂಚಾಂಗ ಹಾಗೂ ರಟ್ಟಮತ ಗ್ರಂಥದ ನೆರವನ್ನು ಪಡೆದುಕೊಳ್ಳಲಾಗಿದೆ. ಅವನ್ನೆಲ್ಲಾ ವಿವರಿಸುವುದು ಈ ಅಧ್ಯಾಯದ ಪ್ರಮುಖ ಉದ್ದೇಶವಾಗಿದೆ.

ಅಧ್ಯಾಯ -೪ : ಮಳೆ ಆಚರಣೆಗಳು

ದೊರೆತ ಮಾಹಿತಿಗಳ ಆಧಾರದ ಮೇಲೆ ಮಳೆ ಸಂಬಂಧಿ ಆಚರಣೆಗಳನ್ನು ವರ್ಗೀಕರಿಸ ವಿವರಿಸಲಾಗಿದೆ. ಅನಂತರದಲ್ಲಿ ಈ ಆಚರಣೆಗಳಲ್ಲಿ ಪ್ರಾಣಿ ಹಾಗೂ ಮಾನವರ ಬಳಕೆ ಕುರಿತು ಆರಾಧನಾ ವಿಧಾನಗಳ ಆಚರಣೆ ಕುರಿತು ಇರಬಹುದಾದ ಸಾಮಾನ್ಯ ಅಂಶಗಳನ್ನು ವಿಶ್ಲೇಷಿಸಿ ತಿಳಿಯುವ ಪ್ರಯತ್ನ ನಡೆದಿದೆ. ಸಸ್ಯಗಳನ್ನೊಳಗೊಳ್ಳುವ ಮಳೆ ಆಚರಣೆಗಳ ವಿಶ್ಲೇಷಣೆಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಮಳೆ ಬರುವಂತೆ ಮಾಡಲು, ಅದೇ ರೀತಿ ಮಳೆ ನಿಲ್ಲುವಂತೆ ಮಾಡಲು ನಮ್ಮ ಜನಪದರು ಆಚರಿಸುತ್ತಿದ್ದಂತಹ ಮಳೆ ಸಂಬಂಧಿತ ಆಚರಣೆಗಳು ವಿಶೇಷವಾಗಿ ಮೈಸೂರು ಜಿಲ್ಲೆಯ ವ್ಯಾಪ್ತಿಗೆ ಸಂಬಂಧಿಸಿದಂತೆ ಇರುವ ಮಳೆಯ ಆಚರಣೆಗಳ ಜೊತೆಗೆ ಇತರೆ ಪ್ರದೇಶಗಳಲ್ಲಿ ಮಳೆ ಸಂಬಂಧಿತ ಆಚರಣೆಗಳು ಹೇಗಿವೆ? ಅವುಗಳ ಮಹತ್ವವೇನು? ಹೇಗೆ ಆಚರಣೆ ಮಾಡಲಾಗುತ್ತದೆ? ಈ ಆಚರಣೆಗಳ ವಿಶೇಷತೆಗಳೇನು? ಎಷ್ಟು ಬಗೆಯ ಮಳೆಯ ಆಚರಣೆಗಳಿವೆ? ಎಂಬುದರ ಜೊತೆಗೆ ಈ ಸಂಬಂಧಿತ ಆಚರಣೆಗಳ ಸಾಧಕ ಬಾಧಕಗಳನ್ನು ಕುರಿತಂತೆ ಬರವಣಿಗೆ ಈ ಅಧ್ಯಾಯವು ಮೀಸಲಾಗಿದೆ.

ಅಧ್ಯಾಯ -೫ : ಉಪಸಂಹಾರ

ಈ ಭಾಗದಲ್ಲಿ ಇದುವರೆಗಿನ ಅಧ್ಯಯನದಲ್ಲಿ ನಾನು ಕಂಡುಕೊಂಡ ವಿಷಯಗಳ ಫಲಶ್ರುತಿಯನ್ನು ಹಾಗೂ ಈ ಅಧ್ಯಯನದಿಂದಾಗುವ ಪ್ರಯೋಜನ ಮತ್ತು ಸಾರ್ಥಕತೆಯ ಆಶಯವನ್ನು ಪ್ರಸ್ತಾಪಿಸಲಾಗಿದೆ.

ಸಂಪ್ರಬಂಧದ ಅಂತ್ಯದಲ್ಲಿ ನೀಡಲಾಗಿರುವ ಅನುಬಂಧಗಳಲ್ಲಿ ಅಧ್ಯಯನದ ವ್ಯಾಪ್ತಿಗೆ ಸೇರಿದ ಮಳೆಕುರಿತ ಗಾದೆಗಳು ಮತ್ತು ಮಳೆ ಕುರಿತ ಜನಪದಗೀತೆಗಳು, ಆಕರ ಗ್ರಂಥಗಳ ವಿವರ ಮತ್ತು ಮಾಹಿತಿ ಪೂರೈಸಿದವರ ವಿವರಣೆಗಳನ್ನು ನೀಡಲಾಗಿದೆ.

ಕೊನೆಯಲ್ಲಿ ಕೊಟ್ಟಿರುವ ಅನುಬಂಧದಲ್ಲಿ ಮಳೆ ಕುರಿತ ಗಾಧೆಗಳನ್ನು ಕೊಡಲಾಗಿದೆ. ಮತ್ತೆ ಮಳೆಗೆ ಸಂಬಂಧಪಟ್ಟಂತೆ ಜನಪದ ಗೀತೆಗಳನ್ನು ನೀಡಲಾಗಿದೆ. ಈ ಮೂಲಕ ಈ ಒಂದು ವಿಷಯವನ್ನು ಮುಕ್ತಾಯಗೊಳಿಸುವ ಪ್ರಯತ್ನವನ್ನು ಮಾಡಲಾಗಿದೆ.

* * * * *

ಅಡಿ ಟಿಪ್ಪಣಿಗಳು

೧. ಆಕಾಶ ಜಾನಪದ - ಪ್ರೊ. ಹಂಪ ನಾಗರಾಜಯ್ಯ - ಪುಟ ೨

೨. ಭಾರತದ ಭೂಗೋಳಶಾಸ್ತ್ರ - ಡಾ. ರಂಗನಾಥ - ಪುಟ ೧೧೩

ಅಧ್ಯಾಯ - ೨

ಮಳೆಯ ಹುಟ್ಟಿನ ಬಗೆಗಿರುವ ಕಲ್ಪನೆ

ಒಂದು ನಿರ್ದಿಷ್ಟವಾದ ಪ್ರದೇಶದಲ್ಲಿ ವಾಸಮಾಡುವ ಜನ ಸಮುದಾಯವನ್ನು 'ಜನಪದ' ಎಂದು ವಿದ್ವಾಂಸರು ಕರೆಯುತ್ತಾರೆ. ಜನಪದ ಎಂದರೆ ಗುಂಪು ಎಂದರ್ಥ. ಇಂಥ ಜನಪದ ಸಂಸ್ಕೃತಿಯಲ್ಲಿ ಸರಳತೆ ಮತ್ತು ಮುಗ್ಧತೆ ಪ್ರಮುಖ ಲಕ್ಷಣಗಳಾಗಿ ಕಂಡುಬರುತ್ತವೆ. ಯಾವುದೇ ರೀತಿಯ ಮೋಸ, ಕಪಟ, ಸುಳ್ಳು, ತಟಪಟ ಮುಂತಾದ ಆಧುನೀಕರಣದ ಫಲಗಳು ಇಲ್ಲಿರುವುದಿಲ್ಲ. ಹಣದ ದಾಹ ಕಾಣಿಸುವುದಿಲ್ಲ. ಆಡಿದ ಮಾತು ಉಳಿಸಿಕೊಳ್ಳುವ ನೈತಿಕತೆ ಇಲ್ಲಿ ಪ್ರಧಾನವಾದ ಅಂಶ. 'ಮಾತು ಆಡಿದರೆ ಮುಗಿಯಿತು, ಮುತ್ತು ಒಡೆದರೆ ಹೋಯಿತು' ಎಂಬ ಗಾದೆ ಮಾತಿನಂತೆ ಜನ ನಡವಳಿಕೆಯಲ್ಲಿ ನೈತಿಕತೆ ಉಳಿಸಿಕೊಳ್ಳಲು ಸೆಣಸಾಡುತ್ತಾರೆ. ಪ್ರಾಣ ಬೇಕಾದರೆ ಬಿಡುತ್ತಾರೆ. ಆಡಿದ ಮಾತನ್ನು ತಪ್ಪಿಸುವುದಿಲ್ಲ. ಇಂಥ ಜೀವನ ಶುದ್ಧತೆ ಜನಪದ ಸಂಸ್ಕೃತಿಯ ಭಾಗವಾಗಿರುತ್ತದೆ.

ಜನಪದ ಸಂಸ್ಕೃತಿಯಲ್ಲಿ ಸಂಪ್ರದಾಯ, ನಿಷ್ಠೆ, ದೈವಭಕ್ತಿ, ನೆಲದ ಪ್ರೀತಿ, ಪ್ರಧಾನ ಲಕ್ಷಣಗಳಾಗಿ ಕಂಡುಬರುತ್ತದೆ. ವೇದ, ಉಪನಿಷತ್, ಪುರಾಣ ಮುಂತಾದ ಲಿಖಿತ ಪರಿಕರಗಳಿಲ್ಲದೆ ಆಚರಣೆಯಲ್ಲಿ ಉಳಿಸಿಕೊಂಡು ಬಂದಂತಹ ನಂಬಿಕೆ ಸಂಪ್ರದಾಯಗಳು ಜನಪದ ಸಂಸ್ಕೃತಿಯ ಬೇರುಗಳಾಗಿರುತ್ತವೆ. ಇಂತಹ ಮುಗ್ಧ ಜೀವಗಳ ಕೆಲವು ಕಲ್ಪನೆಗಳು ವಾಸ್ತವಕ್ಕೆ ಹತ್ತಿರವೇನೋ ಎಂಬಂತೆ ಕಾಣುತ್ತವೆ.

ಬೇಸಾಯ ಜನಪದರ ಒಂದು ಮುಖ್ಯ ಕಸುಬು. ಬೇಸಾಯಕ್ಕೆ ಅತಿ ಮುಖ್ಯವಾದದ್ದು ನೆಲ ಮತ್ತು ನೀರು. ಮಳೆ ಬರದಿದ್ದರೆ ಬಿತ್ತನೆ ಇಲ್ಲ. ಬಿತ್ತಿದ ಮೇಲೆ ಮಳೆ ಬರದಿದ್ದರೆ, ಪೈರು ಸೀದು ಹೋಗುತ್ತದೆ. ಕಾಲಕಾಲಕ್ಕೆ ಮಳೆ ಬಂದು ಕೈಗೆ ಬೆಳೆ ಬಂದಾಗ ದುಡಿಯುವಂಥ ಶ್ರಮಜೀವಿಗಳಿಗೆ ಹಬ್ಬ, ಹರಿದಿನಗಳು, ಮದುವೆ ಮುಂಜಿಗಳು, ಜಾತ್ರೆ ಸಡಗರಗಳು ಕಾಣಿಸಿಕೊಳ್ಳುತ್ತವೆ. ಸುತ್ತಮುತ್ತಿನ ಪ್ರಕೃತಿ ವ್ಯಾಪಾರದಿಂದ ಆತ ಮಳೆಯ ಭವಿಷ್ಯವನ್ನು ಈ ಮುಂದಿನಂತೆ ನುಡಿಯುತ್ತಾನೆ.

> ''ಗುಡುಗುಡು ಗುಟ್ಟೀತು ನಡುಬಾಣ ಮಿಂಚೀತು
> ಮೂಡಾದ್ರಿ ಅಂಬು ದಂಡಿನ - ಕುದುರೆ ಮೇಲೆ
> ಚೆಂಡಾಡಿ ಹುಯ್ಯೋ ಮಳೆರಾಯ - ಮಳೆದೇವ
> ಮಳಿಯಪ್ಪ ಮಳೆರಾಜ ಕರೆಯುತಾರೋ ನಿನ್ನ
> ಮೊದಲು ಕೂರಿಗೆ ರೈತರು - ಹೊಲದಾಗ
> ಫಲವೆದ್ದು ಕೈಯ ಮುಗಿದಾವ.''[೧]

ನೆಲ ಮತ್ತು ನೀರುಗಳ ಬಗ್ಗೆ ಜನಪದರಿಗೆ ಇರುವ ಗೌರವ, ಶ್ರದ್ಧೆ ಎರಡೂ ಒಂದಾಗಿ ಬೆರೆತ, ಅಮೂರ್ತವನ್ನು ಮೂರ್ತವಾಗಿ ಗ್ರಹಿಸಿ ಮಾನವೀಕರಣಗೊಳಿಸುವ ತಾತ್ವಿಕತೆಯನ್ನು ಮೇಲೆ ಉದಾಹರಿಸಿದ ಪದ್ಯಗಳಲ್ಲಿ ಕಾಣಬಹುದು.

ಮಳೆಯ ಹುಟ್ಟಿನ ಬಗ್ಗೆಯೂ ಇದೇ ರೀತಿಯ ಭಾವನೆ ಜನಪದ ಸಂಸ್ಕೃತಿಯಲ್ಲಿದೆ. ಮಳೆಯನ್ನು ಪ್ರಾಕೃತಿಕವಾದ ಸಂಗತಿ ಎಂದು ಭಾವಿಸದೆ, ಮಳೆಯಪ್ಪ, ಮಳೆರಾಜ, ಸಾಲತರಲು ಹೋಗುವವನು ಎಂಬ ವ್ಯಕ್ತೀಕರಣ ಕಲ್ಪನೆಗಳು ಮುಗ್ಧ ಜನರ ಮನಸ್ಸಿನಲ್ಲಿ ನೆಲೆಯೂರಿವೆ. ಆತನಿಗೂ ಮನುಷ್ಯರಿಗಿರುವಂತೆಯೇ ಹೆಂಡತಿ ಮಕ್ಕಳು ಇದ್ದಾರೆ. ಕೋಪಬಂದಾಗ ಮುನಿಸಿಕೊಂಡು ದೂರಹೋಗುತ್ತಾನೆ. ಆಗ, ಆತನನ್ನು ಒಲಿಸಿಕೊಳ್ಳಲು ನಾನಾತರದ ಆಚರಣೆ ಮಾಡುತ್ತೇವೆ. ಇಂಥ ಮಳೆಯ ಹುಟ್ಟಿನ ಬಗ್ಗೆ ನಮ್ಮ ಜನಪದ ಸಂಸ್ಕತಿಯಲ್ಲಿ ವಿಶ್ಲೇಷಿಸುತ್ತಾ ಸಾಗಿದಂತೆ, ಮುಗ್ಧ ಜನಪದರಲ್ಲಿ ಮಳೆಯನ್ನು ಕುರಿತ ಒಂದು ಸ್ವಾರಸ್ಯಕರವಾದ ಕಲ್ಪನೆ ಇರುವುದನ್ನು ನಮ್ಮೂರಿನ ಹಿರಿಯರಾದ ನಿಂಗೇಗೌಡರು ತಿಳಿಸಿದಾಗ ಕುತೂಹಲ ಹಾಗೂ ಆಶ್ಚರ್ಯ, ಜೊತೆಗೆ ನಮ್ಮ ಜನಪದರಲ್ಲಿರುವ ಕಲ್ಪನಾ ಚಾತುರ್ಯ. ಕಥನ ಶೈಲಿಯನ್ನು ಕಂಡು ಬೆರಗಾದದ್ದು ಇದೆ. ಆ ಕಲ್ಪನೆ ಈ ಮುಂದಿನಂತಿದೆ.

ದಕ್ಷಬ್ರಹ್ಮ - ವೇದವತಿ ದಂಪತಿಗಳಿಗೆ ಬಹುಕಾಲದಿಂದ ಮಕ್ಕಳಿರಲಿಲ್ಲ. ಇವರು ಶಿವನ ಬಳಿಗೆ ಹೋಗಿ ಮಕ್ಕಳ ವರವನ್ನು ಬೇಡುತ್ತಾರೆ. ಅದರ ಫಲವಾಗಿ ಇವರಿಗೆ ೨೭ ಜನ ಹೆಣ್ಣುಮಕ್ಕಳು ಜನಿಸುತ್ತಾರೆ. ಅವರು ಪ್ರಾಯಕ್ಕೆ ಬರಲು ದಕ್ಷಬ್ರಹ್ಮ ಅವರಿಗೆ ವಿವಾಹ ಮಾಡಲು ಮುಂದಾಗುತ್ತಾನೆ. ಆ ಸಂದರ್ಭದಲ್ಲಿ ಅವನು ಶಿವನ ವರ ಪ್ರಸಾದದಿಂದ ಮಕ್ಕಳಾದ ಕಾರಣ ಶಿವನಿಗೆ ತನ್ನ ಒಬ್ಬ ಮಗಳನ್ನು ಕೊಡಲು ತೀರ್ಮಾನಿಸುತ್ತಾನೆ. ಶಿವನು ಕೂಡ ಇದಕ್ಕೆ ಒಪ್ಪಿ, ಗೌರಿಯನ್ನು ವಿವಾಹವಾಗುತ್ತಾನೆ. ಉಳಿದ ೨೬ ಜನ ಹೆಣ್ಣು ಮಕ್ಕಳಲ್ಲಿ ೫ ಜನರನ್ನು ಇತರ ದೇವಮಾನವರಾದಿಯಾದ ಗಂಧರ್ವರಿಗೆ ಕೊಟ್ಟು ವಿವಾಹ ಮಾಡುತ್ತಾನೆ. ಅನಂತರ ಚಂದ್ರಮನು ಉಳಿದ ಆ ೨೧ ಜನರಲ್ಲಿ ಅತ್ಯಂತ ರೂಪವತಿಯಾದ ರೋಹಿಣಿಯ ಮೇಲಿನ ಪ್ರೇಮದಿಂದ ವಿವಾಹವಾಗಲು ಮುಂದಾಗುತ್ತಾನೆ. ಈ ಸಂದರ್ಭದಲ್ಲಿ ದಕ್ಷ ಬ್ರಹ್ಮನು ಚಂದ್ರಮನಿಗೆ ಒಂದು ಷರತ್ತನ್ನು ಹಾಕುತ್ತಾನೆ. ಅದೇನೆಂದರೆ ರೋಹಿಣಿಯ ಜೊತೆಗೆ ತನ್ನ ಉಳಿದ ಹೆಣ್ಣು ಮಕ್ಕಳನ್ನು ಸಮಾನವಾಗಿ ಸುಖ - ಸಂತೋಷದಿಂದ ನೋಡಿಕೊಳ್ಳುವುದಾದರೆ ಮದುವೆಗೆ ಒಪ್ಪುವುದಾಗಿ ನುಡಿಯುತ್ತಾನೆ. ಇದಕ್ಕೆ ಚಂದ್ರಮನು ಒಪ್ಪಿ ರೋಹಿಣಿಯಾದಿಯಾಗಿ ಎಲ್ಲಾ ೨೦ ಜನರ ದಕ್ಷನ ಕನ್ಯಾಮಣಿಯರನ್ನು ವಿವಾಹವಾಗುತ್ತಾನೆ.

ಹೀಗಿರಲು ಒಂದು ದಿನ ದಕ್ಷ ಬ್ರಹ್ಮನು ತನ್ನ ಹೆಣ್ಣು ಮಕ್ಕಳನ್ನು ನೋಡಲು ಅಳಿಯನಾದ ಚಂದ್ರಮನ ಬಳಿಗೆ ಹೋಗುತ್ತಾನೆ. ಚಂದ್ರಮ ಮತ್ತು ರೋಹಿಣಿಯರು ಸಂತೋಷದಿಂದ ಸಮಯ ಕಳೆಯುತ್ತಿರುತ್ತಾರೆ. ಇದನ್ನು ಕಂಡು ದಕ್ಷ ಬ್ರಹ್ಮನು ಸಂತೋಷಗೊಳ್ಳುತ್ತಾ, ರೋಹಿಣಿಯ ಯೋಗಕ್ಷೇಮವನ್ನು ವಿಚಾರಿಸಿ ಸ್ವಲ್ಪ ಸಮಯ ಕಳೆಯುತ್ತಾನೆ. ಅನಂತರದಲ್ಲಿ ದಕ್ಷ ಬ್ರಹ್ಮನಿಗೆ ತನ್ನ ಉಳಿದ ಮಕ್ಕಳ ನೆನಪಾಗಿ

ಚಂದ್ರಮನನ್ನು ಕೇಳಲು ಅವನು ಉದಾಸೀನತೆಯಿಂದ ಅವರೆಲ್ಲೋ ಇದ್ದಾರೆ ಎನ್ನಲು, ರೋಹಿಣಿಯು ತಂದೆಗೆ ನಿಜ ಸಂಗತಿಯನ್ನು ತಿಳಿಸುತ್ತಾಳೆ. ಅಪ್ಪಾಜಿ ನನ್ನ ತಂಗಿಯರು ಇಲ್ಲಿ ಸುಖವಾಗಿಲ್ಲ. ಚಂದ್ರಮನು ಅವರೆಲ್ಲರನ್ನು ಒಂದೊಂದು ಕೋಣೆಯಲ್ಲಿ ಕೂಡಿಹಾಕಿರುವುದಾಗಿ ತಿಳಿಸುತ್ತಾಳೆ. ಇದರಿಂದ ಕೋಪಗೊಂಡ ದಕ್ಷಬ್ರಹ್ಮನು ಅಳಿಯನಾದ ಚಂದ್ರಮನಿಗೆ ಅಂಧಕನಾಗುವಂತೆ ಶಾಪವನ್ನು ಕೊಟ್ಟು ಹೊರಟುಹೋಗುತ್ತಾನೆ. ಇದರಿಂದ ಅತೀವವಾಗಿ ನೊಂದ ಚಂದ್ರಮನು ಶಿವನ ಬಳಿ ತನ್ನ ತಪ್ಪನ್ನು ನಿವೇದಿಸಿಕೊಳ್ಳುತ್ತಾನೆ. ಶಿವನು ಅವನ ಶಾಪವನ್ನು ವಿಮೋಚನೆಗೊಳಿಸಲು ಚಂದ್ರಮನನ್ನು ಭೂಮಿಯನ್ನು ಬೆಳಗುವಂತೆ ಹೇಳುತ್ತಾನೆ. ಅದರಂತೆ ಚಂದ್ರಮನು ಭೂಮಿಯನ್ನು ಬೆಳಗುವುದಾಗಿ ಹೇಳಿ ಹೊರಟು ಬರುತ್ತಾನೆ. ಈ ವಿಷಯವನ್ನು ತಿಳಿದ ಅವನ ಮಡದಿಯರು ಮೇಘರಾಜನ ಬಳಿ ಹೋಗಿ ಮಳೆಗಳಾಗಿ ಜನ್ಮವೆತ್ತುತ್ತಾರೆ. ಇವರು ಮೂರು ದಿವಸಕ್ಕೆ ಅಥವಾ ನಾಲ್ಕು ದಿವಸಕ್ಕೆ ಒಂದು ಪಾದದಂತೆ ಕಾಣಿಸಿಕೊಳ್ಳುತ್ತಾರೆ. ಮಳೆ ನಕ್ಷತ್ರದಲ್ಲಿ ಪ್ರತಿ ಮಳೆಗೂ ನಾಲ್ಕು ನಾಲ್ಕು ಪಾದಗಳನ್ನು ಹೇಳಿರುವುದು ಇಲ್ಲಿ ಗಮನಾರ್ಹ. ಹೀಗೆ ಮಳೆಯ ಹುಟ್ಟಿನ ಬಗ್ಗೆ ನಮ್ಮ ಜನಪದರಲ್ಲಿರಬಹುದಾದ ಬಹಳ ಸ್ವಾರಸ್ಯಪೂರ್ಣ ಕಥಾನಕ ಕಲ್ಪನೆ ಇದಾಗಿದೆ.ದಿ

ಸರ್ವಜ್ಞ ವೇದಾಂತವಾಗಲೀ, ವೈದ್ಯವಾಗಲೀ ಅದನ್ನು ಶಾಸ್ತ್ರಾನುಸಾರವಾಗಿ, ಶಾಸ್ತ್ರೀಯವಾದ ರೀತಿಯಲ್ಲಿ ಪಂಡಿತರು ಮೆಚ್ಚುವಂತೆ ಬೋಧಿಸುವುದಕ್ಕೆ ಹೋಗುವುದಿಲ್ಲ. ಅವನು ಹೇಳಿರುವುದು ಸಾಮಾನ್ಯವಾಗಿ ಅನುಭವದಿಂದ ಬಂದು ಎಲ್ಲರಲ್ಲಿಯೂ ಪ್ರಚಾರದಲ್ಲಿದ್ದು ಎಲ್ಲರಿಗೂ ಅರ್ಥವಾಗುತ್ತಿದ್ದುದು ಆಗಿದೆ. ಹೀಗೆ ಅವನು ಜ್ಯೋತಿಷ್ಯದ ಗಣಿತ, ಫಲಶಕುನ ಮುಂತಾದವುಗಳ ಮೇಲೂ ಕೆಲವು ಪದ್ಯಗಳನ್ನು ಬರೆದಿದ್ದಾನೆ. ಇವುಗಳ ಜೊತೆಗೆ ಇವನು ಮಳೆ ಬರುವ ಲಕ್ಷಣ, ಗುರು, ಶನಿ ಮುಂತಾದ ಗ್ರಹಗಳ ವಿಚಾರದಿಂದ ಒದಗುವ ಫಲ ಮುಂತಾದ ಅಂಶಗಳನ್ನು ತಿಳಿಸಿರುವುದನ್ನು ಕಾಣಬಹುದು. ಇವುಗಳಲ್ಲಿ ಮುಖ್ಯವಾಗಿ ಮಳೆ ಬರುವುದರ ಸೂಚನೆಯನ್ನು ಅವಲೋಕಿಸಿದರೆ

ಅಡವಿ ಮೂಡಲು ಮಿಂಚೆ ಪಡುವಲಕೆ ಧನುವೇಳೆ
ಬಡಗಣದ ಗಾಳಿ ಕಡುಬೀಸೆ ಮಳೆಯು ತಾ
ತಡೆಯದಲೆ ಬಕ್ಕು ಸರ್ವಜ್ಞ

ತೆಂಕಲಿಗೆ ಮುಗಿಲಡರೆ ಶಂಕರನ ದೆಸೆ ಮಿಂಚೆ
ಪಂಕಜಾರತಿ ಗುಡಿಗಟ್ಟೆ ಮಳೆಯು ತಾ
ಭೋಂಕನೆ ಬಕ್ಕು ಸರ್ವಜ್ಞ.

ಈ ಸಾಲುಗಳು ಮಳೆಯ ಲಕ್ಷಣವನ್ನು ತಿಳಿಸುವುದರ ಜೊತೆಗೆ ಹುಟ್ಟಿನ ಸ್ವರೂಪವನ್ನು ತಿಳಿಸುತ್ತದೆ. ಆದ್ದರಿಂದಲೇ ಸರ್ವಜ್ಞನನ್ನು ಆಡುಮುಟ್ಟದ ಸೊಪ್ಪಿಲ್ಲ, ಸರ್ವಜ್ಞ ಕೈಯ್ಯಾಡಿಸದ ಕ್ಷೇತ್ರವಿಲ್ಲ ಎಂದು ನಮ್ಮ ವಿದ್ವತ್ ಸಮೂಹವು ಹೇಳಿರುವ ಮಾತು ನಿಜವೆನಿಸುತ್ತದೆ.

`ಉತ್ತರ ಕರ್ನಾಟಕದಲ್ಲಿ ಯುಗಾದಿಯ ಮಾರನೆಯ ದಿನ ಸಂಜೆ ಚಂದ್ರನನ್ನು ನೋಡುವ ಪದ್ಧತಿಯೊಂದಿದೆ. ಅಂದು ಸಂಜೆ ಚಂದ್ರನನ್ನು ನೋಡಿ, ಹಿರಿಯರಿಗೆ ನಮಸ್ಕರಿಸಿ ಆಶೀರ್ವಾದ ಪಡೆಯುವ ರೂಢಿ ಇದೆ. ಚಂದ್ರನು ಯಾವ ಕಡೆ ವಾಲಿದ್ದಾನೆ ಎಂಬುದನ್ನು ಗುರುತಿಸಿ ಆ ವರ್ಷದ ಮಳೆ, ಬೆಳೆಗಳ ಬಗೆಗೆ ನಿರ್ಧರಿಸುವ ರೂಢಿಯಿದೆ'[9]. ಇದೂ ಕೂಡಾ ಮಳೆಯ ಹುಟ್ಟು, ಸ್ವರೂಪ, ಅದರಿಂದಾಗುವ ಲಾಭ, ನಷ್ಟಗಳ ಬಗೆಗೆ ನೇರವಾಗಿ ಹೇಳದಿದ್ದರೂ ಪರೋಕ್ಷವಾಗಿ ಆ ವಿಚಾರಗಳನ್ನು ತಿಳಿಸುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ.

ಮಳೆರಾಯ ಪ್ರಪಂಚದ ಹಲವಾರು ಸಂಸ್ಕೃತಿಗಳಲ್ಲಿ ಬೇರೆ ಬೇರೆ ರೂಪಗಳಲ್ಲಿ ಹಲವಾರು ದೇವತೆಗಳ ರಾಜನಾಗಿದ್ದಾನೆ. ವೈದಿಕ ಸಂಸ್ಕೃತಿಯಲ್ಲಿ ಬರುವ ದೇವೇಂದ್ರ, ರೋಮನ್ನರ ಜ್ಯೂಸ್ ದೇವತೆ ಮಳೆರಾಯನೇ ಆಗಿದ್ದಾನೆ. ಮಾನವನಲ್ಲಿ ವರುಣದೇವನ ಕಲ್ಪನೆ ಬಂದದ್ದೂ ವಿಶಿಷ್ಟ ರೀತಿಯಲ್ಲಿ ಮತ್ತು ಹಿನ್ನಲೆಯಲ್ಲಿ. ಕಾಡುಮೇಡುಗಳಲ್ಲಿ ಅಲೆದು ಜೀವನ ಸಾಗಿಸುತ್ತಿದ್ದ ಆದಿ ಜನಾಂಗಕ್ಕೆ ತಮ್ಮ ಇರುವಿಕೆಯ ಬಗೆಗೂ ಕಲ್ಪನೆ ಇರಲಿಲ್ಲವೆಂದರೆ ಆಶ್ಚರ್ಯಪಡಬೇಕಾಗಿಲ್ಲ. ಮಾನವನ ಬುದ್ಧಿ ವಿಕಾಸವಾದಂತೆ ತನ್ನ ಪರಿಸರದ ಅರಿವು ಅವನಿಗೆ ಆಗಿರಲಿಕ್ಕೆ ಸಾಕು. ತನ್ನ ಜನ್ಮಕ್ಕೆ ಕಾರಣವಾದ ತಾಯಿತಂದೆಗಳನ್ನು ದೇವರೆಂದು ಬಗೆದು ಲಿಂಗದ ರೂಪದಲ್ಲಿ ಪೂಜಿಸತೊಡಗಿದ. ಹುಟ್ಟಿನಿಂದ ಸಾವಿನವರೆಗೆ ಅವನ ಇರುವಿಕೆಯು ಅವಧಿಯಲ್ಲಿ ಬದುಕುಳಿಯುವುದಕ್ಕಾಗಿ ಆಹಾರದ ಅವಶ್ಯಕತೆ ಕಂಡುಬಂತು. ಆಹಾರ ಬೆಳೆಗಳ ಬೆಳವಣಿಗೆಗೆ ಮತ್ತು ತನ್ನ ನಿತ್ಯೋಪಯೋಗಕ್ಕೆ ನೀರು ಸರಬರಾಜು ಮಾಡುವ ಮಳೆರಾಯನಿಗೆ ಕೃತಜ್ಞತೆಯನ್ನು ಸಲ್ಲಿಸಬೇಕಾಗಿ ಬಂದಾಗ ಇಳೆಗೆ ಮಳೆ ತರಿಸುವ ಸೃಷ್ಟಿಯ ಅವ್ಯಕ್ತ ಶಕ್ತಿಯನ್ನೇ ದೇವರು ಎಂದು ಕರೆದು 'ವರುಣ ದೇವನ' ಪೂಜೆ ಮಾಡತೊಡಗಿರಬೇಕು. ಎಲ್ಲ ದೇವತೆಗಳು ನೀರಿನೊಳಗಿಂದಲೇ ಉಗಮಿಸಿರುವುದನ್ನೂ ವೇದಗಳು (ಋಗ್ವೇದ) ಸಾರುತ್ತವೆ. ದೇವತೆಗಳ ಜನಕನೇ ನೀರು ಎಂದಾಗ ನೀರಿಗೆ ಕಾರಣವಾದ ಮಳೆಯನ್ನೇ ಮಹತ್ವದ ದೇವರೆಂದು ಪೂಜಿಸುವ ಪರಿಪಾಠ ಬಂದಿರಬೇಕು. (ಜನಪದದಲ್ಲಿ ಮಳೆರಾಯನ ಮುನಿಸು - ಬಸವರಾಜ ಆಕಳವಾಡಿ) ಈ ಪ್ರಕಾರವಾಗಿ ನಮ್ಮ ಜನಪದರಲ್ಲಿ `ಮಳೆ'ಯ ಹುಟ್ಟಿನ ಕಲ್ಪನೆ ಬೆಳೆದು ಬಂದಿದೆ.

* * * * *

ಅಡಿ ಟಿಪ್ಪಣಿಗಳು

೧. ಜಾನಪದ ಸಮೀಕ್ಷೆ - ''ಜನಪದರ ಮಳೆರಾಜ'' - ಡಿ.ಕೆ. ರಾಜೇಂದ್ರ - ಪುಟ - ೯೩

೨. ಆಕಾಶ ಜಾನಪದ - ಹಂಪ ನಾಗರಾಜಯ್ಯ - ಪುಟ ಸಂಖ್ಯೆ - ೨೧

ಅಧ್ಯಾಯ - ೩

ಮಳೆಯ ನಕ್ಷತ್ರಗಳು

ನಂಬಿಕೆಗಳಿಂದ ಒಂದು ಆಸರೆ, ಒಂದು ಧೈರ್ಯ. ಈ ನಂಬಿಕೆಗಳು ಹುಸಿ ವಿಶ್ವಾಸದಿಂದ ಬಂದಿರಬಹುದು ಅಥವಾ ಅನುಭವದ ಕೆನೆಯಾಗಿ ಮೂಡಿರಲೂ ಬಹುದು. ಎರಡನೆಯ ರೀತಿಯ ಸಂದರ್ಭವಾದರೆ, ಮುಂದೆ ಮಾಡಬೇಕಾದ ಕೆಲಸದ ಬಗ್ಗೆ ಯೋಜನೆ ಹಾಕಿಕೊಳ್ಳಲು ಅನುಕೂಲ.

ಮಳೆ ಎಲ್ಲರಿಗೂ ಬೇಕಾದದ್ದೇ ಆದರೂ, ರೈತನಿಗೂ ಮಳೆಗೂ ಇರುವ ಸಂಬಂಧ ಅತ್ಯಂತ ನಿಕಟವಾದದ್ದು. ದಿನನಿತ್ಯದಲ್ಲಿ ಅವನ ಮೊದಲ ಪ್ರಾರ್ಥನೆ ಮಳೆಯನ್ನು ಕುರಿತು ಹಾಗೂ ಭೂಮಿತಾಯಿಯನ್ನು ಕುರಿತು, ಅವನ ದೃಷ್ಟಿಯಲ್ಲಿ ಮಳೆ ಕೇವಲ ಮಳೆಯಲ್ಲ, ಅದು ಸುವರ್ಣವೃಷ್ಟಿ, ಅಮೃತದಾರೆ. ಮಳೆ ಕೈಕೊಟ್ಟರೆ, ಅದರ ನೇರವಾದ ಪರಿಣಾಮ ರೈತರ ಮೇಲೆ. ಅದು ಮುನಿದಾಗ ಅನೇಕ ವಿಧದಲ್ಲಿ ಅದನ್ನು ಒಲಿಸಿಕೊಳ್ಳಲು ಪ್ರಯತ್ನಿಸುತ್ತಾರೆ, ಒಲಿದಾಗ ಆನಂದದಿಂದ ಕುಣಿದು ಕುಪ್ಪಳಿಸುತ್ತಾರೆ.

"ಮಳೆಗೂ ನಕ್ಷತ್ರಗಳಿಗೂ ಸಂಬಂಧವಿದೆ. ಒಂದೊಂದು ಮಳೆಯನ್ನು ಒಂದೊಂದು ನಕ್ಷತ್ರದ ಹೆಸರಿನಲ್ಲಿ ಕರೆಯುವುದುಂಟು. ಈ ಬಗೆಗೆ ಪುರಾಣವು ಮಾಹಿತಿ ನೀಡುತ್ತದೆ. ಈ ಹಿಂದೆ ಮಳೆ ಹುಟ್ಟಿನ ಕಲ್ಪನೆ ಎಂಬ ೨ನೇ ಅಧ್ಯಾಯದಲ್ಲಿ ನಾನು ಅದನ್ನು ಈ ಮೊದಲೇ ಪ್ರಸ್ತಾಪಿಸಿರುವಂತೆ, ದಕ್ಷನ ೨೭ ಮಂದಿ ಹೆಣ್ಣುಮಕ್ಕಳಲ್ಲಿ ೨೧ ಜನರನ್ನು ಚಂದ್ರ ಮದುವೆಯಾದನೆಂದು, ಆ ಹೆಣ್ಣು ಮಕ್ಕಳೆಲ್ಲ ನಕ್ಷತ್ರಗಳೇ ಆದರು ಎಂದು ತಿಳಿಸಿದ್ದೇನೆ."[೧]

ಮಳೆ ಯಾವಾಗ ಬರುತ್ತದೆ, ಎಷ್ಟು ಕಾಲ ಬರುತ್ತದೆ. ಯಾವ ಯಾವ ದಿನಗಳ ಮಳೆಯ ಬಿರುಸು ಎಷ್ಟೆಷ್ಟು, ನಡುವಿನ ವಿರಾಮಕಾಲವೆಷ್ಟು, ಇಂಥ ಅಂದಾಜುಗಳಿಲ್ಲದೆ ಮಳೆಯನ್ನವಲಂಬಿಸಿದವರ ಕೆಲಸ ಸಾಗದು. ಹೀಗಾಗಿ, ಮನುಷ್ಯ - ವಿಶೇಷವಾಗಿ ರೈತ - ಇಂಥ ಅಂಶಗಳನ್ನೆಲ್ಲಾ ಗಮನಿಸುತ್ತಾ ನಡೆದ. ಋತುಮಾನದ ದಿನಗಳಿಗೂ ಮಳೆಯ ಪ್ರಮಾಣ, ಸ್ವಭಾವದ ಏರಿಳಿತಕ್ಕೂ ಇರುವ ಸಂಬಂಧದ ಒಂದೊಂದೇ ಎಳೆಗಳು ಅವನಿಗೆ ಅನುಭವದ ಫಲವಾಗಿ ದೊರೆಯತೊಡಗಿದವು. ಇದರ ಫಲವಾಗಿ 'ಮಳೆಶಾಸ್ತ್ರ'ವೊಂದು ಮುಂದುವರೆದ ದೇಶಗಳಲ್ಲೂ ಬೆಳೆಯತೊಡಗಿದಂತೆ ಕಾಣುತ್ತದೆ. ಭಾರತದಲ್ಲಿಯಂತೂ ಜ್ಯೋತಿಷ್ಯದೊಂದಿಗೇ ಇದೂ ತಳುಕು ಹಾಕಿಕೊಂಡು ಬೆಳೆದು ಬಂದಿರುವಂತೆ ಕಾಣುತ್ತದೆ. ನಮ್ಮ ಜಾನಪದರ ಮಟ್ಟಕ್ಕೂ ಈ ಲೆಕ್ಕಾಚಾರಗಳು ತಲುಪಿವೆ. ಬಹುಸುಲಭವಾಗಿ ಅವರು 'ಈಗ ... ಇಂಥ ಮಳೆ, ಇದು ಇನ್ನು ಇಷ್ಟು ದಿನ ಇರ್ತವೆ, ಆ ಮೇಲೆ ಇಂಥ ಮಳೆ ಬರ್ತದೆ, ಅದೇನು ಅಷ್ಟು ಜೋರಿನ ಮಳೆ ಅಲ್ಲ' ಎಂದು ಮುಂತಾಗಿ ಹೇಳುವುದನ್ನು ನಾವು ಎಲ್ಲೆಡೆ ಕೇಳಬಹುದು. ಇಂಥ ಲೆಕ್ಕಾಚಾರದ ಆಧಾರದ ಮೇಲೆಯೇ ಹಲವು ಗಾದೆಗಳೂ ರೂಪುಗೊಂಡಿವೆ. ಅವರ ಅನುಭವ ಇದಕ್ಕೆ ಒಂದು ಕಾರಣವಾದರೆ, ಹಿಂದಿನವರು

ಮಾಡಿಟ್ಟ ಲೆಕ್ಕಾಚಾರ ಬಾಯ್ದರೆಯಾಗಿ ಹರಿದು ಬಂದಿರುವುದು ಮತ್ತೊಂದು ಕಾರಣ. ಮಳೆಗಾಗಿ ಜ್ಯೋತಿಷ್ಕರು, ಪುರೋಹಿತರನ್ನು ಸಂಪರ್ಕಿಸಿದಾಗ ತಿಳಿದ ವಿವರಗಳು ಇಂಥವುಗಳಿಂದಾಗಿ ನಮ್ಮ ಸಾಮಾನ್ಯರೂ ಈ ಲೆಕ್ಕವನ್ನು ಸಹಜ ರೀತಿಯಲ್ಲಿ ನೆನಪಿಟ್ಟುಕೊಂಡರೆಂದು ತಿಳಿಯಬಹುದು.

ನಮ್ಮಲ್ಲಿ ಪಂಚಾಂಗದ ಪ್ರಕಾರ ಚೈತ್ರಮಾಸ ಆರಂಭವಾಗಿ ಯುಗಾದಿಯ ನಂತರದ ಅಮಾವಾಸ್ಯೆಯಿಂದ ಹುಣ್ಣಿಮೆಯವರೆಗೆ ಮತ್ತು ಹುಣ್ಣಿಮೆಯಿಂದ ಅಮಾವಾಸ್ಯೆಯವರೆಗೆ ೧೪ ದಿವಸಕ್ಕೊಂದರಂತೆ ಒಟ್ಟು ೨೭ ಮಳೆ ನಕ್ಷತ್ರಗಳು ಬರುತ್ತವೆ. ಅವುಗಳೆಂದರೆ :-

*	ಅಶ್ವಿನಿ	*	ಭರಣಿ
*	ಕೃತಿಕೆ	*	ರೋಹಿಣಿ
*	ಮೃಗಶಿರ	*	ಅರಿದ್ರ
*	ಪುನರ್ವಸು	*	ಪುಷ್ಯ
*	ಆಶ್ಲೆ	*	ಮೃಘ
*	ಹುಬ್ಬೆ	*	ಉತ್ತರೆ
*	ಹಸ್ತ	*	ಚಿತ್ತ
*	ಸ್ವಾತಿ	*	ವಿಶಾಖ
*	ಅನುರಾಧ	*	ಜ್ಯೇಷ್ಠ
*	ಮೂಲ	*	ಪೂರ್ವಾಷಾಢ
*	ಉತ್ತರಾಷಾಢ	*	ಶ್ರವಣ
*	ಧನಿಷ್ಠ	*	ಶತಬಿಷ
*	ಪೂರ್ವಭದ್ರ	*	ಉತ್ತರಾಭಾದ್ರ
*	ರೇವತಿ		

ಇವನ್ನೇ ನಮ್ಮ ರೈತರು 'ಮಳೆಗಳು' ಅಥವಾ ಮಳೆ ನಕ್ಷತ್ರಗಳು ಎಂದು ಕರೆಯುತ್ತಾರೆ. ಈ ನಕ್ಷತ್ರಗಳ ಬಗೆಗೂ ಹಲವಾರು ಗಾದೆಗಳು ನಮ್ಮಲ್ಲಿ ರೂಢಿಯಲ್ಲಿವೆ. ಈ ೨೭ರಲ್ಲಿ ಮೊದಲ ೧೭ ವ್ಯವಸಾಯ ಕ್ಷೇತ್ರದಲ್ಲಿ ಪ್ರಧಾನ ಪಾತ್ರ ವಹಿಸಿವೆ. ಉಳಿದವುಗಳು ಕಾಣಿಸುವುದು ಅಪರೂಪ ಮತ್ತು ಅವುಗಳು ಬಂದರೂ ಅವುಗಳ ಪಾತ್ರ ಕಡಿಮೆ ಮತ್ತು ವ್ಯವಸಾಯದ ದೃಷ್ಟಿಯಿಂದ ಅನುಪಯುಕ್ತವಾದವುಗಳು ಎಂದು ಅಭಿಪ್ರಾಯಪಡುತ್ತಾರೆ. ಸೂರ್ಯ ಒಂದು ನಕ್ಷತ್ರರಾಶಿಯನ್ನು ಪ್ರವೇಶಿಸಿ ಅಲ್ಲಿರುವ ಕಾಲದಲ್ಲಿ ಆಗುವ ಮಳೆಯನ್ನು ಆ ನಕ್ಷತ್ರದ ಮಳೆ ಎನ್ನುತ್ತಾರೆ.

ಅಶ್ವಿನಿಯಿಂದ ಹಿಡಿದು ಸ್ವಾತಿಯ ವರೆಗಿನ ೧೫ ಮಳೆ ನಕ್ಷತ್ರಗಳ ಕಾಲ ಎಂದರೆ -ಚೈತ್ರ ಮಾಸದಿಂದ ಹಿಡಿದು ಕಾರ್ತಿಕದವರೆಗಿನ ಕಾಲ : ಅಂದರೆ ಸುಮಾರು ಏಪ್ರಿಲ್‌ನಿಂದ ಹಿಡಿದು ನವೆಂಬರ್ ವರೆಗಿನದು.

ಆ ನಂತರದಲ್ಲಿ, ಅಂದರೆ ಸ್ವಾತಿ ನಕ್ಷತ್ರದ ಕಾಲದ ನಂತರದಲ್ಲಿ ಮಳೆ ಬಾರದು. (ಚಂಡಮಾರುತದಂತಹ ಕಾರಣದ ವಿನಾ) ಆದ್ದರಿಂದಲೇ ಉತ್ತರ ಕರ್ನಾಟಕದುದ್ದಕ್ಕೂ 'ಸ್ವಾತಿ ಮಳೆ ಆದ ಮ್ಯಾಲ ಯಾತರ ಮಳಿ'[೩] ಎಂಬ ಗಾದೆ ಕೇಳಿ ಬರುತ್ತದೆ. ದಕ್ಷಿಣ ಕರ್ನಾಟಕದೆಡೆಯಲ್ಲಿ ಈ ಅರ್ಥದ ಗಾದೆ ದೊರಕಿಲ್ಲವಾದರೂ ಇಲ್ಲಿಯವರೆಗಿನ ಮಳೆಗಳ ಬಗೆಗೆ ಸಿಗುವಷ್ಟು ಮೆಚ್ಚಿಗೆ ಅನಂತರದ ಮಳೆಗಳ ಬಗ್ಗೆ ಸಿಗುವುದಿಲ್ಲ.

ಈ ೧೫ ಮಳೆ ನಕ್ಷತ್ರಗಳ ಪೈಕಿ ಎಲ್ಲವೂ ಮುಖ್ಯ ಅಲ್ಲ. ಖಚಿತವಾಗಿ ಲೆಕ್ಕಕ್ಕೆ ಹಿಡಿಯುವುದು ಮೊದಲ ಹತ್ತನ್ನು ಮಾತ್ರ. ಅಂದರೆ - ಅಶ್ವಿನಿ, ಭರಣಿ, ಕೃತ್ತಿಕಾ, ರೋಹಿಣಿ, ಮೃಗಶಿರಾ, ಆರ್ದ್ರಾ, ಪುನರ್ವಸು, ಪುಷ್ಯ, ಆಶ್ಲೇಷಾ ಮತ್ತು ಮಘಾ ನಕ್ಷತ್ರಗಳನ್ನು ಇವುಗಳನ್ನು ಮೊದಲ ಐದನ್ನು 'ಮೃಗಪಂಚಕ' ಎಂದೂ (ಬಹುಶಃ 'ಮೃಗಶಿರಾ'ದಲ್ಲಿ ಕೊನೆಗೊಳ್ಳುವುದರಿಂದ) ಉಳಿದ ಐದನ್ನು 'ಮಘುವಂಚಕ' (ಮಘಾದಲ್ಲಿ ಕೊನೆಗೊಳ್ಳುವುದರಿಂದ) ಎಂದೂ ಕರೆಯುತ್ತಾರೆ. ಈ ಎರಡೂ ಶಬ್ದಗಳೂ ಕೇವಲ ಪಂಚಾಂಗದಲ್ಲಷ್ಟೇ ಅಲ್ಲ, ಸಾಮಾನ್ಯ ಹಳ್ಳಿಗರಲ್ಲೂ ರೂಢಿಯಲ್ಲಿವೆ. ಈ ನಕ್ಷತ್ರಗಳ ಮಳೆಯ ಕಾಲ ಎಂದರೆ - ಚೈತ್ರದಿಂದ ಶ್ರಾವಣದ ಕೊನೆಯವರೆಗೆ, ಇದು ಸಾಮಾನ್ಯವಾಗಿ ಏಪ್ರಿಲ್ ಮಧ್ಯದಿಂದ ಆಗಸ್ಟ್ ಕೊನೆಯವರೆಗೆ ಆಗುತ್ತದೆ. ಪ್ರತಿ ಮಳೆ ನಕ್ಷತ್ರದ ಅವಧಿ ಹದಿನಾಲ್ಕು ದಿನಗಳು.

ಒಟ್ಟಿನಲ್ಲಿ ಮಳೆ ಲೆಕ್ಕಾಚಾರದ ಸ್ಥೂಲ ರೂಪ ಹೀಗೆ -

	''ನಕ್ಷತ್ರಗಳು (ಅನುಕ್ರಮರೀತಿಯಲ್ಲಿ)	ಮಳೆಯ ಸಂಬಂಧ
೧-೫	ಅಶ್ವಿನಿ, ಭರಣಿ, ಕೃತ್ತಿಕಾ, ರೋಹಿಣಿ, ಮೃಗಶಿರ.	ಮೃಗಪಂಚಕ
೬- ೧೦	ಅರ್ದ್ರಾ, ಪುನರ್ವಸು, ಪುಷ್ಯ, ಆಶ್ಲೇಷಾ, ಮಘಾ.	ಮಘು ಪಂಚಕ.
೧೧ - ೧೫	ಹುಬ್ಬ, ಉತ್ತರಾ, ಹಸ್ತ, ಚಿತ್ತ, ಸ್ವಾತಿ.	ಕೊನೆಯ ಐದು ಮಳೆ ನಕ್ಷತ್ರಗಳು (ಇವುಗಳಲ್ಲಿ ಎಲ್ಲ ಮಳೆ ಖಚಿತವಿಲ್ಲ. ಆದರೆ, ಕೆಲವು ಮಾತ್ರ ಖಚಿತ. ಅದು ಪ್ರದೇಶವಾರಾಗಿ ಬೇರೆಯಾಗುತ್ತೆ.)
೧೬ - ೨೭	ವಿಶಾಖಾ, ಅನುರಾಧಾ, ಜೇಷ್ಠ, ಮೂಲಾ, ಪೂರ್ವಾಷಾಢ, ಉತ್ತರಾಷಾಢ, ಶ್ರಾವಣ, ಧನಿಷ್ಠಾ, ಶತತಾರಾ, ಪೂರ್ವ, ಭಾದ್ರ, ಉತ್ತರ ಭಾದ್ರ, ರೇವತಿ.	ವಾಸ್ತವವಾಗಿ ಇವು ಮಳೆ ನಕ್ಷತ್ರಗಳಲ್ಲ. ಈ ಕಾಲದಲ್ಲಿ ಮಳೆಯಾಗುವ ಸಂಭವ ತೀರಾ ಕಡಿಮೆ.''[೨]

ಮಳೆಯ ಬರುವಿಕೆ ಹಾಗೂ ಸ್ವರೂಪವನ್ನು ಕುರಿತಂತೆ ನಮ್ಮವರು ಉತ್ತಮ ಚಿಂತನೆ ಹಾಗೂ ಅಭ್ಯಾಸ ನಡೆಸಿದ್ದರೆಂಬುದಕ್ಕೆ ಮೈಸೂರು ಜಿಲ್ಲೆಯ ವ್ಯಾಪ್ತಿಯಲ್ಲಿ ರಚನೆಗೊಂಡಿರುವ 'ರಟ್ಟಮತ' ದಂತಹ ಗ್ರಂಥಗಳು ಆಧಾರವಾಗಿವೆ.

ರೈತನು ಮಳೆಗಾಗಿ ಹಲವಾರು ರೀತಿಯಲ್ಲಿ ಹಂಬಲಿಸುತ್ತಾನೆ.

'ಮಳೆಯಪ್ಪ ಮಳಿರಾಜ ಕರಿಯುತ್ತಾರೋ ನಿನ್ನ
ಮೊದಲು ಕೂರೀಗೆ ರೈತರು ! ಹೊಲದಾಗ
ಫಲವೆದ್ದು ಕೈಯ ಮುಗಿದಾವ"

ಬಾಬಾರೋ ಮಳಿರಾಜ ಹೊಲದ ಬೆಳೆ ಕರಿದಾವೊ
ತೆನಿಯೆದ್ದು ಕೈಯ ಮುಗಿದಾವೋ| ಬೆಳಗಾನು
ಲೋಕದೊಳು ರಾಜ ತೆನಿರಾಜ"೨

ಪ್ರತಿಯೊಂದು ಮಳೆಯ ಲಕ್ಷಣಗಳನ್ನು ರೈತ ಗುರುತಿಸಿದ್ದಾನೆ. ಅದರ ಸ್ವರೂಪ, ರಭಸ, ಭರಾಟೆ, ಮಂದತನ, ಸುರಿಯುವ ತಕ್ಷಣ, ಅದರಿಂದ ಆಗಬಹುದಾದ ಲಾಭ ಮತ್ತು ಹಾನಿ - ಇವುಗಳನ್ನು ಅವನು ಪಟ್ಟಿ ಮಾಡುವ, ತಿಳಿಸುವ ರೀತಿ ಅವನ ಮೌಖಿಕ ಪರಂಪರೆಯ ಅಪಾರ ಅನುಭವದ ಪ್ರತೀಕವಾಗಿದೆ ಎಂದರೆ ತಪ್ಪಾಗಲಾರದು. ವ್ಯವಸಾಯಶಾಸ್ತ್ರದ ಗುಟ್ಟನ್ನು ಮತ್ತು ಮಳೆಯ ಜೊತೆಗಿನ ಅದರ ಸಂಬಂಧವನ್ನು ತನ್ನ ಮುಂದಿನ ಪೀಳಿಗೆಗೆ ವರ್ಗಾಯಿಸುವ ರೀತಿ ಅನನ್ಯವಾಗಿದೆ. ಅವನು ಪ್ರತಿ ಮಳೆಗೆ ಸಂಬಂಧಿಸಿದಂತೆ ಹೇಳುವ ಗಾದೆ ಮಾತುಗಳು ಅನುಭವದ ಮೊತ್ತದಂತಿದೆ. ಕೆಳಗಿನ ರೀತಿ ಅವುಗಳನ್ನು ವಿಶ್ಲೇಷಿಸಬಹುದಾಗಿದೆ.

ಜನಪದರ ದೃಷ್ಟಿಯಲ್ಲಿ ಮಳೆ ನಕ್ಷತ್ರಗಳ ವಿವೇಚನೆ ಈ ಮುಂದಿನಂತಿದೆ.

೧. ಅಶ್ವಿನಿ ಮಳೆ ನಕ್ಷತ್ರ :-

ಪ್ರತಿ ವರ್ಷದ ಚಾಂದ್ರಮಾನ ಯುಗಾದಿಯ ದಿವಸದಿಂದ ಮಳೆಯ ನಕ್ಷತ್ರಗಳ ಲೆಕ್ಕ ಆರಂಭವಾಗುತ್ತದೆ. ಇದು ವರ್ಷದ ಬೇಸಿಗೆಯ ಧಗೆ ಕಳೆವ ಮೊದಲ ಮಳೆ. ನೆಲ ತಂಪಿಗಾಗಿ ಬಾಯಿಬಾಯಿಬಿಡುವ ಸಂದರ್ಭದಲ್ಲಿ ಚೆದುರಿದಂತೆ ಈ ಮಳೆ ಬೀಳುತ್ತದೆ. ಆದರೆ, ಇದರಿಂದ ನೆಲ ಸ್ವಲ್ಪ ತಂಪಾಗುವುದಲ್ಲದೆ ಬೇಸಾಯಕ್ಕೆ ಹೆಚ್ಚಿನ ಪ್ರಯೋಜನವಾಗುವಂತೆ ಕಾಣದು. ಯಾಕೆಂದರೆ ಬಿದ್ದ ನೀರನ್ನೆಲ್ಲಾ ನೆಲ ಬರಗೆಟ್ಟ ರಾಕ್ಷಸನಂತೆ ಹೀರಿಕೊಂಡು ಬಿಡುತ್ತದೆ. ಆ ನೀರು ಒಡಲಾಳಕ್ಕೆ ಇಳಿಯುತ್ತದೆ. ಮೇಲ್ಮೈನಲ್ಲಿ ಏನೂ ಉಳಿಯುವುದಿಲ್ಲ. ಆದ್ದರಿಂದಲೇ

* 'ಅಶ್ವಿನಿ ಮಳೆ ಬಂದರೆ ಅಳೋ ಮಕ್ಕಳಿಗೂ ಹಾಲಿಲ್ಲ'

* 'ಅಶ್ವಿನಿ ಬಂದರೆ ಅಡಿಕೆ ತೆಂಗು ಹುಸಿಯಾಕ್ಕವೆ'
* 'ಅಸೂನಿ ಮಳೆ ಅದರ ಸಿಸುಗೋಳಿಗೂ ನೀರು ಸಿಗೋದಿಲ್ಲ'. (ಶಿರಹಟ್ಟಿ - ಧಾರವಾಡ)
* 'ಅಶ್ವಿನಿ ಸಸ್ಯನಾಶಿನಿ'.
* 'ಅಶ್ವಿನಿ ಮಳೆ ಬಿದ್ರೆ ಅಡಿಕೆ ತೆಂಗಿಗೆ ಕೇಡು'.
* 'ಅಶ್ವಿನಿ ಮಳೆ ಅರಿಸಿನಕ್ಕೆ ಮೇಲು,ಅಡಿಕೆ ತೆಂಗಿಗೆ ಕೇಡು'.
* 'ಲಶ್ವಿನಿ ಮಳೆಯಲ್ಲಿ ಬಿತ್ತಿದರೆ ಸರ್ವನಾಶ'.
* 'ಅಶ್ವಿನಿಯೋ ನಾಶಿನಿಯೋ'? (ಅಶ್ವಿನಿಯೋ ನಾಶವೋ - ಪಾಠಾಂ)
* 'ಅಶ್ವಿನಿ ಪೊಡತೆ ಅಶ್ವೀಸಂಚಿ ಕೂಡ ನೀಂಡದು' (ತುಳು ಕಾರ್ಕಳ. ದ. ಕ.) (ಅಶ್ವಿನಿ ಬಿದ್ದು ಹೋದ್ರೆ ಆ ಮೇಲಿನ ಮಳೆಗಳೂ ಇಲ್ಲ)

ಎಂಬ ಗಾದೆ ಮಾತುಗಳು ರೂಢಿಲ್ಲಿವೆ. ಈ ವೇಳೆಗೆ ಭೂಮಿ ಬಿತ್ತನೆಗೆ ಹಸನಾಗಿರುತ್ತದೆ. ಈ ಮಳೆ ಬಂದರೆ ಮುದ್ದೆಯಂತಾಗಿ ಬಿತ್ತನೆ ಕಾರ್ಯ ನಿಂತು ಹೋಗುತ್ತದೆ. ಇಲ್ಲವೆ ಈ ಮಳೆಯ ಆರ್ಭಟದಿಂದ ಭೂಮಿಯ ಫಲವತ್ತತೆ ಕೊಚ್ಚಿ ಹೋಗುತ್ತದೆ ಎಂಬ ಮಾತುಗಳಿವೆ. ಇಷ್ಟಲ್ಲದೆ ಈ ಮಳೆ ಅರಿಷಣಕ್ಕೆ ಮಾತ್ರ ಒಳ್ಳೆಯದೆಂದೂ ಮಿಕ್ಕೆಲ್ಲಾ ಬೆಳೆಗಳಿಗೂ ಕೇಡೆಂದೂ ಜನರ ನಂಬಿಕೆ.

ಇಷ್ಟೆಲ್ಲ ಕಾರಣ ಆದರೂ ಅಶ್ವಿನಿ ಮಳೆ ಬರಲೇಬೇಕೆಂದು ಜನ ಬಯಸುತ್ತಾರೆ. 'ಅಶ್ವಿನಿ ಬಿದ್ದು ಹೋದ್ರೆ ಆ ಮೇಲಿನ ಮಳೆಗಳೂ ಇಲ್ಲ' ಎಂಬುದು ಮೈಸೂರು ಭಾಗದ ಜನರ ನಂಬಿಕೆ. ಆದರೆ ಈ ಮಳೆ ಬರಲು 'ಹಸನಾಗಿ ಬೆಳೆಯದೀ ಜಗವು, ಹಸಿವಿಗೆ ತೃಣವಿಲ್ಲ. ಪ್ರಜರಿಗೆ ಲೇಸಿಲ್ಲ. ಜಗದೊಳು ಸುಖ - ದುಃಖ ಮಿಶ್ರ ಫಲವು ಎಂದು 'ರಟ್ಟ ಮತ' ಹೇಳುತ್ತದೆ. (ರಟ್ಟಮತಶಾಸ್ತ್ರ - ಬಸವಯ್ಯ ಶಾಸ್ತ್ರಿ)

೨. ಭರಣಿ ಮಳೆ ನಕ್ಷತ್ರ :-

ಜಾನಪದರಿಂದಲೂ, ಜ್ಯೋತಿಷ್ಯರಿಂದಲೂ ಮುಕ್ತ ಕಂಠದಿಂದ ಮೆಚ್ಚಿಕೆಗೊಳಗಾಗಿರುವ ಮಳೆ 'ಭರಣಿ'

* 'ಭರಣಿ ಮಳೆ ಬಂದು ಧರಣಿ ತಂಪಾಯ್ತು,'[೬]
* 'ಭರಣಿ ಸುರಿದು ಧರಣಿ ಬದುಕಿತು.'[೭]
* 'ಭರಣಿ ಮಳೆ ಧರಗೆ ಗಂಡ.'[೮]
* 'ಭರಣಿ ಮಳೆ ಧರಣೀಗೊಳ್ಳೇದು'. (ಮಧುಗಿರಿ - ತುಮಕೂರು)
* 'ಭರಣಿ, ಬಂಗಾರದ ಕರಣಿ'.
* 'ಭರಣಿ ಮಳೆ ಬಂದು ಧರಣಿ ತಂಪಾಯ್ತು'.
* 'ಭರಣಿ ಸುರಿದು ಧರಣಿ ಬದುಕಿತು'.
* 'ಭರಣಿ ಮಳೆ ಧರೆಗೆ ಗಂಡ'.

* `ಭರಣಿ ಬಂದರೆ ಧರಣಿ ಎಲ್ಲಾ ಬೆಳೆ'. (ಗೌರಿಬಿದನೂರು - ಕೋಲಾರ)
* `ಭರಣಿ ವಸ್ತೆ ಧರಣಿ ಪೂಂಡನು` (ತೆಲುಗು) - ಗುಡಿಬಂಡೆ, ಕೋಲಾರ)
* 'ಭರಣಿ ಮಳೆ, ಚಿನ್ನದ ಮಳೆ' (ಹೊನ್ನಾಳಿ ; ಶಿವಮೊಗ್ಗ)

ಒಟ್ಟಾರೆ ಈ ಮಳೆ ಜಗತ್ತನ್ನು ಬಂಗಾರದ ಕರಂಡವನ್ನಾಗಿ ಮಾಡುವುದೆಂದು ನಮ್ಮ ಜನ ಭಾವಿಸಿದ್ದಾರೆ. ಎಲ್ಲ ವಿಧದ ಬೆಳೆಗಳಿಗೂ ಇದು ಒಳಿತೆಂದೂ ಭಾವಿಸಲಾಗಿದೆ.

ವಾಸ್ತವವಾಗಿ ಈ ಮಳೆ ಭೂಮಿಯನ್ನು ಕೃಷಿ ಕಾರ್ಯಕ್ಕೆ ಹದಗೊಳಿಸುವುದಕ್ಕಷ್ಟೇ ಉಪಯುಕ್ತವಿರುವಂತೆ ಕಾಣುತ್ತದೆ. ಯಾಕೆಂದರೆ 'ಮೃಗ ಪಂಚಕ'ದ ಎರಡನೆಯ ಮಳೆಯಾದ ಈ ಮಳೆ ಬೀಳಬೇಕಾದ್ದು ಏಪ್ರಿಲ್ ಕೊನೆಯ ದಿನಗಳು ಅಥವಾ ಮೇ ಮೊದಲವಾರ ಈ ದಿನಗಳಲ್ಲಿ ಜಮೀನು ಬರಿದಾಗಿರುತ್ತವೆ ಅಥವಾ ಬೇಸಿಗೆಯ ಬೆಳೆ ತನ್ನ ಕೊನೆಯ ಹಂತದಲ್ಲಿರುತ್ತದೆ. ಆ ದಿನಗಳಲ್ಲಿ ಮಳೆ ಬಂದರೆ ನೆಲವನ್ನು ಹಸನುಗೊಳಿಸಲು ಸಾಧ್ಯ. ಬೇಸಿಗೆ ಬೆಳೆ ಇರುವೆಡೆಗಳಲ್ಲಿ ಈ ಮಳೆ ಬಾರದಿದ್ದರೆ ಬೆಳೆ ವಿಫಲಗೊಳ್ಳುವುದೂ ಸಾಧ್ಯ.

ಭರಣಿ ಮಳೆಯಲ್ಲಿ ಭತ್ತದ ಬಿತ್ತನೆ ಶ್ರೇಷ್ಠ

ಭರಣಿ, ಬಂಗಾರದ ಕರಣಿ ಎಂಬ ಗಾದೆ ಮಾತುಗಳು ಈ ಮಳೆಯ ನಕ್ಷತ್ರ ಕುರಿತಂತೆ ಜಾನಪದರಲ್ಲಿವೆ. ಭರಣಿ ಮಳೆಯಲ್ಲಿ ಭತ್ತದ ಬಿತ್ತನೆ ಶ್ರೇಷ್ಠ ಎಂದು ಅವರ ತಿಳುವಳಿಕೆಯಾಗಿದೆ.

೩. ಕೃತ್ತಿಕೆ ನಕ್ಷತ್ರ :-

ಈ ಮಳೆ ಹದವಾದ ಮಳೆಯಲ್ಲ, ಬೆದೆ ಮಳೆಯಲ್ಲ ಎನ್ನುವುದು ಜಾನಪದರ ಕಲ್ಪನೆ. ಈ ಮಳೆ ಕುರಿತಂತೆ ಮಹತ್ವದ ಗಾದೆಗಳು ದೊರೆತಿಲ್ಲ. ಆದರೂ ಕೆಲವು ಗಾದೆ ಮಾತುಗಳನ್ನು ನಮ್ಮ ಜನಪದರು ನುಡಿದಿರುವುದನ್ನು ನಾವು ಕಾಣಬಹುದು. ಅವುಗಳೆಂದರೆ

* 'ಕೃತ್ತಿಗೆ ಮಳೆ ಬೀಳದೆ ಇದ್ದರೆ ಬಾಯಿಗೆ ಮೃತ್ತಿಕೆ'.
* 'ಕರ್ತಕೀ ಮಳೇನ ಕೇಳವಕ್ಕ ಇಲ್ಲ'[೧೧] (ಧಾರವಾಡದ ಕಡೆ)*
* 'ಕರ್ತಕೀ ಮಳೇನ ಕೇಳವರು ಇಲ್ಲ' (ಧಾರವಾಡ)
* 'ಕೃತ್ತಿಕೆ, ಬೀಳ್ದಿದ್ರೆ ಮೃತ್ತಿಕೆ'.
* 'ಕೃತ್ತಿಕೆಗೆ ಕುರುಹು ಗಾಳಿ'.

ಆದರೆ ರಟ್ಟಮತದ ಪ್ರಕಾರ ಈ ಮಳೆಯೂ ಎಲ್ಲ ಧಾನ್ಯಗಳಿಗೂ ಒಳ್ಳೆಯದು ಹಾಗೂ ಕಾಡಿನಲ್ಲಿ ಹುಲ್ಲು ಸಮೃದ್ಧವಾಗಿ ಬೆಳೆದು ಪಶುಗಳಿಗೂ ಒಳಿತನ್ನುಂಟುಮಾಡುವ ಮಳೆ ಇದಾಗಿದೆ.

೪. ರೋಹಿಣಿ ಮಳೆ ನಕ್ಷತ್ರ :-

ಸಾಮಾನ್ಯವಾಗಿ ಮೇ ಕೊನೇ ವಾರದಲ್ಲಿ ಬರುವ ಮಳೆ ಇದು. ಸಾಕಷ್ಟು ಪ್ರಮಾಣದಲ್ಲಿ ಬೀಳುವ, ಬೀಳಬೇಕಾದ ಮಳೆ. ಎಲ್ಲೆಡೆ ಬಿತ್ತನೆಗೆ ಸಿದ್ಧಮಾಡಿಕೊಂಡಿರುವ ಕಾಲವಿದು. ಈ ಮಳೆಯಾಗದಿದ್ರೆ ಬಿತ್ತನೆಗೆ ತಡೆ. ಸರಿಯಾಗಿ ಆಯ್ತೆಂದರೆ ಫಸಲು ಚೆನ್ನವೆಂದು ಜನರ ವಿಶ್ವಾಸ. ಸಾಮಾನ್ಯವಾಗಿ ಈ ಮಳೆ ದಿನಗಳಲ್ಲಿ ಬೀಜ ಬಿತ್ತಿದರೆ ರೋಗವಿಲ್ಲವೆಂದು ನಂಬಿಕೆ ಪ್ರಚಲಿತವಾಗಿದೆ.

ವ್ಯವಸಾಯ ನಿಜವಾಗಿಯು ಪ್ರಾರಂಭವಾಗುವುದು, ಭರದಿಂದ ಸಾಗುವುದು. ಈ ಮಳೆಯಿಂದಲೇ. 'ರೋಹಿಣಿ ಭಿತ್ತಿದರೆ ಓಣಿ ತುಂಬಾ ಜೋಳ. ರೋಹಿಣಿ ಮಳೆಯಲ್ಲಿ ಊರೆಲ್ಲಾ ಕೆಸರು. ರೋಹಿಣಿ ಮಳೆಗೆ ಓಣಿಯೆಲ್ಲಾ ಹೊಳೆ' ಮುಂತಾದ ಗಾದೆ ಮಾತುಗಳಿವೆ.

ರಟ್ಟಮತವು ಈ ಮಳೆ ಏಕದಳ, ದ್ವಿದಳ ಧಾನ್ಯಗಳಿಗೆ ಒಳಿತೆಂದೂ ಆದರೆ, ಜನರಲ್ಲಿ ಮನಶಾಂತಿ ಒಂದೇ ಮಟ್ಟದಲ್ಲಿ ಉಳಿಯದೆಂದೂ, ಪಶು - ಪಕ್ಷಿಗಳಿಗೆ ರೋಗಭಯವೆಂದೂ ಅಭಿಪ್ರಾಯಪಡುತ್ತವೆ. ಇಲ್ಲಿಯವರೆಗೂ ಹೊಳೆಗಳಲ್ಲಿ ನೀರು ಹೆಚ್ಚಿನ ಪ್ರಮಾಣದಲ್ಲಿಲ್ಲದೆ ಇದ್ದು ಈಗ ದೋಣಿ ಹಾಕುವುದು ಅಗತ್ಯವಾಗುವುದೆಂದೂ ಉತ್ತರ ಕನ್ನಡ ಜಿಲ್ಲೆಯ ನಂಬಿಕೆ.

ಈ ಮಳೆ ಕುರಿತ ಗಾದೆ ಮಾತುಗಳು ಕೆಳಗಿನಂತಿವೆ :-

* 'ರೋಹಿಣಿ ಮಳೇಲಿ ದೋಣಿ ಹಾಕೋದು'. (ಹೊನ್ನಾವರ - ಉ. ಕ.)
* 'ರೋಹಿಣಿ ಮಳೇಗೆ ಓಣೆಲ್ಲಾ ಜ್ವಾಳ' (ಬಿಜಾಪುರ - ಧಾರವಾಡ), (ಓಣೆಲ್ಲಾ ಹೊಳೆ - ಪಾಠಾಂ, ಶಿವಮೊಗ್ಗ)
* 'ರೋಹಿಣಿ ಮಳೇಲಿ ಊರೆಲ್ಲಾ ಕೆಸರು'.
* 'ರೋಣಿ ಮಳೇಲಿ ಬಿತ್ತಿದ್ರೆ ರೋಗ ಇಲ್ಲ'. (ಗೌರಿಬಿದನೂರು ; ಕೋಲಾರ)

೫. ಮೃಗಶಿರಾ ಮಳೆ ನಕ್ಷತ್ರ :-

* ಮೃಗಶಿರಾ ಮಳೆಯಲ್ಲಿ ಮಿಸುಗಾಡದೆ ಹೊಳೆಬಂತು
* ಮೃಗಶಿರಾ ಮಳೆ ಮೃಗಗಳಿಗೆ ಸೆರೆ
* ''ಮೃಗಶಿರಾ ಮಳೆ ಮಿಂಚಬಾರದು. ಮಿಂಚಿದರೆ ಮೂರ್ ಮಳೆ''[೧೧]
* ಮಿಕ್ಕ ಎಳ್ಳು, ಮೃಗಶಿರೇಲಿ ಬಿತ್ತು.
* ಬತ್ತದ ನೆಲವನ್ನು ಮೃಗಶಿರೆಲೀ ಬಿತ್ತು.

ಎಂಬ ಗಾದೆ ಮಾತುಗಳು ಮೃಗಶಿರವನ್ನು ಕುರಿತಂತೆ ಜನಪದರಲ್ಲಿವೆ. ಒಕ್ಕಲಿಗನ ಲೆಕ್ಕದಲ್ಲಿ ಇದು ಅಮೃತ ಮಳೆ. ಈ ಮಳೆ ಬಂದರೆ ಮುಂದಿನ ನಾಲ್ಕು ಮಳೆಗಳು ಖಚಿತ. ಈ ಮಳೆ ಬರುವಾಗ ಮಿಂಚಬಾರದು ಎಂಬ ನಂಬಿಕೆಯೊಂದು ಜನಪದರಲ್ಲಿದೆ. ಈ ಮಳೆ ಎಳ್ಳು, ಭತ್ತಗಳಿಗೆ ಒಳ್ಳೆಯದೆಂದು ನಂಬಿಕೆ. ತುಸು ಹೆಚ್ಚಾಗಿ ಬರುವುದೆಂಬ ಕಾರಣದಂದಲೋ ಏನೋ ಇದು ಮೃಗಗಳನ್ನು ಸೆರೆ ಹಾಕುವುದೆಂದು ಗಾದೆ ಮಾತು ಹುಟ್ಟಿದೆ. ಈ ದಿನಗಳಲ್ಲಿ ಪಯಿರನ್ನು ದನಗಳು ಮೇಯ್ದರೆ ನಷ್ಟವೇನಿಲ್ಲವೆಂದು ಉತ್ತರ ಕನ್ನಡ ಜಿಲ್ಲೆಯ ನಂಬಿಕೆ. ಈ ಮಳೆ ಗಿಡಗಳ ಬೆಳವಣಿಗೆಗೆ ಉತ್ತಮವೆಂಬ ನಂಬಿಕೆ ಇದ್ದು, ಹೊಸ ಹೂ ಗಿಡಗಳನ್ನು ನೆಡಲು, ಇರುವ ಹೂ ಗಿಡಗಳ ಟೊಂಗೆಗಳನ್ನು ಕತ್ತರಿಸಲು ಈ ದಿನಗಳನ್ನಾಯ್ದುಕೊಳ್ಳುತ್ತಾರೆ.

ಮೃಗಶಿರಾ ಮಳೆಯ ಒಂದು ಮತ್ತು ನಾಲ್ಕನೆಯ ಚರಣಗಳಲ್ಲಿ ಮಿಂಚು ಕಾಣಿಸಿದರೆ ಮುಂದಿನ ಮಳೆಗಳೆಲ್ಲವು ಸುಸೂತ್ರವಾಗುವುದಂತೆ. ಆದರೆ, ಒಂದನೆಯ ಚರಣದಲ್ಲಿ ಮಾತ್ರ ಮಿಂಚಿ, ನಾಲ್ಕನೆಯದರಲ್ಲಿ ಮಿಂಚದೆ ಇದ್ದರೆ ಮುಂದಿನ ಮೂರು ಮಳೆಗಳು (ಅರಿದ್ರ, ಪುನರ್ವಸು, ಪುಷ್ಯ) ಹುಸಿಯಾಗುತ್ತವೆ. ಎರಡು, ಮೂರನೆಯ ಚರಣಗಳೆರಡರಲ್ಲೂ ಕಾಣಿಸಿದರೆ ತೊಂದರೆ ಇಲ್ಲ. ಆದರೆ ಎರಡನೆಯದರಲ್ಲಿ ಮಿಂಚಿ, ಮೂರನೆಯ ಚರಣದಲ್ಲಿ ಮಿಂಚದೆ ಮುಂದೆ ನಾಲ್ಕನೆಯದರಲ್ಲಿ ಮಿಂಚಿದರೆ ಅರಿದ್ರಾ, ಪುನರ್ವಸು ಮಳೆಗಳು ಬಾರವು. ಮೂರನೇ ಚರಣದಲ್ಲಿ ಮಿಂಚಿ ನಾಲ್ಕನೆಯದರಲ್ಲಿ ಮಿಂಚದೆ ಇದ್ದರೆ ಒಂದು ತಿಂಗಳು ಮಳೆಯಾಗದಂತೆ, ೩ ಮತ್ತು ೪ನೆಯ ಚರಣದಲ್ಲಿ ಮಾತ್ರ ಮಿಂಚಿದರೆ ಮುಂದಿನ ಮಳೆಗಳಲ್ಲಿ ತುಂಡು ತುಂಡು. ಈ ಮಳೆಯ ಇಡೀ ಅವಧಿಯಲ್ಲಿ ಮಿಂಚದೇ ಇದ್ದರೂ ಏನೂ ತೊಂದರೆ ಇಲ್ಲ. ಇದು ಈ ಮಳೆಯ ಅವಧಿಯ ಮಿಂಚುವಿಕೆಯ ಫಲ ಕುರಿತು ರಟ್ಟಮತ ಗ್ರಂಥ ಹೇಳುವ ಮಾತು.

೬. ಅರಿದ್ರಾ ಮಳೆ ನಕ್ಷತ್ರ :-

ಇದು ಮದುವೆ ಋತುವಿನ ಕೊನೆಯ ಮಳೆ. ಈ ಮಳೆಯ ನಂತರ ಪುನಃ ದೀಪಾವಳಿವರೆಗೆ ಮದುವೆ ಮುಹೂರ್ತಗಳು ಇರುವುದಿಲ್ಲ. ಆದ್ದರಿಂದಲೇ 'ಅದ್ರ್ರಾ ಮಳೆಗೆ ಅದ್ದೋನೇ ಗಂಡ'[೧೨] ಎಂಬ ಗಾದೆ ಚಾಲ್ತಿಗೆ ಬಂದಿದ್ದೆ. ಈ ಮಳೆಯಂತೆ ಮುಂದಿನ ಆರೂ ಮಳೆಗಳು ಬರುತ್ತವೆ ಎಂಬುದು ಉತ್ತರ ಕನ್ನಡದ ನಂಬಿಕೆ. ಬೆಳಗಾಂ ಜಿಲ್ಲೆಯ ಗಡಿಭಾಗಗಳಲ್ಲಿ ಈ ಮಳೆಯ ಆರಂಭದಲ್ಲಿ ಗುಡುಗು ಮಿಂಚುಗಳು ಶಬ್ದವಾದರೆ ಮುಂದಿನ ಆರೂ ಮಳೆಗಳು ಕೈಕೊಡುತ್ತವೆಂದೂ ನಂಬಿಕೆ ಇದೆ.

"ಈ ಮಳೆಗೆ ಬೆದೆ ಮಳೆ ಎಂದು ಮೈಸೂರಿನ ಭಾಗದಲ್ಲಿ ಕರೆಯುತ್ತಾರೆ. ಮಲೆನಾಡಿನ ಭಾಗದಲ್ಲಿ ಈ ಮಳೆಯಿಂದ ಬಿರುಸಾದ ಮಳೆಗಾಲ ಆರಂಭ. ಅದಕ್ಕೆ ಸ್ವಾಗತ ಕೋರುವ 'ಮಳೆ ಹಬ್ಬ'ದ ಆಚರಣೆಯೊಂದು ಸಾಗರ ತಾಲ್ಲೂಕಿನ (ಶಿವಮೊಗ್ಗ ಜಿಲ್ಲೆ) ಹಾಗೂ ಅದರ ಮಗ್ಗುಲಿನ ಸಿದ್ದಾಪುರ ತಾಲ್ಲೂಕಿನ ದೀವರಗಳು ಆಚರಿಸುತ್ತಾರೆ."[೧೩]

ಅರಿದ್ರಾಮಳೆ ಬರುವ ಸಂದರ್ಭದಲ್ಲಿ ಬೀಸುವ ಗಾಳಿಯನ್ನು 'ಆದ್ರಿಗಾಳಿ' ಎಂದು ಕರೆಯುತ್ತೇವೆ. ಇದು ತುಂಬಾ ಶೀತದಿಂದ ಕೂಡಿರುವ ಗಾಳಿ. ಅದಕ್ಕಾಗಿಯೇ ಮೈಸೂರಿನ ಹೆಚ್.ಡಿ. ಕೋಟೆಯ ಭಾಗದಲ್ಲಿ 'ಅದ್ರಿಗಾಳಿ ಬೀಸಿ ಅಳ್ಳಳ್ಳಿ ಮೇಲೆ ಹೆಚ್ಚುವಾಗ ಹಾಳ್ ನನ್ ಜೀವ ಹೆಣ್ಣಾಗಾದ್ರೂ ಹುಟ್ಟಬಾರದಿತ್ತೆ' - ಎಂಬ ಗಾದೆಯೊಂದು ಬಳಕೆಯಲ್ಲಿದೆ. ಒಟ್ಟಿನಲ್ಲಿ ಅರಿದ್ರಾಮಳೆ ವ್ಯವಸಾಯದ ಯಶಸ್ಸಿಗೆ ಮುಖ್ಯವಾದುದು. ಇದನ್ನು ಕುರಿತ ಎಲ್ಲ ಗಾದೆಗಳೂ ಜನಶ್ರುತಿಗಳೂ ಈ ಅಂಶವನ್ನೇ ಸಮರ್ಥಿಸುತ್ತದೆ. ರಾಗಿ, ಅವರೆ, ಅಲಸಂದೆ, ಹೆಸರುಕಾಳು, ಶೇಂಗಾ, ಇತ್ಯಾದಿ ಬೆಳೆಗಳಲ್ಲಿ ಈ ಮಳೆಯ ಪಾತ್ರ ಪ್ರಧಾನವಾದುದು.

* 'ಆದ್ರಿ ಮಳೆಗೆ ಆರು ಕಾಯಿ ಹೆಚ್ಚು'
* 'ಅರಿದ್ರ ಮಳೆ ಬಂದ್ರೆ ದರಿದ್ರ ಪರಿಹಾರ'
* 'ಅದ್ರೆ ಅರಿದ್ರ ಇಲ್ಲದಿದ್ದರೆ ದರಿದ್ರ'
* 'ಅದ್ರಿ ಮಳೆ ಹೊಯ್ದರೆ ಬೆಳೆ'
* 'ಅರ್ದ್ರಾ ಮಳೆ ಆದರೆ ಹಿರಿಯ ಸೊಸೆ ನಡೆದಂತೆ'
* ''ಅದ್ರ ಮಳೆ ಅದ್ದೂರಿ ಮಳೆ''[೧೪]
* 'ಅದ್ರಿ ಮಳೆ ಲೋಕಕ್ಕೆ ಆರಂಭ'
* 'ಅರಿದ್ರ ಮಳೆ ಗುಡುಗಿದರೆ ಆರು ಮಳೆ ಹೋಯ್ತು'
* 'ಅರಿದ್ರಾ ಮಳೇಗೆ ಆದೋನೇ ಗಂಡ'. (ಹೊನ್ನಾವರ ಉ. ಕ.)
* 'ಆದರ ಆರಿದ್ರಾ, ಆಗದಿದ್ದರ ದರಿದ್ರ' (ಧಾರವಾಡ) (ಅದ್ರೆ ಆರಿದ್ರ, ಇಲ್ಲದಿದ್ದರೆ ದರಿದ್ರ - ಪಾಠಾಂ)
* 'ಆರ್ದ್ರೆ ಹಾಂಗೆ ಮುಂದಿನ ಆರು ನಕ್ಷತ್ರ' (ಉತ್ತರ ಕನ್ನಡ)
* 'ಆದ್ರೆ ಮಳೆ, ಹೂದರೆ (ಹೂ ಬಿಟ್ಟರೆ) ಬೆಳೆ'.
* 'ಅದ್ದೂರಿ ಮಳೆ, ಅದ್ದೂರಿ ಬೆಳೆ'.
* 'ಆರಿದ್ರ ಮೃಗಶಿರೆ ಹಂಗಾದ್ರೆ ನಾನೂ ನಾಲ್ಕರಂತೆ ಆರಂಭಗಾರ'.

ಅದ್ರಿ ಮಳೆಯಲ್ಲಿ ನೆಟ್ಟ ಎಲ್ಲ ಬಳ್ಳಿ ಮುಂದೆ ಸಮೃದ್ಧ ಫಸಲನ್ನು ನೀಡುತ್ತದೆ. ಮಳೆ ಬರುವಾಗ ಮಾತ್ರ ಗುಡುಗಬಾರದು ಎಂಬ ನಂಬಿಕೆ ಜನಪದರಲ್ಲಿದೆ.

೭.೮ ಪುನರ್ವಸು ಮಳೆ ನಕ್ಷತ್ರ ಮತ್ತು ಪುಷ್ಯ ಮಳೆ ನಕ್ಷತ್ರ :-

ಇವೆರಡು ಮಳೆಗಳು ಅಣ್ಣ ತಮ್ಮ - ಅಕ್ಕ ತಂಗಿಯಂತೆ. ಇವುಗಳ ಬಗ್ಗೆ ಒಟ್ಟಿಗೆ ಮಾತನಾಡುತ್ತಾರೆ. ರೈತನಿಗೆ ಇವು ಭಾಷೆಕೊಟ್ಟ ಮಳೆಗಳು.

* 'ನೀನಾರೆ ಬಾ ಇಲ್ಲ ನಾನಾರೆ ಬರ್ತೀನಿ'

  ಎಂದು ಮಾತನಾಡಿಕೊಂಡು ಬರುತ್ತವಂತೆ ಎಂಬ ನಂಬಿಕೆ ಇದೆ.

* 'ಪುನರ್ವಸುನಲ್ಲಿ ಪುಣ್ಯ ಇದ್ದಷ್ಟೇ ಮಳೆ'.

* 'ಪುನರುಶುಡು ಪುನಲ ಪಿರಾಯೆ ದೀವರ ಬುಡುಜಿ (ತುಳು) ('ಪುನರ್ವಸುವಿನಲ್ಲಿ ಹೆಣಾ ಹೊರಗಿಡೋದಕ್ಕೂ ಬಿಡೋದಿಲ್ಲ' ಕಾರ್ಕಳ, ದ.ಕ.)

* 'ಪುನರ್ವಸುವಿನಲ್ಲಿ ಪುಣ್ಯ ಇದ್ದಷ್ಟೇ ಮಳೆ'

ಉತ್ತರ ಕನ್ನಡ ಭಾಗದಲ್ಲಿ ಈ ಮಳೆಗಳ ಹಾವಳಿ ವಿಪರೀತವಿದ್ದಿರಬೇಕು. ಆದ್ದರಿಂದಲೇ 'ಪುನರ್ವಸುವಿನಲ್ಲಿ ಹೆಣ ಹೊರಗಿಡೋದಕ್ಕೂ ಬಿಡೋದಿಲ್ಲ' ಎಂಬ ಗಾದೆ ಇದೆ.

ಈ ಮಳೆಯನ್ನು ಇದರ ನಂತರದ ಪುಷ್ಯ ಮಳೆಯನ್ನು ಜೋಡಿಸಿ, 'ಸಣ್ಣಪುಂಡ - ದೊಡ್ಡ ಪುಂಡ' ಎಂದು ಕರೆಯುತ್ತಾರೆ.

'ನೀ ನೇಗಿಲ ನೊಗಾ ತಂದ್ರೆ ನಾ ಎತ್ತು ಹೂಟಿ ತಗಬರ್ತಿ'

ಹೀಗೆಂದು ಪುಷ್ಯ ಪುನರ್ವಸುವಿಗೆ ಹೇಳುತ್ತದಂತೆ. ಒಂದರ ಹಿಂದೊಂದು ಬರುತ್ತದೆಂದೂ ಒಂದಕ್ಕಿಂದ ಒಂದು ಬಿರುಸಾಗಿ ಬರುತ್ತವೆಂದೂ ಜನಪದರು ಹೇಳುತ್ತಾರೆ.

೮. ಪುಷ್ಯ :-

ಇದನ್ನು ಕುರಿತು ವಿಶೇಷ ನಂಬಿಕೆಗಳೇನೂ ಜನಪದರಲ್ಲಿಲ್ಲ. ಈ ಮಳೆ ಹೆಚ್ಚು ಬಂದರೆ ಹುಳು ಎನ್ನುವುದು ಜನಪದರ ನಂಬಿಕೆ.

* 'ಪುಷ್ಯದ ಮಳೆ ಹುಸಿಯಾದ ಮಳೆ'[೨೫]

* 'ಪುಷ್ಯಡು ಪುರಿ (ತುಳು - ಪುಷ್ಯ ಮಳೆ ಹೆಚ್ಚು ಬಂದ್ರೆ ಹುಳು ಬೀಳುತ್ತೆ ಎಂದರ್ಥ'. ಕಾರ್ಕಳ - ದಕ್ಷಿಣ. ಕನ್ನಡ.)

  ಎಂಬ ಗಾದೆಗಳು ಈ ಮಳೆ ಕುರಿತು ಇದೆ.

೯. ಅಶ್ಲೇಷಾ ಮಳೆ ನಕ್ಷತ್ರ (ಅಸಲೆ) :-

ಇದು ಫಸಲಿಗೆ ವಿಪುಲತೆಯನ್ನು ತಂದುಕೊಡುವ ಮಳೆ ಎಂದೂ ಈ ಮಳೆ ದಿನಗಳಲ್ಲಿ ಥಂಡಿ ಹೆಚ್ಚು ಎಂದೂ ಜನಪದರ ನಂಬಿಕೆ. ಈ ಮಳೆ ಕುರಿತ ಗಾದೆಗಳು ಇವೆ.

* 'ಅಸ್ಲಿ ಮಳಿಗೆ ಅಸಲು ಬಡ್ಡೀ ಕೊಡೇ ಬರ್ತಾವ

* 'ಅಸ್ಲಿ ಮಳೆಗೆ ತಸ್ಲಿ ಬೆಟ್ಟು ಏರ್ತು

* 'ಅಶ್ಲೇಷ ಮಳೆ, ನಿಶ್ಯೇಷ ಮಳೆ

* ಅಶ್ಲೇಷ ಮಳೆಗಿಂತ ಬಿಸಿಲೇ ಲೇಸು
* ಅಸಲೆ ಮಳೆ ಬಿದ್ದರೆ ಭೂಮಿಯೆಲ್ಲಾ ಹಸಿರು
* "ಅಸಲೆ ಮಳೇಲಿ ಬಿತ್ತಿದ್ರೆ ಎಸಳು ಎಸಳು ಕಾಯಿ"[೧೬]
* ಅಸಲೆ ಮಳೆಗೆ ನೆಲವೆಲ್ಲ ಹಸಲೆ
* ಅಸ್ಲಿ ಮಳೆಗೆ ತಸ್ಲಿ (ಮೀನು) ಬೆಟ್ಟ ಏರ್ತು (ಹೊನ್ನಾಳಿ - ಶಿವಮೊಗ್ಗ) (ಅಸ್ಲಾಸಿ ಮಳೇಲಿ ಶಿಸ್ಲು ಮೀನು ಘಟ್ಟ ಹತ್ತಿತು (ಹೊನ್ನಾವರ, ಉ.ಕ.)
* ಆಶ್ಲೇಷ ಮಳೆ, ನಿಶ್ಶೇಷ ಕೊಳೆ.
* ಅಸಲೆ ಮಳೆ ಕೈಕೊಟ್ಟು ಮೀಸಲಾಯ್ತು ಬೆಳೆ.
* ಅಸಲೆ ಮಳೇಲಿ ಬಿತ್ತಿದ್ರೆ ಎಸಳು ಎಸಳು ಕಾಯಿ. (ಗೌರಿಬಿದನೂರು, ಕೋಲಾರ.)
* ಅಸಲೆ ಮಳೆಗೆ ನೆಲವೆಲ್ಲ ಹಸಲೆ.
* ಆಸಲ್ ಫಿಸಲ್ ಗಯಾ, ಕಮ್‌ಜೋರ್ ಚಡ್‌ಗಯಾ (ಉರ್ದು : ಆಶ್ಲೇಷ ಬಿದ್ದು ಹೋಯ್ತು. ಕೆಳವರ್ಗದವ್ರು (ತಮ್ಮ ಕೂಲಿ ಏರಿಸಿ) ಮೇಲೇರಿ ಬಿಟ್ರು)

ಇತ್ಯಾದಿಯಾಗಿ ಈ ಮಳೆಯ ಕುರಿತ ಜನಪದರು ಗಾದೆಗಳಿವು.

* ಮಾಹಿತಿ : ರವೀಂದ್ರ ಮಲ್ಲಿನಾಥಶೆಟ್ಟಿ, ಜೈನಬಸದಿ, ಮಂಕಿ, ಹೊನ್ನಾವರ ತಾ.

೧೦ ಮಘ ಮಳೆ ನಕ್ಷತ್ರ :-

* "ಹೂದರೆ ಮಗೆ ಹೋದರೆ ಒಗೆ"[೧೭]
* ಮಖೆ ಗುಡುಗು ಮರದ ಮೇಲೆ ಕೇಳು,
* ಆದ್ರೆ ಮಗಿ ಆಗದಿದ್ರೆ ಹೋಗಿ
* ಮಘೆಯ ಮಳೆ ಮೊಗೆ ಮೊಗೆದು ತುಂಬ ಬೇಕು
* ಮಘೆ ನೀರು ಮೋಗೇಲಿಡು
* ಮಘಾ ಮಳೆ ಮಗನಿಗೂ ಬಿಡದು
* ಮಘೆ ಮಳೆ ಹೂದಷ್ಟು ಸಾಲದು, ಮಗ ಉಂಡಷ್ಟೂ ಸಾಲದು.
* ಮಖೆ ಮಳೆಯಾದರೆ ಮುಖ ತೊಳೆಯುದಕ್ಕಾದೀತೆ
* ಮಖೆ ಮಳೆಗೆ ಹುರುಳಿ ಬಿತ್ತಿದ್ರೆ ಮಕ್ಕಳ ಕಾಲಿಗೆ ಗೆಜ್ಜೆ ಕಟ್ಟಿದ ಹಂಗೆ.
* ಮಗೆ ಮಳೆ ಹುಯ್ದ್ರೆ ಕೇಡಲ್ಲ, ಮನೆ ಮಗ ಉಂಡ್ರೆ ಕೇಡಲ್ಲ. (ಕುಮಟಾ - ಉ. ಕ.) (ಮಗೆ ಮಳೆ ಹೂದಷ್ಟೂ ಸಾಲದು, ಮಗ ಉಂಡಷ್ಟೂ ಸಾಲದು)

* ಮಗಾ ಮಳಿ ಬಿದ್ರರ, ಮುಗಿಲೆ ನೀರು ಸುರುವಿದಾಂಗ.
* ಊದರೆ (ಹೂತರೆ) ಮಗೆ, ಓದರೆ (ಹೋದರೆ) ಹೊಗೆ.
* ಮಖೆ ಗುಡುಗು ಮರದ ಮೇಲೆ ಕೇಳು.
* ಆದರೆ ಮಗಿ, ಆಗದಿದ್ರೆ ಹೋಗಿ (ಆಗದಿದ್ರೆ ಹೋಗಿ - ಪಾಠಾಂ, ಶಿವಮೊಗ್ಗ)
* ಮಘೆಯ ಮಳೆ ಮೊಗೆ ಮೊಗೆದು ತುಂಬಬೇಕು.
* ಮಘೇ ನೀರು ಮೊಗೇಲಿಡು.
* ಮಘಾ - ಮಳೆ ಮಗನಿಗೂ ಬಿಡದು.
* ಮಗೆ ಮಳೆ ಹೊಯ್ದರೆ ಮಗೆ ಗಾತ್ರ ತೆನೆ (ಶಿವಮೊಗ್ಗ)

ಇನ್ನೂ ಮುಂತಾದ ಗಾದೆ ಮಾತುಗಳು ನಮ್ಮ ಜನಪದರಲ್ಲಿದೆ.

ಇದು ಬಂದರೆ ಬಾರೀ ಮಳೆಯಂತೂ ಖಚಿತವೆಂದೂ ಜನಪದರು ಹೇಳುತ್ತಾರೆ. ಈ ಮಳೆ ಹೋದರೆ ಹೋಗಿಯೇ ಬಿಡುವ ಅನಿಶ್ಚಿತ ಮಳೆಯೆಂಬುದು ರೈತನ ಲೆಕ್ಕಾಚಾರ. ಈ ಮಳೆಯ ಬಗೆಗೂ ರೈತರಿಗೆ ತುಂಬ ಪ್ರೀತಿ. ಇದು ಎಷ್ಟು ಹೊಯ್ದರೂ ಒಳ್ಳೆಯದೇ ಎಂಬ ನಂಬಿಕೆ ನಾಡಿನ ಎಲ್ಲ ಭಾಗದಲ್ಲಿರುವಂತೆ ಕಾಣುತ್ತದೆ.

೧೧. ಹುಬ್ಬೆ ಮಳೆ ನಕ್ಷತ್ರ :-

ಕರ್ನಾಟಕದ ವಿವಿಧ ಕನ್ನಡ ಭಾಗದಲ್ಲಿ ಇದನ್ನು ಕುರಿತ ನಂಬಿಕೆಗಳು ಭಿನ್ನ ರೀತಿಯವು. ಎಲ್ಲಾ ಕಡೆ ಈ ಮಳೆ ಬೆಳೆಗಳಿಗೆ ಒಳ್ಳೆಯದೆಂಬ ಅರ್ಥದ ಗಾದೆಗಳಿವೆ. ಈ ಮಳೆ ಕೋಲಾರ ಜಿಲ್ಲೆಯ ಭಾಗೇಪಲ್ಲಿ, ಗೌರಿಬಿದನೂರು ಪ್ರದೇಶದಲ್ಲಿ ಗುಬ್ಬಿ ತಲೆಯೂ ನೆನೆಯದಷ್ಟು ಪ್ರಮಾಣದಲ್ಲಿ ಬರುವುದೆಂಬರ್ಥದ ಗಾದೆಗಳಿವೆ. ಈ ಮಳೆಯಿಂದ ಗುಬ್ಬಿಗಳು ಸಾಯುವುದೆಂಬ ನಂಬಿಕೆ ಧಾರವಾಡ ಜಿಲ್ಲೆಯಲ್ಲಿದ್ದರೆ, ಈ ಅವಧಿಯಲ್ಲಿ ಬಿತ್ತಿದರೆ ಏನೂ ದಕ್ಕದೆಂಬ ಭಾವನೆ ಜನಪದರಲ್ಲಿದೆ. ಇದೊಂದು ತುಂತುರು - ತುಂತುರಾಗಿ ಬರುವ ಮಳೆ. 'ಉಬ್ಬೆ ಮಳೆ ತುಂತುರು' ಎಂದೇ ಕರೆಯುತ್ತಾರೆ. ಈ ಮಳೆಯನ್ನು

* 'ಉಬ್ಬೆ ಮಳೆ ಚೆಂದ ತಬ್ಬಲಿ ಮಕ್ಕಳು ಚೆಂದ'
* ಉಬ್ಬೆ ಮಳೇಲಿ ಬಿತ್ತಿದರೆ ಹುಲ್ಲು ಕಾಳೂ ಇಲ್ಲ'
* ''ಉಬ್ಬೆ ಮಳೆ ಹತ್ತಿದರೆ ಗುಬ್ಬಿಗಳು ಸಾಯ್ತಾವೆ''[೧೮]
* ಹುಬ್ಬೆ ಮಳೆ ಅಬ್ಬೆ ಹಾಲು ಕುಡಿದಂಗೆ (ಹೊನ್ನಾವರ - ಉ. ಕ.)
* ಉಬ್ಬೆ ಮಳೆಗೆ ಗುಬ್ಬಿ ತಲೆಯೂ ನೆನೆಯದು.
* ಹುಬ್ಬಿ ಹತ್ತಿದರೆ ಗುಬ್ಬಿ ಗೋಳಿಗೆಲ್ಲಾ ಸಾವು (ಧಾರವಾಡ)

* ಅಮ್ಮನ ಕಂಡದ ನೀರು ಮಗಕ್ಕೊ ಬುಡಾಯೆ, ಮಗನ ಕಂಡದ ನೀರು ಅಮ್ಮೆಕ್ಕು ಬುಡಾಯೆ. (ತುಳು : (ಹುಬ್ಬೆ ಮಳೆ ಸಂದರ್ಭದಲ್ಲಿ) ತಂದೆ ತನ್ನ ಹೊಲದ ನೀರನ್ನು ಮಗನಿಗೂ ಬಿಡೋದಿಲ್ಲ. ಮಗ ತನ್ನ ನೀರನ್ನು ತಂದೆಗೂ ಬಿಡೋದಿಲ್ಲ. ಕಾರ್ಕಳ - ದ. ಕ.)
* ಉಬ್ಬವಾನ ಉಬ್ಬಿ ಉಬ್ಬಿ ಕುರುಸಿನ ಗುಬ್ಬಶೆಟ್ಟಿ ಕಿಂದನ್ಯಾನೆ ಲೇದು. (ತೆಲುಗು : ಗೌರಿಬಿದನೂರು, ಕೋಲಾರ.) (ಅರ್ಥ - ಉಬ್ಬೆ ಮಳೆ ಹೊಯ್ಯುವಾಗ ಶೆಟ್ಟಿಯ ಹೊಟ್ಟೆಯಷ್ಟೇ ನೆನೆಯುತ್ತದೆಯೇ ವಿನಾ, ಕೆಳಗೆ ನೆನೆಯೋದೇ ಇಲ್ಲ) (ಸಾರಾಂಶಾರ್ಥ - ಉಬ್ಬೆ ಮಳೆ ಎಷ್ಟೇ ಜೋರಾಗಿ ಬಂದರೂ ಗುಬ್ಬಿ ಗುಡುಕೂಡಾ ನೆನೆಯೋದಿಲ್ಲ)
* ಹುಬ್ಬೆ ಮಳೆಗೆ ಗೌರಮ್ಮ ಉಬ್ಬೆ ಹೊದ್ದು ಬಂದಳು (ಶಿವಮೊಗ್ಗ)

ಇನ್ನೂ ಮುಂತಾದ ಗಾದೆಗಳು ಈ ಮಳೆ ಕುರಿತು ಜನಪದರಲ್ಲಿವೆ.

೧೨ ಉತ್ತರೆ ಮಳೆ ನಕ್ಷತ್ರ :-

ಮುಂಗಾರು ಮತ್ತು ಹಿಂಗಾರಿಗೆ ಮಧ್ಯವರ್ತಿ ಮಳೆ. ಈ ಮಳೆಗೆ ಸಂಬಂಧಿಸಿದಂತೆ ಸಿಗುವ ಗಾದೆ ಮಾತುಗಳು ಮತ್ತು ಬಿಡಿ ಮುತ್ತುಗಳು ಹಾಗೂ ಈ ಮಳೆಗೆ ಸಂಬಂಧಿಸಿದಂತೆ ಸಿಗುವ ಕಥೆಗಳು ಬೇರೆ ಯಾವ ಮಳೆಗೂ ಸಿಗುವುದಿಲ್ಲ. ಉತ್ತರೆ ಮಳೆಯ ಕಥಾ ಪ್ರಸಂಗ ಜನಪದರಲ್ಲಿ ಅತ್ಯಂತ ಪ್ರಸಿದ್ಧವಾಗಿದೆ.

'ಉತ್ತರೆ ಮಳೆಗೆ ಎತ್ತು ಬಾಯ್ಬಿಡುತ್ತವೆ' ಎಂಬ ಗಾದೆ ಮಾತಿದೆ. ಭಾದ್ರಪದ ಚೌತಿಯ ಒಂದೆರಡು (ಅ) ಗಣೇಶ ಚೌತಿಯ ಒಂದೆರಡು ದಿನಗಳ ನಂತರ ಈ ಮಳೆ ಆರಂಭ. ಸುಮಾರು ಹದಿನಾಲ್ಕು ದಿನಗಳ ಕಾಲ ಈ ಮಳೆ ಇರುತ್ತದೆ. ಈ ದಿನಗಳಲ್ಲಿ ಹಗಲು ಬಿಸಿಲು ತೀವ್ರವಾಗಿರುತ್ತದೆ ಎಂಬುದು ಜನಪದರ ನಂಬಿಕೆ ಹಾಗೂ ಅನುಭವ. ಈ ಬಿಸಿಲಿನ ತೀವ್ರತೆ ಎಷ್ಟಿರುತ್ತದೆ ಎಂದರೆ ಎಲ್ಲ ನೋವನ್ನು ತಡೆದುಕೊಳ್ಳುವ ಎತ್ತುಗಳೂ ಸಹ ಬಾಯಾರಿಕೆ ತಡೆಯಲಾರದೆ ಬಾಯಿ ಬಿಡುತ್ತವೆ ಎಂಬುದು ಈ ಗಾದೆಯ ಆಶಯ.

ಈ ಮಳೆ ಪೈರಿಗೆ ಒಳ್ಳೆಯದೆಂಬ ಭಾವನೆ ಕರ್ನಾಟಕದ ಎಲ್ಲೆಡೆಯ ರೈತರಲ್ಲಿದೆ.

* ''ಉತ್ತರೆ ಮಳೇಲಿ ಪೈರು ಹುತ್ತ ಬೆಳದ್ಹಂಗ್ ಬೆಳೀತದೆ''[೧೯]

ಎನ್ನುವುದು ಉತ್ತರ ಕನ್ನಡದ ಜಿಲ್ಲೆಯ ಜನಪದ ನಂಬಿಕೆ. ಆದರೆ ಅದು ಭತ್ತ ಹೂ ತಳೆಯುವ ಕಾಲಕ್ಕೆ ಬರಬಾರದು. ಅದಕ್ಕಿಂತ ತುಸು ಮುಂಚೆಯೇ ಬರಬೇಕು. ಆಗ ಅದು ಬೆಳೆಯನ್ನು ಹೊನ್ನಾಗಿಸುವ 'ಹೊನ್ನುತ್ರೆ' (ಹೊನ್ನಿನ ಉತ್ತರೆ). ಹಾಗಲ್ಲದೆ ಅನಂತರ ಬಂದರೆ ಕಾಳನ್ನು ಜೊಳ್ಳಾಗಿಸುತ್ತೆ. 'ಹೊಳ್ಳುತ್ರೆ' ಎಂಬ ಗಾದೆ ಮಾತೂ ಉತ್ತರ ಕನ್ನಡ ಜಿಲ್ಲೆಯಲ್ಲೇ ಇದೆ. ಆದರೆ ಮೈಸೂರಿನ ಭಾಗಕ್ಕೆ 'ಹೊನ್ನುತ್ರೆ' ಯಾಗುವುದಂತೆ.

ಉತ್ತರೆ ಮಳೆ ನಕ್ಷತ್ರವು ಒಂದು ನಿರ್ಣಾಯಕವಾದ ಮಳೆ. ಈ ಕೆಳಕಂಡ ಗಾದೆಗಳು ಇದಕ್ಕೆ ಸಾಕ್ಷಿ.

* 'ಅದರ ಉತ್ತರಿ, ಆಗದಿದ್ರೆ ಕತ್ತರಿ'
* 'ಉತ್ತರೆ ಬೀಳದಿದ್ರೆ ಹೆತ್ತವ್ವ ತೊರೆದ್ಹಾಂಗೆ'
* 'ಉತ್ತರೆ ಮಳೆ ಆಗದಿದ್ರೆ ಎತ್ಕೊಂಡ್ ಹೋಗು'
* 'ಉತ್ತರೆ ಮಳೆ ಬಂದರೆ ಕೂತಲ್ಲಿ ಕೂಳು'
* ಉತ್ತರೆ ಮಲೆಗೆ ಎತ್ತು ಬಾಯ್ಬಿಡುತ್ತಾವೆ (ಧಾರವಾಡ)
* ಉತ್ತರೆ ಮಳೆಗೆ ಪೈರು ಹುತ್ತ ಬೆಳದಾಂಗ ಬೆಳೀತದೆ (ಉ. ಕ.)
* ಅದರ ಉತ್ತರಿ ಆಗದಿದ್ದರೆ ಕತ್ತರಿ (ಧಾರವಾಡ).
* ಹೊನ್ನುತ್ರೆ - ಹೊಳ್ಳುತ್ರೆ (ಉ. ಕ.)
* ಉತ್ತರಿ ಮಳೆ ಬಂದರೆ ಕೂತಲ್ಲಿ ಕೂಳು.
* ಉತ್ತರೆ ಮಳೇಲಿ ಉತ್ತ ಎತ್ತು ನೀರಿಗೆ ಬಿತ್ತು.
* ಉತ್ತರೆ ಬೀಳದಿದ್ರೆ ಹೆತ್ತವ್ವ ತೊರೆದ್ಹಾಂಗೆ.
* ಉತ್ತರೆ ಮರೆತರೆ, ಹೆತ್ತಮ್ಮ ತೊರೆದರೆ, ಮುತ್ತು ಮಣ್ಣಾದರೆ, ಲೋಕ ಬೆಳಗು, ಬೈಗು ಆಗೋದು ಹ್ಯಾಗೆ?
* ಉತ್ತರೆಡೆ ಹೆತ್ತರೆ ಅಪುಂಡು.

  (ತುಳು : ಉತ್ತರೆ ಮಳೆ ಹೊತ್ತಿಗೆ (ಬೇಸಾಯದ ಕೆಲಸವೆಲ್ಲ) ಒತ್ತರ ಆಗಿರುತ್ತೆ (ಕಾರ್ಕಳ - ದ. ಕ.)
* ಉತ್ತರ ಸೂಸ್ಕುನಿ ಎತ್ತರ ಗಂಪ (ತೆಲುಗು)

  (ಉತ್ತರೆ ಮಳೆ ಆಗ್ದಿದ್ರೆ ಎತ್ಕೊಂಡು ಹೋಗು - (ಗೌರಿಬಿದನೂರು, ಕೋಲಾರ.)
* ಉತ್ತರವಾನ ರಾಕುಂಟೆ ಎತ್ತರಗಂಪ (ತೆಲುಗು) -- " --
* ಉತ್ತರಿ ಮಳೆ ಹೋದ್ರೆ ಹೆತ್ತಮ್ಮನೂ ಆಗೋಲ್ಲ (ಚಿತ್ರದುರ್ಗ)

ಆದರೂ ಜನಪದರಿಗೆ ಈ ಮಳೆಯನ್ನು ನಂಬಲಿಕಾಗೋದಿಲ್ಲ ಎಂಬ ಎಚ್ಚರವೂ ಇದೆ. ಆದ್ದರಿಂದಲೇ 'ಉತ್ತರಿಕಾರ್ತಿ ಅತ್ತಳಕೊತ್ತಳ, ಹಸ್ತಕಾರ್ತಿ ಅಸ್ತವ್ಯಸ್ತ' ಎಂಬ ಗಾದೆ ಅಪರೂಪವಾಗಿ ಈ ಕಡೆ ಕೇಳಿ ಬರುತ್ತದೆ.

ಉತ್ತರದೇವಿ ಎಂಬ ಗೌರವಸ್ಥ ಹೆಣ್ಣುಮಗಳು ಗಂಡ, ತಂದೆಯವರಿಂದ ತಿರಸ್ಕೃತರಾಗಿ ನೊಂದು, ಶಿವನನ್ನು ಕುರಿತು ತಪಸ್ಸುಮಾಡಿ ಉತ್ತರೆ ಮಳೆಯಾಗಿ ಹರಿದಳೆಂಬ ನಂಬಿಕೆ ವಿಶೇಷವಾಗಿ ದಕ್ಷಿಣ ಕರ್ನಾಟಕದ ಮಲೆನಾಡಿನ ಜಾನಪದರಲ್ಲಿದೆ. ಈ ಕಥೆಯನ್ನೂ ನಿರೂಪಿಸುವ 'ಉತ್ತರದೇವಿ' ಹಾಡುಗಳು ಆ ಕಡೆಯಲ್ಲಿ ಹೇರಳವಾಗಿ ದೊರೆಯುತ್ತವೆ.

ಉತ್ತರೆ ನೀರಿಗೋಗಿ ಮತ್ತೇಕೆ ಬರಲಿಲ್ಲ
ಉತ್ತರ ದೇಸೆಂಬೂ ಮಳೆ ಹುಯ್ದು - ಕೆರೆ ತುಂಬಿ
ಹನಿ ಬಿದ್ದು ಹರಬಿ ಒಡೆದಾವು

ಅಳ್ಳಡಸಗಾರೆಣ್ಣೆ ಮೇಲಕ್ಕೆ ನೀರಿಗೋಗಿ
ಮುಳ್ಳು ಸಿಕ್ಕಿ ಸೀರೆ ಸೆರಗೆರಿದೊ-ದಾಳಿಂಬೆ
ಹನಿಬಿದ್ದು ಹರಬಿ ಒಡೆದಾವು

ನೀರೇಕೆ ಕಲಕಿದವು ನರಿಗೇಕೆ ಮಾಸಿದವು
ಮಾವನ ತೋಟಾದ ಮರುಗಾವು - ಕುಯ್ಯುಕೋಗಿ
ಬಾಳೆಯ ಮುಳ್ಳು ಸೆಣೆದಾವು

ಬಾಳೇಗೆ ಮುಳ್ಳುಂಟೆ ಬದನೀಗೆ ಚಪ್ಪರುಂಟೆ
ಹಸಿನಾಲಿಗೆ ಇಸವುಂಟೇ - ಸೊಸಿಬಾಲೆ
ಸೊಸಿ ಬಾಲೆ ನಿನ ಮಾತು ನಿಜವೇನೇ

ಉತ್ತರೆ ಎಂಬ ಹೆಣ್ಣು ಮಗಳು ನೀರಿಗೆ ಹೋಗಿ ಮನೆಗೆ ಬರುತ್ತಾಳೆ. ಆ ಸಂದರ್ಭಕ್ಕೆ ಸರಿಯಾಗಿ ಅವಳ ಅತ್ತೆ, ಅವಳ ಶೀಲದ ಬಗ್ಗೆ ಶಂಕೆಯನ್ನು ವ್ಯಕ್ತಪಡಿಸುತ್ತಾಳೆ. ಈ ಗೀತೆಯಲ್ಲಿ ಬಳಸುವ 'ಬಾಳೇಗೆ ಮುಳ್ಳುಂಟೆ? ಬದನೀಗೆ ಚಪ್ಪರುಂಟೆ? ಹಸಿನಾಲಿಗೆ ಇಸವುಂಟೆ?... ಬಾಲೆ ನಿನ ಮಾತು ನಿಜವೇನಾ?...' ಎಂಬ ಮಾತು ನಮ್ಮ ಅನಕ್ಷರಸ್ಥ ಸಮಾಜದ ಮಾತಿನ ವೈಕರಿಯನ್ನು ತಿಳಿಸುವುದರ ಜೊತೆಗೆ ಹೇಳಬೇಕಾದ ಸಂಗತಿಯನ್ನು ಬೇರೊಂದು ವಸ್ತುವಿಗೋ, ಸಂಗತಿಗೋ ಹೋಲಿಸಿ ಹೇಳುವ ಪರಿಯನ್ನು ನೋಡಿದಾಗ ನಮ್ಮ ಅಕ್ಷರಸ್ಥ ಸಮಾಜಕ್ಕಿಂತ ಅವರು ಯಾವ ವಿಷಯದಲ್ಲಿಯೂ ಕಡಿಮೆ ಇಲ್ಲ ಎನ್ನುವುದರ ಜೊತೆಗೆ ಈ ಮೂಲಕವೇ ಕಾವ್ಯ ಮೀಮಾಂಸೆಯ ಉಪಮೆ, ರೂಪಕ, ಹೋಲಿಕೆ, ಉತ್ಪ್ರೇಕ್ಷೆ ಎಂಬ ಪರಿಕಲ್ಪನೆಗಳು ಹುಟ್ಟಿರಬಹುದೆನಿಸುತ್ತದೆ.

ಎತ್ತಿಗೆ ಮಾತುಂಟೆ ಕತ್ತೇಗೆ ಕೋಡುಂಟೆ
ಋಷಿಯಾಡಿದ ಮಾತೀಗೆ ಹುಸಿಯುಂಟೆ - ಅತ್ತೆಮ್ಮ
ಅತ್ತ್ಯಮ್ಮ ನಿಮ್ಮ ಮಾತು ನಿಜವುಂಟೇ

ಮುಂದೆ ಅತ್ತೆ, ಸೊಸೆಯಂದಿರ ನಡುವೆ ವಾಕ್ಸಮರ ಮುಂದುವರೆಯುತ್ತದೆ.

ಅತ್ತೆಗೂ ಸೊಸಿಗೂ ಹತ್ಯಾವೆ ಕಾಳಗಿ
ಉತ್ತರದೇವೆಂಬಾ ಸೊಸಿ ಬ್ಯಾಡ

ಉತ್ತು ಬಂದ ಮಗನಿಗೆ ತುಪ್ಪ ಅನ್ನ ಇಕ್ಕ್ಯವಳೆ
ಉತ್ತರದೇವೆಂಬ ಸೊಸಿಬ್ಯಾಡ - ಕಂದಯ್ಯ
ಬಿಟ್ಟು ಬಿಡವಳ ತವರೀಗೆ

ಬಿಟ್ಟು ಬಿಡಲಿಕ್ಕೆ ಎತ್ತಲ್ಲ ಎಮ್ಮೆಲ್ಲ
ಹತ್ತುವರ ಮುಟ್ಟಿ ತೆರಮುಟ್ಟಿ ಬಂದವಳ
ಬಿಟ್ಟಿರುನಾರೆ ಹಡದವ್ವಾ

ಅವಳ ಕೊರಳಲ್ಲಿರುವ ಸಲಿಕೆ ಸರಪಳಿ ಮಾರಿ
ನಿನ್ನ ಮುಂಚಾಕೆ ರಾಣಿಯ ತರಬಲ್ಲೆ ಕಂದಯ್ಯ
ಉತ್ತರದೇವೆಂಬ ಸೊಸಿ ಬ್ಯಾಡಾ

ಅರಗಿ ಬಂದ ಮಗನೀಗೆ ಹಾಲನ್ನ ಇಕ್ಕ್ಯವಳೆ
ಬೇಡತಿಯೆಂಬ ಸೊಸಿ ಬ್ಯಾಡ -ಕಂದಯ್ಯ
ಬಿಟ್ಟು ಬಿಡವಳ ತವರೀಗೆ

ತವರೀಗೆ ಬಿಡುವಾಕೆ ಎತ್ತಲ್ಲ ಎಮ್ಮೆಲ್ಲ
ಆರು ವರ ಮುಟ್ಟಿ - ಬಂದವಳ
ನೋಡದಿರುನಾರೆ ಹಡದವ್ವಾ

ಮೂಗುತಿ ಮುರಿದಾರೆ ಮಾಡಿಸಬಹುದು
ಮಡದಿ ಸತ್ತಾರೆ ತರಬಹುದು - ಕಂದಯ್ಯ
ನಿನ್ನ ಹೆತ್ತವ್ವನೆಲ್ಲಿ ಪಡೆದಿಯೇ

ಅವಳ ಕಾಲಲಿರುವ ಪಿಲ್ಲಿ ಸರಪಣಿ ಮಾರಿ
ನಿನ್ನ ಮಂಚಾಕೆ ರಾಣಿಯ ತರಬಲ್ಲೆ - ಕಂದಯ್ಯ
ಬಿಟ್ಟು ಬಿಡವಳ ತವರೀಗೆ

ಮಡದೀಯ ಕರದವನು ಮತ್ತೇನ ಹೇಳ್ಯಾನು
ಇತ್ತ ಕೇಳೆ ಮಡದಿ ನನ್ನ ಮಾತಾ

ಉತ್ತು ಬಂದ ಮಗನಿಗೆ ಉತ್ತರೆಯ ಮೇಲೆ ಇಲ್ಲಸಲ್ಲದ ಚಾಡಿಯ ಮಾತುಗಳನ್ನು ಅತ್ತೆ ಹೇಳುತ್ತಾಳೆ. ಅದಕ್ಕೆ ಅವನೂ ಕೂಡಾ ಪ್ರತಿಕ್ರಿಯಿಸುವ ರೀತಿಯನ್ನು ನೋಡಿದಾಗ ಹೆಂಡತಿಯ ಮೇಲಿನ ಅವನ ಒಲವನ್ನು ಆ ಸಾಲುಗಳು ಪ್ರತಿಪಾದಿಸುತ್ತವೆ.

ಈ ಮೇಲಿನ ಮಾತುಗಳನ್ನು ಅವಲೋಕಿಸಿದಾಗ ಒಂದು ಕಡೆ ಹೆಣ್ಣಿಗೆ ಹೆಣ್ಣೆ ಶತ್ರುವೆನ್ನುವ ಮಾತು ನೆನಪಿಗೆ ಬರುವುದರ ಜೊತೆಗೆ ಒಂದು ಕಳಂಕಿತ ಸಮಾಜದ ಚಿತ್ರ ನಮ್ಮ ಕಣ್ಣ ಮುಂದೆ ವಿಕಾರ ರೂಪವನ್ನು ತೆರೆದುಕೊಂಡಿರುವುದು ಗೋಚರವಾಗುತ್ತದೆ.

ಒಂದು ಕಡೆ ತಾಯಿಯನ್ನೂ ಬಿಟ್ಟಿರಲಾರದೆ, ಇನ್ನೊಂದು ಕಡೆ ತನ್ನ ಮಡದಿಯನ್ನು ತವರಿಗೆ ಕಳುಹಿಸಲಾರದೆ, ಮಾನಸಿಕ ಯಾತನೆಯನ್ನು ಅನುಭವಿಸುವ ಪುರುಷನ ಪಾತ್ರ ಕರುಣಾಜನಕವಾಗಿ ಚಿತ್ರಣಗೊಂಡಿದೆ.

ಈ ಕಥನ ಗೀತೆ ಮುಂದುವರೆದಂತೆ
ಆಗ ತಂದವನಲ್ಲ ಈಗ ಕಳಗವನಲ್ಲ
ಹೋಗಿರು ನಿನ್ನ ತವರೀಗೆ

ತಂದ ರಾಯರಿಗೆ ಘಟ್ಟದ ಮಡದೊಪ್ಪಿಲ್ಲವ
ನಾ ಹೋತಿನಿ ರಾಯ ತವರೀಗೆ
ನಾ ಹೋದಳು ಎಂದು ಚಿಂತಿ ಮಾಡಲು ಬ್ಯಾಡ
ನೀ ನನಗಿಂತ ಚೆಲುವೇ ತರಬೇಕು

ತಂದಾರು ತತ್ತನ್ನಿ ನನಗಿಂತಲು ಚೆಲುವೆಯಾ
ನಾ ಮುಡಿದು ನನ್ನ ಶಿರ ಮುಡಿದು - ಮಿಕ್ಕಿದ್ದ ಹೂವ
ಯಾವ ರಾಣ್ಯಾರೇ ಮುಡಿಯಾಲಿ

ಆಗ ಉತ್ತರದೇವಿ ಮತ್ತೆಲ್ಲಿಗೆ ಹೋಗುತಾಳೆ
ಕಿತ್ತಲಿ ವನಕೆ ನಡೆದವಳೆ

ಕಿತ್ತಲಿ ನೀವು ಕೇಳಿ ಕಿತ್ತಲಿಯ ವನಕೇಳಿ
ನಾನು ಬಂದಾಗ ಸಸಿಗೋಳು
ಗೊಬ್ಬರವಾ ಹಾಕಿ ಸಲುವಿದೇನು ವನಗಳಿರಾ
ಹೋತೀನ ನನ್ನ ತವರೀಗೆ

ನೀರ ಹುಯ್ಯವರ್‍ಯಾರೆ ಗೊಬ್ಬರ ಹಾಕವರ್‍ಯಾರೆ
ಹಣ್ಣಾದರ್‍ಯಾರೆ ಮೆಲ್ಲುವರೂ

ಅತ್ತೈಮ್ಮ ನೀರು ಹುಯ್ಯುತಾರೆ
ಅತ್ತೈಮ್ಮ ಗೊಬ್ಬರ ಹಾಕುತ್ತಾರೆ
ಹಣ್ಣಾದರಾಕೆ ಮೆಲ್ಲುತಾರೆ

ಅಲ್ಲಿಂದುತ್ತರದೇವಿ ಬಾಳೆ ವನಕೋಗಿ
ನಾನು ಬಂದಾಗ ಎಳೆ ಕಂದು
ಬೂದಿ ಹಾಕಿ ಸಲುವಿದೇನು ವನಗಳಿರಾ
ಹೋತೀನಿ ನನ್ನ ತವರೀಗೆ

ಬೂದಿ ಹಾಕವರ್‍ಯಾರೆ ನೀರ ಹುಯ್ಯುವರ್‍ಯಾರೆ
ನಾ ಹಣ್ಣಾದರೆ ಮೆಲ್ಲುವರ್‍ಯಾರೆ

ಅತ್ತೈಮ್ಮ ನೀರು ಹುಯ್ಯುತಾರೆ
ಅತ್ತೈಮ್ಮ ಬೂದಿ ಹಾಕುತಾರೆ
ಹಣ್ಣಾದರಾಕೆ ಮೆಲ್ಲುತಾರೆ

ಅಲ್ಲಿಂದ ಹಿಂದಿರುಗಿ ಅರಮನೆಗೆ ಬರುತಾಳೆ
ಅಡಿಗೆಯ ಮಾಡಿದಳು ನೀರಾನೆ ತಂದಾಳು
ಮಾವನಿಗೆ ನೀರಾ ಕೊಟ್ಟಳು ಉತ್ತರದೇವಿ

ಮಾಳಿಗೆಯ ಮೇಲೆ ಮಲಗಿರುವ ಮಾವಯ್ಯ
ಊಟಕ್ಕಪ್ಪಣೆ ದಯಮಾಡಿ

ನೆನ್ನೆ ಉಂಡಾ ಊಟ ಇನ್ನು ನಂಗೆ ಅರಗಿಲ್ಲಾ
ನಿನ್ನಾಣೆಗು ನಂಗೆ ಹಸಿವಿಲ್ಲಾ

ಮಾಳಿಗೆಯ ಮೇಲೆ ಮಲಗಿರುವ ಮಾವಯ್ಯ
ನಾ ಹೋಗಿ ಬತ್ತೀನಿ ತವರೀಗೆ

ಉತ್ತರೆ ತನ್ನ ಗಂಡನನ್ನು ಸಂತೈಸಿ ಹೊರಡಲು ಸಿದ್ಧಳಾಗುತ್ತಾಳೆ. ತಾನು ಬೆಳೆಸಿದ ಕಿತ್ತಲೆ, ಬಾಳೆ ವನಗಳಿಗೆ ಬಂದು ತನ್ನ ದುಃಖವನ್ನು ತೋಡಿಕೊಳ್ಳುವುದರ ಜೊತೆಗೆ ಅವುಗಳಿಗೆ ಸಾಂತ್ವನವನ್ನು ಹೇಳುವುದರ ಮೂಲಕ ತನ್ನನ್ನು ತಾನು ಸಂತೈಸಿಕೊಳ್ಳುತ್ತಾಳೆ. ನಮ್ಮ ಅನಕ್ಷರಸ್ಥ ಸಮಾಜವು ಅವರ ಸುತ್ತಮುತ್ತಲಿನ ಪಶು, ಪಕ್ಷಿ, ಪ್ರಾಣಿ, ಸಸ್ಯ ಸಂಕುಲಗಳಿಗೂ ಒಂದು ಜೀವವಿದೆ, ಅವುಗಳಿಗೂ ನಮ್ಮಂತೆ ಒಂದು ಭಾವನಾತ್ಮಕವಾದ ಮನಸ್ಸಿದೆ. ಅವುಗಳಿಗೆ ನಮ್ಮ ಕಷ್ಟಸುಖಗಳನ್ನು ಹೇಳಿಕೊಂಡರೆ ಎಷ್ಟೋ ಸಮಾಧಾನವಾಗುತ್ತದೆ ಎನ್ನುವ ಕಲ್ಪನೆ ನಿಜಕ್ಕೂ ಸ್ವಾರಸ್ಯಕರವಾದುದ್ದು.

ಕುಂದೂರಿಗ್ಯಾಗಿ ನಡೆದು ಹೋಗಾಗ
ಕುಂದೂರು ಗೌಡಾರು ತಡೆದು - ಏನಾಂದರು
ನಾವು ಒಂದು ವರ ಕೊಡುತೀನಿ ಇರುಬಾರೆ

ಒಂದು ವರ ಎಂಬುದು ನನ್ನ ಕಂದಾಗೆ ಬೆಲೆ ಇಲ್ಲಾ
ನಾ ಮುಂದಕೆ ಕಂದಾನ ನಡಿಸೇನು

....
....

ಹೆತ್ತೂರಿಗಾಗಿ ನಡೆದು ಹೋಗಾಗ
ಹೆತ್ತೂರ ಗೌಡರು ತಡೆದು, ಏನಾಂದಾರು
ಪತ್ತುವರ ಕೊಡುತೀನಿ ಇರುಬಾರೆ

ಪತ್ತುವರ ಎಂಬುದು ನನ್ನ ಎತ್ತಿನ ಬೆಲೆ ಇಲ್ಲಾ
ನಾ ಮುಂದಕೆ ಕಂದಾನ ನಡಿಸೇನು
....
ತಾಯಿ ಬಾಗಿಲಾ ತೆಗೆ ತಾಯವ್ವ ಬಾಗಿಲಾ ತೆಗೆಯೇ
ನಾ ಬಂದನೇ ತಾಯಿ ತೆಗಿ ಬಾಗಿಲವಾ

ಬಾಗಿಲಾ ತೆಗೆಯುವುದಕ್ಕೆ ನಾ ಹೆಂಗೆ ತೆಗೆಯಾಲಿ
ನಿಮ್ಮಪ್ಪ ತೋಳಲ್ಲಿ ವರಗವರೇ - ಉತ್ತರದೇವಿ
ಹೋಗೇ ಅಣ್ಣಯ್ಯನರಮನೆಗೇ

ಅಣ್ಣಾ ಬಾಗಿಲ ತೆಗಿ ಅಣ್ಣಯ್ಯ ಬಾಗಿಲಾ ತೆರೆ
ನನ್ನ ಮಕ್ಕಳು ಬಾಯಾರಿ ಬಳಲಿದೊ - ಅಣ್ಣಯ್ಯ
ನಾ ಬಂದೇನು ಕದಾವ ತೆಗಿರಣ್ಣ
....
ತಂಗಿ ಬಾಗಿಲಾ ತೆಗೆ ತಂಗಮ್ಮಾ ಬಾಗಿಲಾ ತೆಗೆಯೇ
ನನ್ನ ಮಕ್ಕಳು ಬಾಯಾರಿ ಬಳಲಿದೋ - ತಂಗಮ್ಮ
ನಾ ಬಂದೆನು ತಂಗಿ ತೆಗಿ ಕದವಾ
....
ಮಕ್ಕಳ ನೋಡುತಾಳೆ ವಕ್ಕಳ ಸಂಕಟವ ಮಾಡಿ
ನೀವೆಲ್ಲಿ ಹೋತಿರೊ ನನ್ನ ಕಂದಾ - ಮಕ್ಕಳಿರಾ
ನನ್ನ ಜೊತೇಲಿ ಇರಬನ್ನಿ

ಹಂಗಂತಾವ ಹೇಳುತಾಲೆ ಮಕ್ಕಳಾ ಕಂಕಳಲ್ಲಿ ಎತ್ತಿ
ಒಂದೊಂದು ಮೆಟ್ಟಗಿ ಇಳಿದಾಳು - ಉತ್ತರದೇವಿ
ಗಂಗಮ್ಮ ತಾಯಿ ಒಳ್ಕಂಡರು

ಅತ್ತ ಹರಿಯಾಗಂಗೆ ಇತ್ತ ಹರಿಯವ್ವ
ಒತ್ತಿ ಹರಿಯವ್ವ ಸಿವಗಂಗೆ

ಎತ್ತ ಹರಿಯಾ ಗಂಗೆ ಇತ್ತ ಹರಿಯವ್ವ
ದಡ ಸೂಸಿ ಹರಿಯವ್ವ ಸಿವಗಂಗೆ

ಅತ್ತ ಹರಿಯಾ ಗಂಗೆ ಇತ್ತಾವು ಹರಿದಾಳು
ತುಂಬಿ ಹರಿದಾಳು ಸಿವಗಂಗೆ

ಹಾದಿಯಲ್ಲಿ ಅವಳು ಅನುಭವಿಸುವ ನೋವು ಅಣ್ಣ, ತಮ್ಮ, ತಂದೆ, ತಾಯಿಗೆ ಬೇಡವಾದಾಗ ಅವಳ ದುಃಖ ಮುಮ್ಮಡಿಗೊಳ್ಳುತ್ತದೆ. ಈ ಹೆಣ್ಣು ಮಗಳ ಸ್ಥಿತಿ ನೋಡಿದಾಗ ಮತ್ಯಾರಿಗೂ ಈ ಸ್ಥಿತಿ ಉಂಟಾಗುವುದು ಬೇಡ ಎನಿಸುತ್ತದೆ. ಹಾಗೆಯೇ ಒಂದು ಕಡೆ ಅತ್ತೆ ಪಾತ್ರದ ಮೂಲಕ ಹೆಣ್ಣು ಕೆಟ್ಟ ಸಮಾಜವೊಂದರ ಪ್ರತಿನಿಧಿಯಾದರೆ ಉತ್ತರಾದೇವಿಯ ಪಾತ್ರದ ಮೂಲಕ ಈ ಹೆಣ್ಣು ಮಗಳು ಶ್ರೇಷ್ಠತೆಯ ಪ್ರತೀಕವಾಗುತ್ತಾಳೆ. ಹುಟ್ಟಿದರೆ ಇಂತಹ ಹೆಣ್ಣು ಮಕ್ಕಳು ಹುಟ್ಟಬೇಕು ಎಂದು ಎಂಥಹವರಿಗಾದರೂ ಅನಿಸುತ್ತದೆ.

ಮುಂದೆ ಉತ್ತರಾದೇವಿ ತನ್ನ ಮಕ್ಕಳೊಂದಿಗೆ ಗಂಗೆಯಲ್ಲಿ ಲೀನವಾಗುತ್ತಾಳೆ. ಈ ರೀತಿಯಾಗಿ ಅವಳು ಉತ್ತರೆ ಮಳೆಯಾಗಿ ಪರಿವರ್ತನೆಗೊಳ್ಳುತ್ತಾಳೆ. ಈ ರೀತಿ ಉತ್ತರೆ ಮಳೆಯ ಕಥನ ಗೀತೆಯನ್ನು ನೋಡಬಹುದು. ಇದರಿಂದಲೋ ಏನೋ ನಮ್ಮ ಬಿ.ಎಂ.ಶ್ರೀ. ಅವರು ಜನಪದ ಸಂಸ್ಕೃತಿ ಶಿಷ್ಟ ಸಂಸ್ಕೃತಿಯ ತಾಯಿ ಬೇರು ಎಂದು ಹೇಳಿರಬಹುದು ಎನಿಸುತ್ತದೆ.

೧೩. ಹಸ್ತೆಮಳೆ ನಕ್ಷತ್ರ :-

ಇದು ರೈತರಿಗೆ ಭಾಷೆ ಕೊಟ್ಟ ಖಚಿತ ಮಳೆಯೆಂದೂ, ಈ ಮಳೆ ಸಕಾಲದಲ್ಲಿ ಆದರೆ ಫಸಲಿನ ಇಳುವರಿ ಹೆಚ್ಚಾಗಿರುವುದೆಂದೂ ನಮ್ಮ ರೈತರ ನಂಬಿಕೆ. ಇದನ್ನು ವ್ಯಕ್ತಪಡಿಸುವ ಗಾದೆಗಳು ಧಾರವಾಡ, ಬಿಜಾಪುರ, ಉತ್ತರ ಕನ್ನಡ ಜಿಲ್ಲೆಗಳನ್ನೂ ಒಳಗೊಂಡಂತೆ, ಹಳೇ ಮೈಸೂರಿನ ಕೆಲ ಭಾಗಗಳಲ್ಲೂ ದೊರೆತಿವೆ.

* 'ಹಸ್ತದ ಮಳೇಲಿ ಆರಂಭ ಬೇಡ, ಚಿತ್ತದ ಮಳೇಲಿ ಹೋರಾಟ ಬೇಡ'
* ''ಹಸ್ತದ ಮಳೆ ಹಂಗಾದರೆ ಹೆತ್ತ ತಾಯಿ ಹಿಟ್ಟಿಕ್ಕೋದಿಲ್ಲ.''[೨೦]
* ಹಸ್ತೆಗೆ ಆರು ಕಾಯಿ ಚಿತ್ತೆಗೆ ಮೂರು ಕಾಯಿ.
* ರೈತನಿಗೆ ಭಾಷೆ ಕೊಟ್ಟ ಮಳೆ ಹಸ್ತ.
* ಹಸ್ತೆ ಮಳೆ ಹೂದು ಚಿತ್ತಿ ಬಿಸಲು ಕಾದು ಸ್ವಾತಿ ಜಡಿ ಹಿಡಿದರೆ ಮುತ್ತಿನಂಥ ಆರಂಭ.
* ಆದರ ಹಸ್ತ, ಆಗದಿದ್ರ ಹಲ್ಲುಕಿಸ್ತ (ಧಾರವಾಡ - ಬಿಜಾಪುರ)
* ಹಸ್ತ ಆರ್‌ಕಾಳು, ಚಿತ್ತಿ ಮೂರ್‌ಕಾಳು (ಹುನಗುಂದ - ಬಿಜಾಪುರ)
* ಹಸ್ತೆ ಹಣುಕ್ಬೇಕು, ಚಿತ್ತೆ ಬರೀಬೇಕು (ಹೊನ್ನಾವರ, ಉ. ಕ.)
* ಹಸ್ತದ ಮಳೆ ಹಂಗಾದರೆ, ಹೆತ್ತ ತಾಯಿ ಹಿಟ್ಟಿಕ್ಕೋದಿಲ್ಲ.
* ಹಸ್ತೆಗೆ ಆರು ಕಾಯಿ, ಚಿತ್ತೆಗೆ ಮೂರು ಕಾಯಿ.

ಬಹುಶಃ ಮೊದಲಗಾದೆ ಆ ದಿನಗಳಲ್ಲಿ ಹೊಸ ಬೆಳೆಯ ಕೆಲಸ ಆರಂಭಿಸೋದು ಬೇಡ ಎಂಬ ಅರ್ಥದಲ್ಲಿರಬೇಕು. ಆಯಾ ಪ್ರದೇಶದ ಬೆಳೆಗಳಿಗೆ ಈ ಮಳೆ ಒಳ್ಳೆಯದೆಂಬ ನಂಬಿಕೆ ಎಲ್ಲ ಕಡೆಯೂ ಇದ್ದಂತಿದೆ. ಇದಕ್ಕೆ ಮೈಸೂರು ಜಿಲ್ಲೆ ಕೂಡ ಹೊರತಾಗಿಲ್ಲ. ಹಸ್ತಿ, ಸ್ವಾತಿ ಮಳೆಗಳು ಭತ್ತಕ್ಕೆ ಒಳ್ಳೆಯದು ಎಂದು ಮೈಸೂರು ಹಾಗೂ ಹೊನ್ನಾವರ ತಾಲ್ಲೂಕಿನ ಜನ ಹೇಳುತ್ತಾರೆ. ಈ ಮಳೆ ಬರದೇ ಹೋದರೆ ಪೈರಿನ ಬೆಳವಣಿಗೆಗೆ ಧಕ್ಕೆಯೊದಗುತ್ತದಂತೆ.

* ಹಸ್ತ ಇಲ್ಲ ಅಂದ್ರೆ ರೈತ ಹಲ್ಲು ಕಿಸ್ತ
* ಹಸ್ತ ಆರ್ಬಾಳು, ಚಿತ್ತೆ ಮೂರ್ಬಾಳು - ಇತ್ಯಾದಿ ಗಾದೆಗಳು ಮೈಸೂರು ಸುತ್ತಮುತ್ತಲ ಜನಪದರ ನಂಬಿಕೆಯಲ್ಲಿದೆ.

೧೪ ಚಿತ್ತ ಮಳೆ ನಕ್ಷತ್ರ :-

ಈ ಮಳೆಗೆ ಸಂಬಂಧಿಸಿದಂತೆ ಜನಪದೀಯರು ಬಹಳ ಸ್ವಾರಸ್ಯಕರವಾದ ಕಲ್ಪನೆಯನ್ನು ಮಾಡಿಕೊಂಡಿರುವುದು ಜನಪದ ಮಹಾಭಾರತದಲ್ಲಿದೆ.

* ಚಿತ್ರಾಮಳೆ ವಿಚಿತ್ರದ ಬೆಳೆ.
* ಕುರುಡು ಚಿತ್ತಮಳೆ ಎರಚಿದತ್ತ ಬೆಳೆ
* ಚಿತ್ತಿ ಮಳೆ ಆದಂಗೆ ಹಿರಿ ಸೊಸಿ ನಡದಂಗೆ
* ಚಿತ್ತಿ ಮಳಿ ಆದಂಗೆ, ಹಿರಿ ಸೊಸಿ ನಡದಂಗೆ (ಉತ್ತರ ಕನ್ನಡ ಜಿಲ್ಲೆ)
* ಚಿತ್ತಿ ಮಳಿ ಚಿತ್ತಗಡಕ (ಚಿತ್ತಿ ಮಳೆ ಚಿತ್ತ ಬಂದ್ ಕಡೆ) ಬಿಜಾಪುರ.
* ಕುರುಡು ಚಿತ್ತಿ (ತುಮಕೂರು, ಧಾರವಾಡ, ಶಿವಮೊಗ್ಗ)

* ಕುಡ್ಡೀ ಮಳೆ ಬಿದ್ದಲ್ಲೇ ಬಿತ್ತು, ಎದ್ದಲ್ಲೆ ಎತ್ತು (ಧಾರವಾಡ)
* ಹುಳುಕು ಚಿತ್ತಿ (ಹೊನ್ನಾವರ - ಉ. ಕ.)
* ಚಿತ್ತಾ ಮಳೆ, ವಿಚಿತ್ರದ ಬೆಳೆ.
* ಕುರುಡು ಚಿತ್ತ ಮಳೆ, ಎರಚಿದತ್ತ ಬೆಳೆ.
* ಚಿತ್ತಿ ಮಳೆಗೆ ಕುರುಡು, ದಿಗಿಲು ; ಹಗಲು ಬರುತ್ತೆ, ರಾತ್ರಿ ಬರಲ್ಲ.
* ಚಿತ್ತ ವಾನುಲೋ ಚಿನಕು ನೇಲ ಪಡಲೇದು (ಗೌರಿಬಿದನೂರು, ಕೋಲಾರ)
* ಚಿತ್ತಿ ಮಳೆಗೆ ಗಳೆ ಹೊಡೆದ ಒಂದು ಎತ್ತಿನ ಕೊಂಬು ತೋಯಿತು. ಇನ್ನೊಂದರ ಕೊಂಬು ತೋಯಲಿಲ್ಲ. (ಚಿತ್ರದುರ್ಗ)
* ಸ್ವಾತಿ ಮಳೆಗೆ ಎತ್ತಿನ ಒಂದು ಕುಂಡಿ ತೋದರೆ ಇನ್ನೊಂದು ಕುಂಡಿ ತೋಯೂದಿಲ್ಲ. (ಧಾರವಾಡ)

ಇತ್ಯಾದಿ ಗಾದೆ ಮಾತುಗಳಿಂದ ಜನಪದರು ಈ ಮಳೆಯ ವಿಶ್ಲೇಷಣೆ ಮಾಡಿರುತ್ತಾರೆ.

ಮಳೆಗಾಲದ ದಿನಗಳಲ್ಲಿ ಬೀಳುವ ಹದಿನೈದು ಮಳೆಗಳ ಪೈಕಿ ಚಿತ್ತೆಯಷ್ಟು ಅಪಹಾಸ್ಯಕ್ಕೀಡಾದ ಮಳೆ ಬೇರೊಂದಿಲ್ಲ. ಸುಮಾರಾಗಿ ಅಕ್ಟೋಬರ್ ಮಧ್ಯ ಭಾಗದಲ್ಲಿ ಬೀಳಬೇಕಾದ ಮಳೆ ಇದು. ಆದರೆ 'ಇದು ಅತ್ಯಂತ ಬೇಜವಾಬ್ದಾರಿ ಮಳೆ' ಎಂದೇ ನಮ್ಮ ಜಾನಪದರ ಅನುಭವ. 'ಇದು ಮನಸ್ಸು ಬಂದ ಗಿರಾಕಿ, ಹೋದಲ್ಲಿ ಹೋಯ್ತು, ಬಂದಲ್ಲಿ ಬಂತು' ಎಂಬ ನಮ್ಮ ಜನ ತಿಳಿದು ಲೇವಡಿ ಮಾಡಿದ್ದಾರೆ. ಅತ್ಯಂತ ವಿಚಿತ್ರ ವರ್ತನೆಯ ಮಳೆ ಇದು. ಒಂದೆಡೆ ಬಿದ್ದರೆ ಅಲ್ಲಿಂದ ನಾಲ್ಕೆಂಟು ಮಾರು ದೂರದಲ್ಲಿ ಕೂಡಾ ಬೀಳದಿರಬಹುದು. ಆದ್ದರಿಂದಲೇ ಇದನ್ನು 'ಕುರುಡು ಚಿತ್ತಿ', 'ಚಿತ್ತಿ ಮಳೆ ಚಿತ್ರಗಡಕ', 'ಚಿತ್ತಿ ಮಳಿಗೆ ಎತ್ತಿನ ಒಂದು ಕುಂಡಿ ತೊಯ್ದರೆ ಮತ್ತೊಂದು ತೋಯುವುದಿಲ್ಲ' ಎಂದೆಲ್ಲ ವರ್ಣಿಸಿ ತಮಾಷೆ ಮಾಡಿದ್ದಾರೆ. ಅಷ್ಟೇ ಅಲ್ಲ. ಇದನ್ನು ಸಾಮಾನ್ಯವಾಗಿ ರಾತ್ರಿ ಮಾತ್ರ ಬರುತ್ತದೆಂದು ತಿಳಿದು ಇದೊಂದು ಅಂಜುಕುಳಿ ಮಳೆ ಎಂದೂ ಆದ್ದರಿಂದಲೇ ಇದು ರಾತ್ರಿ ಮಾತ್ರ ಬರುವುದೆಂದೂ ಅಣಕವಾಡಿದ್ದಾರೆ.

ಚಿತ್ತೆ ಮಳೆಯನ್ನು ಎಲ್ಲಿಯೂ ಸ್ವಾಗತಿಸುವಂತೆ ಕಾಣದು. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನಲ್ಲಿ ಇದನ್ನು 'ಹುಳುಕು ಚಿತ್ತೆ' ಎಂದು ಕರೆದು ಇದು ಬಂದ್ರೆ ಭತ್ತಕ್ಕೆ ಹುಳು ಬೀಳುತ್ತೆ ಎಂದು ನಂಬಿದ್ದಾರೆ. ಶಿವಮೊಗ್ಗ ಜಿಲ್ಲೆಯ ಮಲೆನಾಡು ತಾಲ್ಲೂಕಾದ ಹೊಸನಗರ ತಾಲ್ಲೂಕಿನಲ್ಲಿ ಹಸ್ತೆ ಹಣಕಬೇಕು. ಚಿತ್ತೆ ಬರೀಬೇಕು' ಎಂಬ ಗಾದೆ ಇದೆ. ಅಂದರೆ ಹಸ್ತೆ ಮಳೆ ಕೆಲವು ಹನಿ ಹಾಕಬೇಕು. ಚಿತ್ತೆ ಮಳೆ ಹಾಗೇ ದಾಟಿ ಹೋದರೆ ಸಾಕು ಎಂದರ್ಥ. ಚಿತ್ತೆ ಮಳೆ ದಿನಗಳ ಬಿಸಿಲೇ ಬೆಳೆಗೊಳ್ಳೆಯದು ಎಂಬ ನಂಬಿಕೆಯೂ ಇದೆ. ಹಸ್ತ, ಚಿತ್ತೆ ಮಳೆಗಳು ದಾರಿಗೊತ್ತಿಲ್ಲದ ಮಳೆಗಳೆಂದೂ ಶಬ್ದಮಾಡಿ ಕರೆದರೆ ಅಲ್ಲಿ ಬಂದು ಸುರಿಯುತ್ತವೆಂದೂ ಹಳೇ ಮೈಸೂರು ಭಾಗದ ಕೆಲವೆಡೆ ನಂಬಿಕೆ ಇದೆ.

ಜನಪದ ಮಹಾಭಾರತದಲ್ಲಿ ಚಿತ್ತೆ ಮಳೆಗಳ ಹುಟ್ಟಿನ ಬಗೆಗೆ ಒಂದು ಸ್ವಾರಸ್ಯಕರವಾದ ಕತೆ (ಪಾಂಡವರು ಅವರೆ ಪರ್ವದಲ್ಲಿ) ಇದೆ. ಗಾಂಧಾರಿ, ದೃತರಾಷ್ಟ್ರ, ಕುಂತಿ ಮತ್ತು ವಿದುರರು ಲೋಕದಲ್ಲಿ ಅನುಭವಿಸಿದ್ದು ಸಾಕು ಎಂದು ತೀರ್ಮಾನಿಸಿ, ಆಶ್ರಮ ಜೀವನ ನಡೆಸಿ ಮುಕ್ತಿ ಪಡೆಯಲು ಮುಂದಾಗುತ್ತಾರೆ.

``ಹೊರಟು ನಿಂತಾಗ ವನಕೆ - ಕೊಂತ್ಯಮ್ಮ
ಪುತ್ತುರರ ಕರೆದಳಾಗ
ಕುಂತಲ್ಲಿ ನಿಂತಲ್ಲಿ ಕೊಂತಮ್ಮನ ಮಕ್ಕಳ
ಹೆಸರುಳಿಯಬೇಕೆಂದು - ಕೊಂತ್ಯಮ್ಮ
ಹೆಸರು ಕಾಳೆರಚಿದಳು!
ವನಕೆ ಹೋಗುವ ಹೊತ್ತಲಿ - ಕೊಂತಮ್ಮ
ಮೊಳ್ಳಿಂದ ಅವರೆ ಕಾಳ
ತಗುದು ಧರ್ಮರ ಕೈಗೆ ಕೊಡುತ ಅಂದಳು ಕೊಂತಿ
ಪಾಂಡವರು ಅವರ ಅವರೆ!''೨೧

ಎಂದು ಹೇಳಿ ಕುಂತಿಯು ಗಜ ಗೌರಿ ವ್ರತ ಮಾಡುವಾಗ ದೇವಲೋಕದಿಂದ ಪಡೆದಿದ್ದ, ಅವರೆ ಕಾಳುಗಳನ್ನು ತೆಗೆದಿಟ್ಟುಕೊಂಡಿದ್ದಳು. ಈ ಹೆಣ್ಣು ಮಗಳು, ಈ ನೆಲದ ಮೇಲೆ ನ್ಯಾಯ, ನೀತಿ, ಸತ್ಯ ಧರ್ಮಗಳು ಇರುವವರೆಗೆ ಪಾಂಡವರು ಅವರೆ ಅಂತ ಅವರೆ ಕಾಳುಗಳನ್ನು ನೋಡಿಕೊಂಡು, ಜಗತ್ತಿನ ಜನರೆಲ್ಲ ಪಾಂಡವರು ಧರ್ಮಕ್ಕಾಗಿ ಹೋರಾಡಿದವರು ಎನ್ನುವುದಕ್ಕೆ ಈ ಅವರೆ ಕಾಳು ಸಾಕ್ಷಿಯಾಗಿ ಇರಲಿ ಎಂದು ಹೇಳಿ ಕಾಡಿಗೆ ಹೊರಡುತ್ತಾಳೆ.

ಈ ರೀತಿ ಧರೆಯಲ್ಲಿ ಪಾಂಡವರ ಇರುವಿಕೆಯನ್ನು ಅವರೆ ಕಾಲುಗಳು ಸಂಕೇತಿಸುತ್ತವೆ.

ಪಾಂಡವರು ಹಸ್ತಿನಾಪುರ ಬಿಟ್ಟು ಊರ ಬಾಗಿಲಿಗೆ ಬರಲು, ಹೊಲಗದ್ದೆಗಳಲ್ಲಿ ದುಡಿಯುತ್ತಿದ್ದ ರೈತರು ಅವರನ್ನು ಕಂಡು ಓಡಿ ಬರುತ್ತಾರೆ.

'ಸ್ವಾಮಿ ನೀವು ಸೊರ್‍ಗಾರೋಣ ಮಾಡಕೆ-ಹೊಂಡಿದ್ದೀರಿ ಅಂತ ತಿಳೀತು
ನೀವು ಸತ್ಯವಂತರು ಧರ್ಮಾತ್ಮರು
ನ್ಯಾಯ ನೀತಿ ಬಲ್ಲೋರು
ನೀಉ ನಮ್ಮನ್ನ ಬಿಟ್ಟು ಹೋದರೆ
ನಿಮ್ಮ ಜೊತೆ ಸತ್ಯ ಧರ್ಮ ನ್ಯಾಯ ನೀತಿ ಒಂದೂ ಉಳೀದಂಗೆ
ಈ ಧರಣಿ ನಾಶವಾಗುವುದಿಲ್ಲವೆ?
ನಮ್ಮನ್ನು ಮಾತ್ರ ಬಿಟ್ಹೋಗಬೇಡಿ"೨೨



ಎಂದು ಪಾಂಡವರನ್ನು ಪರಿಪರಿಯಾಗಿ ಕೇಳಿಕೊಳ್ಳುತ್ತಾರೆ. ಆದರೆ ಅವರ ಮಾತಿಗೆ ಓ ಗೊಡದ ಧರ್ಮರಾಯನು ...

``ಅಪ್ಪಾ ಒಕ್ಕಲಿಗರೇ,
ತಾಯಿ ಕೊಂತಮ್ಮ ಈ ನೆಲದ ಮಗಳು
ತಂದೆ ಪಾಂಡುರಾಜ ಈ ನಾಡಿನ ರಾಜ
ಅಂತಾಪುರ ಮಕ್ಕಳಾದ ನಾವು
ಸೊರ್ಗಾರೋಣ ಮಾಡ್ದೆ ಉಳಿಯೋಂಗಿಲ್ಲ.
....
....
ನೋದಿ ನಮ್ಮ ತಾಯಿ ಕೊಂತಮ್ಮ
ಗಜ ಗೌರಿ ರೊತ ಮಾಡಿದಂತ ಸಮಯದಲ್ಲಿ
ದೇವು ಲೋಕದಿಂದ ಬಂದ ದಿವಸ ಧಾನ್ಯಗಳಲ್ಲಿ
ಅವರೆ ಕಾಳ್ಗಳ ತಗದ್ದು ಮಡೀ ಕೊಂಡಿದ್ರು
ಆ ಅವುರೆ ಕಾಳ್ಗಳ ಕೊಟ್ಟವುರೆ
ನೀವು ಸಾಲೊಡ್ಕೊಂಡೋದ್ರೆ
ನಾನು ಅವುರೇ ಕಾಳ ಬಿತ್ತುತೀನಿ'' [೨೩]

ಹೀಗೆ ಧರೆಯಲ್ಲಿ ಅವರೆ ಕಾಳನ್ನು ಬಿತ್ತಿದ್ದರು. ಪಾಂಡವರು ಅವರೆ ಎನ್ನುವುದನ್ನು ಸಾರಿದರು. ಮುಂದೆ ಅವರೆ ಗಿಡ ಬೆಳೆದು ಫಸಲು ಬರಲು, ರೈತರು (ಕಾರ್ತಿಕ ಮಾಸದಲ್ಲಿ) ಕುಂತಿಯ ನೆನಪಿಗಾಗಿ ಕುಂತಿ ಪೂಜೆ ಮಾಡುತ್ತಾರೆ.

``ಇತ್ಲಾ ಕಡೆ ಯಮಲೋಕದ ನರಕದಲ್ಲಿ
ಶಕುನೀನೊ ದುರ್ಯೋದನೂ
ಒಂದು ಎಳೆ ನೊಲುವ ತಂತೀಲಿ ನ್ಯಾತಾಡ್ತಾ ಅವುರೆ
ಅವರು ನ್ಯಾತಾಡ್ತಾ ಅವುರಲ್ಲಿ
ಅದರ ಕೆಳಗೆ ಮಲ ಮೂತ್ರದ ಗುಂಡಿ ಅದೆ
ಆ ಒಂದು ಎಳೆ ದಾರದಷ್ಟು ಪುಣ್ಯ ಅವುರ್ಗೆ ಉಳುದದೆ

ಹಿಂಗೆ ನ್ಯಾತಾಡ್ತಾ ಇರೋಗ ಶಕುನಿ

ದುರ್ಯೋದನನ್ನೂ ನೋಡಿ

ಇವನಿಗೆ ಇನ್ನೂ ತಕ್ಕನಾದ ಶಾಸ್ತಿ ಮಾಡಿ ಬೇಕೊಂತ್ಹೇಳಿ

ವಸ್ತ ದುರ್ಯೋದ

ನೀನು ಎಷ್ಟು ಹೋರಾಟ ಮಾಡಿ ಏನು ಬಂತು?

....

ಪಾಂಡವರು ಅವರೆ ಅಂತ ಅವರೇ ಕಾಳ ಬಿತ್ಕೊಂಡು ಬರ್ತಿದ್ದಾನೆ ''೨೪

ಪಾಂಡವರು ಅವರೆ ಅಂದರೆ ಕೌರವರು ಇಲ್ಲ ಎಂದು ಅರ್ಥವಲ್ಲವೇ? ದುರ್ಯೋಧನ, ಎಂದು ಅವನಲ್ಲಿ ಇಲ್ಲದ ವಿಷ ಬೀಜವನ್ನು ಶಕುನಿ ಬಿತ್ತುತ್ತಾನೆ. ಕೋಪಗೊಂಡ ದುರ್ಯೋಧನ - ಮಾವ...

''ನಾನು ಕವರೂವ ನಾನು ಕೌರವ

ಈಗ ನನ್ನ ಶಕ್ತಿ ಸಾಹಸಗಳ ನೋಡು

ಈಗ ನೋಡು ನಾನು ಚಿಟ್ಟೆ ಮಳೆ ಹುಯ್ಸಿಸ್ತೀನಿ

ಧರ್ಮರಾಯನ ಅವರೇ ಗಿಡಗಳ್ಗೆಲ್ಲ

ಹಸುರ್‍ಹುಳ ಕಂಬ್ಳಿಹುಳ ಚಿಟ್ಟೆ ಹುಳ ಹುಪ್ಪಿಗಳ ಉತ್ಪತ್ತಿ ಮಾಡ್ತಿದ್ದೀನಿ"೨೫

ಈ ರೀತಿಯಾಗಿ ಚಿತ್ತ ಮಳೆಯ ಹುಟ್ಟಿನ ಕತೆಯನ್ನು ನಮ್ಮ ಜನಪದರು ಕಟ್ಟಿಕೊಂಡಿದ್ದಾರೆ.

೧೫ ಸ್ವಾತಿ ಮಳೆ ನಕ್ಷತ್ರ :-

ಚಾತಕ ಪಕ್ಷಿ ಕಾದು ಕಾತರಿಸುವ ಮಳೆ ಸ್ವಾತಿ ಎಂಬುದು ಒಂದು ಕವಿ ಸಮಯ. ಈ ಮಳೆ ಹನಿಯೇ ಸಿಂಪಿನೊಳಗೆ ಸೇರಿ ಮುತ್ತಾಗುತ್ತದೆ ಎಂಬುದಿನ್ನೊಂದು ಕವಿ ಸಮಯ. ಇವೆರಡೂ ರಾಜಶೇಖರನ ಕಾವ್ಯ ಮೀಮಾಂಸೆಯಲ್ಲಿ ದಾಖಲಾಗಿದ್ದು, ಭಾರತಕ್ಕೆಲ್ಲ ಸಾಮಾನ್ಯವಾಗಿರುವಂಥವು. ಇದನ್ನೇ ಹೋಲುವ ಜಾನಪದ ನಂಬಿಕೆಯೊಂದು ಕರಾವಳಿ ಹಾಗೂ ದಕ್ಷಿಣ ಕರ್ನಾಟಕದಲ್ಲಿದೆ. 'ಸ್ವಾತಿ ಮಳೆಗೆ ಮುತ್ತುಗಳು ಹೆಚ್ಚಾಗುತ್ತವೆ' ಎಂಬುದೇ ಆ ನಂಬಿಕೆ. ಇದು ಬಹುಶಃ ಶಿಷ್ಟದಿಂದ ಜಾನಪದಕ್ಕೆ ಇಳಿದಿರುವ ನಂಬಿಕೆ ಆಗಿರಬಹುದು. ಅಂದರೆ, ಕವಿ ಸಮಯವೇ ಒಂದು,' ಜಾನಪದ ನಂಬಿಕೆಯಾಗಿ ಮೈ ತಳೆದಿರಬಹುದು.

ಅಕ್ಟೋಬರ್ ಕೊನೆ ದಿನಗಳು ಈ ಮಳೆಯ ಕಾಲ. ಅಂದರೆ ಸುಮಾರು ಮೂರು ತಿಂಗಳ ಕಾಲ ಜಡಿದಿರುತ್ತದೆ. ಆಗಲೇ ಕರಾವಳಿ ಪ್ರದೇಶವಾದ ಹೊನ್ನಾವರ, ಕುಮಟಾ, ತಾಲ್ಲೂಕುಗಳಲ್ಲಿ ಅತಿ ಮಳೆಯಿಂದಾಗಿ ಮನೆಯ ಮಾಡುಗಳು, ತಡಿಕೆಯ ಗೋಡೆ, ಯಾವಾಗಲೂ ಈ ಕಾಲದಲ್ಲಿ ಜರ್ಜರಿತವಾಗಿರುತ್ತವೆ. ಈಗ ಅವುಗಳ ರಿಪೇರಿ ಅಗತ್ಯವಾಗಿರುತ್ತವೆ. ಅದಕ್ಕೆ ತಕ್ಕಂತೆ ಹಸ್ತೆ, ಚಿತ್ತೆ, ಸ್ವಾತಿ - ಮಳೆಗಳೂ ಎಡೆಬಿಡದೆ ಸುರಿಯುವ ಮಳೆಗಳೇನಲ್ಲ. ಆದ್ದರಿಂದ ರಿಪೇರಿಗೆ ಅಗತ್ಯವಾದಷ್ಟು

ಕಾಲಾವಕಾಶವೂ ದೊರೆಯುತ್ತದೆ. ಈ ಕಾರಣದಿಂದಲೇ 'ಸ್ವಾತಿ ಮಳೆಗೆ ತ್ಯಾಪೆ ಹಾಕೋದು' ಎಂಬ ಮಾತು ಈ ಕಡೆ ರೂಢಿಯಲ್ಲಿದೆ.

ರೋಹಿಣಿ ಉತ್ತರೆಗಳಂತೆ ಸ್ವಾತಿಯೂ ರೈತರಿಗೆ ತುಂಬ ಪ್ರಿಯವಾದ ಹಾಗೂ ಅಗತ್ಯವಾದ ಮಳೆ. ಕರ್ನಾಟಕದ ಎಲ್ಲೆಡೆ ಈ ಪ್ರೀತಿ ವ್ಯಕ್ತವಾಗಿದೆ. ಗಾದೆಗಳಲ್ಲಿ ಇದನ್ನು 'ಮುತ್ತಿನ ಮಳೆ' ಎಂದು ಜನಪದರು ಕರೆದಿದ್ದಾರೆ. ಈ ಮಳೆಯ ಕನಿಷ್ಠ. ಪರಿಣಾಮದ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯವರು 'ಹಾಲಿಗೆ ಈ ನೀರಿನ ಹನಿ ಹಾಕಿದರೆ ಸಾಕು' ಅದೇ ಹೆಪ್ಪಾಗುತ್ತದೆ. 'ಬೇರೆ ಮಜ್ಜಿಗೇನೇ ಬೇಡ' ಎನ್ನುತ್ತಾರೆ. ಪುನಃ ರೈತರೇ ಆ ದಿನಗಳಲ್ಲಿ ಬಿತ್ತಿದರೆ ಬಹುಶಃ ಎರಡನೆಯ ಬೆಳೆ. ಫಸಲು ಶಾಶ್ವತ ಎಂದೂ ಜನಪದರು ನಂಬಿದ್ದಾರೆ.

ಉಪಯುಕ್ತ ಮಳೆಗಳ ಪೈಕಿ ಸ್ವಾತಿ ಕೊನೆಯದು. ಉಳಿದವು ಲೆಕ್ಕಕ್ಕಿಲ್ಲ. ಆದ್ದರಿಂದಲೇ ಸ್ವಾತಿ ಮಳಿ ಆದ ಮ್ಯಾಗ ಯಾತರ ಮಳೆ? ಎಂಬುದು ಗಾದೆ ಮಾತಾಗಿ ಹರಡಿಕೊಂಡಿದೆ.

* ಸ್ವಾತಿ ಮಳೆ ಮುತ್ತಿನ ಮಳೆ
* ಸ್ವಾತಿ ಮಳೆಯಲ್ಲಿ ಕಾಸಿಗೊಂದು ಕುರಿ
* ಸ್ವಾತಿ ನಾ ಹೇತಿ ಅಂದ್ರೂ ಬಿಡದು
* ಸ್ವಾತಿ ಮಳೆಯಲ್ಲಿ ಸಾಲೊಳಗೆ ನೀರು ಹರಿದರೂ ಬಿತ್ತುವುದು ಬೇಡ
* ಹಸ್ತ ಹನಿಕೆ ಚಿತ್ತ ಬೆರಸಿ ಸ್ವಾತಿ ಮಳೆ ಸುರಿಮಳೆಯಾದರೆ
* 'ಎತ್ತು ಕೊಟ್ಟು ಎಮ್ಮೆ ತಾ' ಅಂದಳು.
* ಸ್ವಾತಿ ಮಳೆಗೆ ತ್ಯಾಪೆ ಹಾಕೋದು ಹೊನ್ನಾನರ - ಉ. ಕ.
* ಸ್ವಾತಿ ಮಳೆ ಹೇತೇನಂದ್ರೂ ಬಿಡದು (ಧಾರವಾಡ, ಬಿಜಾಪುರ)
* ಸ್ವಾತಿ ಸುರ‍್ಯಾಕ ಹತ್ತಿದರ ಹೇತಾಡಿದರೂ ಬಿಡೊದಿಲ್ಲ (ಧಾರವಾಡ)
* ಸ್ವಾತಿ ಮಳಿ ಆದಮ್ಯಾಲ ಯಾತರ ಮಳಿ? (ಬಿಜಾಪುರ, ಶಿವಮೊಗ್ಗ)
* ಸ್ವಾತಿಗು ಮುತ್ತುವು ಲೇಗುನು. (ತುಳು :: ಸ್ವಾತಿ ಮಳೆಗೆ ಮುತ್ತು ಬೆಳೀತದೆ ; ದ. ಕ.)
* ಸ್ವಾತಿ ಮಳಿ ಆದಸ್ಯಾಕೆ ಆತೇನು?
* ಸ್ವಾತಿ ಮುತ್ತಿನ ಮಳೆ.
* ಸ್ವಾತಿ ಮಳೇಲಿ ಕಾಸಿಕೊಂದಿ ಕುರಿ.
* ಸ್ವಾತಿ ಮಳೇಲಿ ಸಾಲೊಳಗೆ ನೀರು ಹರಿದ್ರೂ ಬಿತ್ತುವುದು ಬೇಡ.
* ಸ್ವಾತಿನು ಪೇರಿಗು ಬೆಪ್ಪು ಪಾಡಲೆ. (ತುಳು : ಹಾಲಿಗೆ ಸ್ವಾತಿಯ ನೀರನ್ನೇ ಹೆಪ್ಪಿಗೆ ಹಾಕು (ಅಂದರೆ ಅದೇ ಸಾಕಾಗುತ್ತದೆ. ಬೇರೆ ಮಜ್ಜಿಗೆಯ ಅಗತ್ಯವಿಲ್ಲ ಎಂದು ಅರ್ಥ) ಕಾರ್ಕಳ ದ. ಕ. ಜಿಲ್ಲೆ)
* ಸ್ವಾತಿಡ್ ಬಿತ್ತ್ ಬೂರುಂಡ ಶಾಶ್ವತೊ. (ತುಳು : ಸ್ವಾತಿಯಲ್ಲಿ ಬಿತ್ತು ಹಾಕಿದರೆ ಬೆಳೆ ಖಂಡಿತ)

ಸ್ವಾತಿ ಮಳೆ ಸೋತೇ ಅಂದ್ರೂ ಬಿಡದು. ಎಂಬಿತ್ಯಾದಿ ಗಾದೆ ಮಾತುಗಳಿಂದ ಜನಪದರಲ್ಲಿ ಈ ಮಳೆಯ ವಿವರಣೆ ಇದೆ.

೧೬. ವಿಶಾಖಾ - ವಿಸಾತಿ - ಅನುರಾಧಾ ಮಳೆಗಳ ನಕ್ಷತ್ರಗಳು :-

ಅಷ್ಟೊಂದು ಗಂಭೀರವಾಗಿ ಗಣಿಸಲಾಗದ ಮಳೆಗಳು ಇವು -ಎಂಬುದು ನಮ್ಮ ಜಾನಪದರ ನಂಬಿಕೆ. ಆದರೆ, ಇವು ಸುರಿದರೆ ಪರಿಣಾಮ ಬೀರದೆ ಹೋಗುವುದಿಲ್ಲ. ಅಷ್ಟೇ ಅಲ್ಲ, ಪರಿಣಾಮದಲ್ಲಿ ಪರಸ್ಪರ ಪೂರಕವಾದ ಮಳೆಗಳಿವು ಎಂಬುದೂ ನಮ್ಮ ಜನಪದರು ಹಾಗೂ ರೈತರ ಅಂಬೋಣ. ಉದಾಹರಣೆಗೆ 'ವಿಶಾಖಾ ಮಳೆ ಹೊಡೆದರೆ ಬೆಳೆಗಳಿಗೆ ಹುಳು ಬೀಳುವುದೆಂದೂ, ಅನುರಾಧಾ ಮಳೆಯಿಂದ ಅವು ನಾಶವಾಗುವುದೆಂಬ ನಂಬಿಕೆ ಜನಪದರಲ್ಲಿದೆ. ಆದ್ದರಿಂದಲೇ ವಿಶಾಖಾ ಮಳೆ ಬಿದ್ದರೆ ಅನುರಾಧಾ ಮಳೆ ಕೂಡಾ ಬೀಳಲೇಬೇಕು ಎಂದು ಗ್ರಾಮೀಣರು ಬಯಸುತ್ತಾರೆ. ವಿಶಾಖಾ, ಹಿಂಗಾರಿ ಮಳೆಗಳ ಪೈಕಿ ಕೊನೆಯದು ವಿಶಾಖಾ ಮಳೆ. ಪಿಶಾಚಿ ಹಿಡಿದ ಹಾಗೆ, (ಅ) ಹಿಡಿದಂಗೆ ವಿಶಾಖೆ ಮಳೆ 'ಅಶಿಷಿ' ಆಂದ್ರೂ ಬಿಡದು ಎಂದೂ ಜನಪದರು ಹೇಳುತ್ತಾರೆ.

ಈ ಮಳೆಯ ಹೊತ್ತಿಗೆ ಕರ್ನಾಟಕದ ಬಹುತೇಕ ಭಾಗಗಳಲ್ಲಿ ಆ ದಿನಗಳಲ್ಲಿ ಫಸಲು ಕಟಾವಿಗೆ ಸಿದ್ಧವಾಗಿರುತ್ತದೆ. ದೀಪಾವಳಿಯ ಅಜುಬಾಜಿನ ಕಾಲ ಇದು. ಮಲೆನಾಡು, ಬಯಲುಸೀಮೆ, ಕರಾವಳಿ ಪ್ರದೇಶದ ಗದ್ದೆಗಳಲ್ಲಿ ಹಾವುಗಳು ಕಾಣಿಸಿಕೊಳ್ಳುವ ಸಮಯ ಇದು. ಆದ್ದರಿಂದ 'ಸ್ವಲ್ಪ ನೋಡಿಕೊಂಡು ಓಡಾಡಿ' ಎಂದು ಕಿರಿಯರಿಗೆ ಹಿರಿಯರು (ವಿಶೇಷತಃ ರಾತ್ರಿಗಳಲ್ಲಿ) ಎಚ್ಚರಿಸುತ್ತಾರೆ.

ಈ ಗಾದೆಗಳ ಪ್ರಕಾರ ಈ ಎರಡೂ ಮಳೆಗಳೂ ವಿಶಾತಿ ಮತ್ತು ಅನುರಾಧಾ ಮಳೆಗಳೂ ಹೊಡೆದರೆ ಬಿರುಸಾಗಿಯೇ ಹೊಡೆಯುತ್ತವೆ. ಅನುರಾಧಾ ಮಳೆ ರಾಗಿ ಬೆಳೆಗೆ ಒಳ್ಳೆಯದೆಂಬ ನಂಬಿಕೆಯೂ ಇದೆ. ಅನುರಾಧಾ ಮಳೆಯ ದಿನಗಳಿಂದ ಚಳಿಗಾಲ ನಿಧಾನವಾಗಿ ಆರಂಭವಾಗುತ್ತದೆ. ಆದ್ದರಿಂದಲೇ ಅನುರಾಧಾ ಮಳೆಗೆ ಆನೆ ಮೈ ನಡುಗ್ತು' ಎಂಬ ಗಾದೆ ಇದೆ.

* ವಿಶಾಖಾ ಮಳೆ ಪಿಶಾಚಿ ಹಿಡಿದ ಹಾಗೆ.
* 'ವಿಶಾಖಾ' ಮಳೆ 'ಆಶಿಷಿ' ಅಂದ್ರೂ ಬಿಡದು.
* ವಿಷಾಕುವಾನುವಸ್ತೇ ವಿಷವುಲಗಲು ಪೊತಾಯಿ (ಗೌರಿಬಿದನೂರು)

ಅನುರಾಧಾ ಮಳೆಯ ನೀರನ್ನು ತೆಗೆದು ಹಾಲಿನ ಪಾತ್ರೆಗೆ ಹಾಕುವುದು ರೂಢಿ. ಹೊನ್ನಾವರ, ಕುಮುಟಾ ತಾಲ್ಲೂಕುಗಳಲ್ಲಿದೆ.

'ಜನಪದ ಮಹಾಭಾರತ' (ಪಿ.ಕೆ. ರಾಜಶೇಖರ - ಸಂ.) ದಲ್ಲಿ ವಿಶಾಖಾ ಮಳೆಗೆ ಸಂಬಂಧಿಸಿದಂತೆ ಒಂದು ಸ್ವಾರಸ್ಯಕರವಾದ ಕತೆಯಿದೆ. ಹಿಂದೆ ಚಿತ್ತೆ ಮಳೆಗೆ ಸಂಬಂಧಿಸಿದಂತೆ ಹೇಳಿದ ಕಥೆಯ ಮುಂದುವರಿಕೆಯೇ ವಿಶಾಖಾ ಮಳೆಗೆ ಸಂಬಂಧಿಸಿದ ಕಥೆಯಾಗಿದೆ.

ಪಾಂಡವರ ಕುರುಹು (ಹೆಸರು) ಧರೆಯಲ್ಲಿ ಉಳಿಯದಂತೆ ಮಾಡಲು ದುರ್ಯೋಧನನು ಚಿಟ್ಟೆಮಳೆಯನ್ನು ಕರೆದು ಸುರಿಸುತ್ತಿರಲು ಧರ್ಮರಾಯನಿಗೆ ಒಂದು ರೀತಿಯಲ್ಲಿ ಆತಂಕ ಉಂಟಾಗುತ್ತದೆ. ಧರ್ಮರಾಯ.

''ಕತ್ತೆತ್ತಿ ಮೇಲುಕ್ಕೆ ನೋಡುದ್ರು
ದುರ್ಯೋದ ಕೇಕೆ ಹಾಕೊಂಡು ನೆಗ್ತಾ
ಚಿಟ್ಟೆಮಳೆ ಹುಯಿಸ್ತಾ ಇದ್ದಾನೆ
ಆಗ ಧರುಂರಾಯ
''ವಸ್ತ ನರುಕುಕ್ಕೋದ್ರೂ ನಿನ್ನ ನೀಚ ಬುದ್ಧಿ ಬುಡ್ಲಿಲ್ಲವಲ್ಲ ಇರ್ಲಿ-
ಎಲೋ ಎಲೋ ಕರ್ಮಾತ್ಮನೆ - ಛೇ ಕೌರವ
ನೀನು - ಚಿಟ್ಟೆಹುಳ ಆಗಿ ಸುರಿದರೆ
ವಿಷಾತಿ ಮಳೆ ಹೂದು ಚಿಟ್ಟೆ ಹುಳ ಸಾಯಿಸುವೆ.
ತಿಳುಕೊಪ್ಪ ಮನಸಿನಲ್ಲಿ - ತಮ್ಮಯ್ಯ
ತಿಳುಕೊಪ್ಪ ಮನಸಿನಲ್ಲಿ''
ಪರಮಾತ್ಮನ ಹೇಸ್ರೇಳಿ ಧರುಂರಾಯ್ರು
ವಿಷಾತಿ ಮಳೆ ಹೊಯಿಸ್ರು
ಆಗ ಇದ್ದ ಬದ್ದ ಹಸ್ರುಳ ಕಂಬ್ಳಿಹುಳ ಚಿಟ್ಟೆಹುಳ ಹುಳು ಹುಪ್ಪಿಗಳೆಲ್ಲ ಮರೆಯಾಗಿ ಹೋದೋ

ಇತ್ಲಾ ಕಡೆ ನರಕದಲ್ಲಿ ಇದ್ದಂತ ದುರ್ರ್ಯೋದ್ನ
ಇದ್ದ ಒಂದು ಚೂರು ಪುಣ್ಯವೂ ತೀರೋಗಿ
ದಾರ ಕಿತ್ತು ಅವ್ನು ಮಲಮೂತ್ರದ ಗುಂಡಿಗೆ ಬಿದ್ದೋದ''[೨೫]

ಹೀಗೆ ಒಂದೊಂದು ಮಳೆ ನಕ್ಷತ್ರಗಳನ್ನು ಕುರಿತಂತೆ ನಮ್ಮ ಜನಪದರು ಆಯಾ ಆಯಾ ಕಾಲ ಘಟ್ಟಗಳಲ್ಲಿ ಅವು ಬೀಳುವ ಸಮಯಾವಧಿಯಲ್ಲಿ ತಮ್ಮ ಅನುಭವದಿಂದ ಹಲವಾರು ಗಾದೆ ಮಾತುಗಳಲ್ಲಿ, ಕಥೆಗಳಲ್ಲಿ ಅವುಗಳನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ. ಒಟ್ಟಾರೆ ಈ ಗಾದೆ ಮಾತುಗಳಲ್ಲಿ, ಕಥೆಗಳಲ್ಲಿ ಈ ಮಳೆಗಳಿಗೆ ಸಂಬಂಧಿಸಿದ ಕಲ್ಪನೆ, ನಂಬಿಕೆಗಳಲ್ಲಿ ಪ್ರಾದೇಶಿಕ ಮಟ್ಟದಲ್ಲಿ ಅಲ್ಪ ಸ್ವಲ್ಪ ಬದಲಾವಣೆಗಳಿರುವುದು ನಮಗೆ ತಿಳಿದು ಬರುತ್ತದೆ.

* * * * *

ಅಡಿ ಟಿಪ್ಪಣಿಗಳು

೧. ಜನಪದದಲ್ಲಿ ಮಳೆರಾಯನ ಮುನಿಸು - ಬಸವರಾಜ ಅಕಳವಾಡಿ - ಪುಟ - ೫

೨. ಮಳೆ ಒಂದು ಜಾನಪದೀಯ ಅಧ್ಯಯನ - ಡಾ. ಎಸ್.ಪಿ. ಪದ್ಮಪ್ರಸಾದ - ಪುಟ - ೧೨೦

೩. ಅದೇ - ಪುಟ - ೯೯

೪. ಆದೇ - ಪುಟ - ೭೯

೫. ಆಕಾಶ ಜಾನಪದ - ಪ್ರೊ. ಹಂಪನಾಗರಾಜಯ್ಯ - ಪುಟ - ೪೮

೬ ಅದೇ -

೭ ಅದೇ -

೮ ಅದೇ - ಪುಟ - ೪೮

೯ ಅದೇ -

೧೦ ಮಳೆ ಒಂದು ಜಾನಪದೀಯ ಅಧ್ಯಯನ - ಡಾ. ಎಸ್.ಪಿ. ಪದ್ಮಪ್ರಸಾದ - ಪುಟ - ೧೧೬

೧೧ ಅದೇ

೧೨ ಅದೇ - ಪುಟ - ೮೦

೧೩ ಅದೇ

೧೪ ಅದೇ - ಪುಟ - ೧೧೬

೧೫ ಅದೇ

೧೬ ಅದೇ - ಪುಟ - ೧೧೭

೧೭ ಅದೇ - ಪುಟ - ೧೧೮

೧೮ ಅದೇ

೧೯ ಅದೇ

೨೦ ಅದೇ - ಪುಟ - ೧೧೯

೨೧ ಜನಪದ ಮಹಾಭಾರತ - ಸಂ. - ಡಾ. ಪಿ.ಕೆ. ರಾಜಶೇಖರ್ - ಪುಟ - ೫೯೫

೨೨ ಅದೇ

೨೩ ಅದೇ

೨೪ ಅದೇ - ಪುಟ - ೫೯೬

೨೫ ಅದೇ

೨೬ ಅದೇ - ಪುಟ - ೫೯೭

* * * * *

ಅಧ್ಯಾಯ - 4

ಮಳೆಯ ಆಚರಣೆಗಳು - ನಂಬಿಕೆಗಳು

ಮೈಸೂರು ಸಾಂಸ್ಕೃತಿಕ ನಗರ ಎಂದೇ ಪ್ರಖ್ಯಾತವಾಗಿದ್ದು, ಜಿಲ್ಲೆಯಾದ್ಯಂತ ತನ್ನ ಒಡಲಿನಲ್ಲಿ ಹಲವಾರು ಜಾನಪದೀಯ ಕಲೆಗಳಿಗೆ ಆಶ್ರಯವಿತ್ತು ಆಗರವಾಗಿದೆ. ಅದೇ ರೀತಿ ಜಿಲ್ಲೆಯಾದ್ಯಂತ 'ಮಳೆ'ಯನ್ನೇ ಕರೆಯುವ, ಬೇಡವಾದಾಗ ನಿಲ್ಲುವಂತೆ ಮಾಡುವ ಸಾವಿರಾರು ಬಗೆಯ ಸಾಂಪ್ರದಾಯಿಕ ವಿಧಿ ವಿಧಾನಗಳು ಆಚರಣೆಯಲ್ಲಿವೆ.

ಮಳೆ ಇಲ್ಲದಿರುವಾಗ ಉತ್ತರ ಕರ್ನಾಟಕದ ಭಾಗಗಳಲ್ಲಿ ಗುರ್ಚಿಯನ್ನು ಹೊರುವುದರ ಮೂಲಕ ಮಳೆಗೆ ಪ್ರಾರ್ಥನೆ ಸಲ್ಲಿಸುವ ಆಚರಣೆ ಇದೆ. ಆ ಸಂದರ್ಭದಲ್ಲಿ ಹೇಳುವ ಹಾಡು ತುಂಬ ಪ್ರಸಿದ್ಧವಾಗಿದೆ.

ಗುರ್ಚಿ ಗುರ್ಚೀ ಎಲ್ಯಾಡಿ ಬಂದಿ
ಹಳ್ಳಾ ಕೊಳ್ಳಾ ತಿರುಗಾಡಿ ಬಂದೆ
ಕಾರಮಳಿಯೆ ಕಪ್ಪತಮಳಿಯೆ
ಸುರಿಮಳಿಯೇ ಸುರಿಮಳಿಯೇ||

ಸುರಿಮಳೆಯಾದರ ಒಕ್ಕಲಿಗ ಒಕ್ಕಲಿಗ
ಒಕ್ಕಲಿಗಣ್ಣ ಬಿತ್ತ್ಯೋ ಹೊನ್ನ
ಸುತ್ತ ಸುರಿಯಿತು ಸುರಿಮಳಿಯೋ ಸುರಿಮಳಿಯೆ||

ಆಯ್ಗಾರ ಹೇಣ್ತಿ ಗಂಡ ಹಡದಾಳೋ
ನೆತ್ತಿಗೆ ಎರಿಯಾಕ ನೀರಿಲ್ಲ ನೀರಿಲ್ಲ
ಕರೆಕಂಬಳಿಯ ಗುರುಸಿದ್ದ ಗುರುಸಿದ್ದ
ಕಂಬಳಿ ಬೀಸೋ ಸುರಿಮಳಿಯೋ ಸುರಿಮಳಿಯೇ||

ಕಾರಮಳಿಯೋ ಕಪ್ಪತ ಮಳಿಯೋ
ಹಳ್ಳಾ ಕೊಳ್ಳಾ ತುಂಬಿಸು ಮಳಿಯೇ
ಸುಣ್ಣಾ ಕೊಡತೀನಿ ಸುರಿಯಲೇ ಮಳಿಯೇ
ಬಣ್ಣಾ ಕೊಡತೀನಿ ಬಾರಲೇ ಮಳಿಯೇ
ಸುರಿಯಲೇ ಮಳಿಯೇ||

(ಹಂಪ ನಾಗರಾಜಯ್ಯ - ಆಕಾಶ ಜಾನಪದ)

ಆ ಆಚರಣೆಗಳನ್ನು ಅಧ್ಯಯನದ ದೃಷ್ಟಿಯಿಂದ ಈ ಕೆಳಕಂಡಂತೆ ವರ್ಗೀಕರಿಸಿ ಅಧ್ಯಯನ ಮಾಡಬಹುದಾಗಿದೆ.

1. **ಸಸ್ಯಗಳನ್ನೊಳಗೊಳ್ಳುವ ಮಳೆ ಆಚರಣೆಗಳು.**
2. **ಪ್ರಾಣಿಗಳನ್ನೊಳಗೊಳ್ಳುವ ಮಳೆ ಆಚರಣೆಗಳು.**
3. **ಆರಾಧನಾ ವಿಧಾನದ ಮಳೆ ಆಚರಣೆಗಳು.**
4. **ಮಳೆಯನ್ನು ತಡೆಯುವ ಆಚರಣೆಗಳು.**

1 ಸಸ್ಯಗಳನ್ನೊಳಗೊಳ್ಳುವ ಮಳೆ ಆಚರಣೆಗಳು

ಸಸ್ಯಗಳು ನಮ್ಮ ಗ್ರಾಮೀಣರ ಬದುಕಿನಲ್ಲಿ ಅವಿನಾಭಾವ ಸಂಬಂಧ ಹೊಂದಿವೆ. ನಮ್ಮಲ್ಲಿ ಈ ಆಚರಣೆಗೆ ಸಂಬಂಧಿಸಿದಂತೆ ಗರಿಕೆ (ಕರಿಕೆ), ತೆಂಗು ಇತ್ಯಾದಿ ಸಸ್ಯ ವರ್ಗಗಳನ್ನು ಬಳಸುತ್ತಾರೆ. ಮರ - ಗಿಡಗಳಲ್ಲಿ ದೇವರು ವಾಸ ಮಾಡುವನೆಂದೂ, ಅವುಗಳನ್ನು ನಾಶಪಡಿಸುವುದರಿಂದ ಮಳೆಯು ಬರುವುದಿಲ್ಲ ಎಂದೂ ನಂಬಿಕೆ ಇದೆ. ಇದು ಭಾಗಶಃ ವೈಜ್ಞಾನಿಕವಾಗಿ ಸತ್ಯಕ್ಕೆ ಹತ್ತಿರವಾಗಿದ್ದು ಪ್ರಕೃತಿ ಸಹಜವಾದದ್ದು ಕೂಡ ಆಗಿದೆ. ತೀ. ನರಸೀಪುರ ಭಾಗದ ಕೆಲವು ಹಳ್ಳಿಗಳಲ್ಲಿ ಮಳೆ ಬರದೆ ತೊಂದರೆಯಾದಾಗ ಜನರೆಲ್ಲಾ ಕೂಡಿ ಮೆರವಣಿಗೆಯ ಮೂಲಕ ಊರಿನ ಹೊರ ನಡೆದು ಗ್ರಾಮದ ಎಲ್ಲೆಯಲ್ಲಿ ಗುಂಡಿಯನ್ನು ತೆಗೆದು ಒಂದು ತೆಂಗಿನ ಕಾಯಿಯನ್ನು ಸಿಪ್ಪೆಯ ಸಹಿತ ಹೂಳುತ್ತಾರೆ. ಅದು ಸಿಡಿದು ಮಳೆ ಬರುವುದೆಂಬ ನಂಬಿಕೆ ಈ ಜನರಲ್ಲಿದ್ದು ಇದು ಪ್ರಮುಖ ಆಚರಣೆಯಾಗಿದೆ.

ಕೆ.ಆರ್. ನಗರ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ ರೈತರು ಸಮೃದ್ಧವಾಗಿ ಮಳೆ ಬೀಳಲಿ ಎಂಬ ಆಶಯದಿಂದ ಮೊದಲು ಬಿತ್ತನೆ ಮಾಡುವ (ರಾಗಿ ಇತ್ಯಾದಿ) ಧಾನ್ಯಗಳನ್ನು ಬುಟ್ಟಿಯಲ್ಲಿ ಹಾಕಿ ಆ ಬುಟ್ಟಿಯ ಹೊರಮೈಯಲ್ಲಿ ಅರಿಶಿಣ, ಕುಂಕುಮ ಮತ್ತು ವಿಭೂತಿಯನ್ನು ಹಚ್ಚಿ, ಧಾನ್ಯವನ್ನು ತುಂಬಿದ ಬುಟ್ಟಿಯಲ್ಲಿ ಒಂದು ಚಿಕ್ಕದಾದ ಸಗಣಿಯನ್ನು ಉಂಡೆಯಾಕಾರದಲ್ಲಿ ಮಾಡಿ ಅದಕ್ಕೆ ಕೆಲವು ಗರಿಕೆಯನ್ನು ತುದಿಯಲ್ಲಿ ಚುಚ್ಚಿ ಅದಕ್ಕೆ ಅರಿಶಿಣ, ಕುಂಕುಮ ಹಚ್ಚಿ ಗಂಧದ ಕಡ್ಡಿ ಬೆಳಗಿಸುತ್ತಾರೆ. (ಇದಕ್ಕೆ ಗಣಪತಿ ಎಂದೂ ಕರೆಯುವರು) ಇದನ್ನು ಧಾನ್ಯದ ಮೇಲಿಟ್ಟು ಗಂಧದ ಕಡ್ಡಿ ಸಿಕ್ಕಿಸಿಕೊಂಡು ತಲೆಯ ಮೇಲೆ ಹೊತ್ತು 'ಅಣಿ'

ಹಾಕುವ ಪ್ರದೇಶ (ಸಸಿ ಒಗ್ಗು ಹಾಕುವುದು) ದಲ್ಲಿಟ್ಟು ಪೂಜಿಸಿ ಬಿತ್ತುತ್ತಾರೆ. ಹೀಗೆ ಗರಿಕೆಯ-ಗಣಪನ ಪೂಜೆಯಿಂದ ಸಮೃದ್ಧ ಮಳೆಯಾಗುತ್ತದೆ ಎಂಬ ನಂಬಿಕೆ ಇದೆ.

"ಸುಗ್ಗಿಯಲ್ಲಿ ಕೊನೆಯದಾಗಿ ಕೊಯ್ದ ಧಾನ್ಯದ ಕಂತೆಯ ಮೇಲೆ ಅದನ್ನು ಮನೆಗೆ ತರುವ ವ್ಯಕ್ತಿಯ ಮೇಲೆ ನೀರು ಚಿಮುಕಿಸುವ ಸಂಪ್ರದಾಯ ಜರ್ಮನಿ, ಫ್ರಾನ್ಸ್ ಹಾಗೂ ಈಚಿನ ವರೆವಿಗೂ ಇಂಗ್ಲೆಂಡ್ ಹಾಗೂ ಸ್ಕಾಟ್‌ಲೆಂಡ್‌ಗಳಲ್ಲೂ ಬಳಕೆಯಲ್ಲಿತ್ತು. ಇದರ ಹಿಂದಿನ ಆಶಯ ಮರು ವರ್ಷವೂ ಒಳ್ಳೆಯ ಮಳೆ ಬಂದು ಧಾನ್ಯ ಅದೇ ರೀತಿ ಮನೆಗೆ ಬರುವಂತಾಗಲಿ ಎಂಬುದೇ. ಹೀಗೆ ಮೂಡಬಿದ್ರೆ ಮರು ವರ್ಷ ಮಳೆ ಬರುವುದಿಲ್ಲ ಎಂಬ ನಂಬಿಕೆ ಜರ್ಮನಿಯ ಕೆಲವು ಪಂಗಡಗಳಲ್ಲಿದೆ. ಕೆಲವೆಡೆ ಈ ಕೊನೆಯ ಕಂತೆಯನ್ನು ಹೆಣ್ಣು ಮಗಳೇ ತರಬೇಕೆಂಬ ನಿಯಮವೂ ಇದೆ." [೧]

ಇದೇ ಆಚರಣೆ ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ನಮ್ಮ ಜಿಲ್ಲೆಯಾದ್ಯಂತ ಬಳಕೆಯಲ್ಲಿದೆ. ಇಲ್ಲಿ ಸುಗ್ಗಿಯ ಕೊಯ್ಲಿನ ಮೊದಲು ಒಂದು ಹೊರೆ ಧಾನ್ಯ ಕೊಯ್ದಿಟ್ಟು, ಅದರ ಮೇಲೆ ಅನ್ನ (ಮೊಸರನ್ನ), ಹಣ್ಣು, ಕಾಯಿ, ಎಲೆ, ಅಡಿಕೆ ಇಟ್ಟು ಪ್ರತಿ ವರ್ಷವೂ ಇದೇ ರೀತಿ ಮಳೆ ಬಂದು ಸಮೃದ್ಧವಾದ ಬೆಳೆ ಬರುವಂತಾಗಲಿ ಹಾಗೂ ಮುಂದಿನ ವರ್ಷವೂ ಸಮೃದ್ಧವಾದ ಮಳೆ ಬರುವಂತಾಗಲಿ ಎಂದು ಪ್ರಾರ್ಥಿಸುತ್ತಾರೆ.

ಸಸ್ಯಗಳನ್ನೊಳಗೊಂಡ ಆಚರಣೆಗಳು ಭಾರತೀಯ ನೆಲೆಗಳಲ್ಲಿ ಇರುವಂತೆಯೇ ವಿದೇಶೀಯ ನೆಲೆಗಳಲ್ಲಿ ಸಾಕಷ್ಟು ಆಚರಣೆಗಳಿವೆ. ಅವರುಗಳಲ್ಲಿ ಮರಗಳಲ್ಲಿ ದೇವರು ವಾಸಿಸುತ್ತಾನೆಂದು, ಅವನ್ನು ಕಡಿದರೆ ಮಳೆ ಬರುವುದಿಲ್ಲವೆಂದು ಹಲವು ಕಡೆ ಜನರ ಭಾವನೆ ಇತ್ತು. 'ಪ್ರಾಗ್‌ನ ಮಿಷನರಿ ಪಾದ್ರಿ ಜರೋಮ್ ಲಿಥುವಾನಿಯಾದಲ್ಲಿ ಜನರು ಪವಿತ್ರವೆಂದು ಭಾವಿಸಿಕೊಂಡಿದ್ದ ತೋಪನ್ನು ಕಡಿಯಲು ಜನರನ್ನು ಪ್ರಚೋದಿಸುತ್ತಿದ್ದಾಗ ಮಹಿಳೆಯರ ಗುಂಪೊಂದು ರಾಜಕುಮಾರನ ಬಳಿ ಹೋಗಿ ಆ ತೋಪು ತಾವು ಮಳೆಯನ್ನು ಸೂರ್ಯನ ಬೆಳಕನ್ನು ಪಡೆಯುವ ದೇವತೆಗಳ ಆವಾಸವೆಂದು, ಅದರ ನಾಶವನ್ನು ತಡೆಯಬೇಕೆಂದು ಪ್ರಾರ್ಥಿಸಿದ್ದರಂತೆ.

ಇದರ ಜೊತೆಗೆ ಆಫ್ರಿಕಾದ ಒಡಾಂಬೋ ಪ್ರದೇಶದ ಸ್ತ್ರೀಯರು ಹೊಲದಲ್ಲಿ ಕಾಳು ಬಿತ್ತುವ ಮೊದಲು ಒಂದು ನಿರ್ದಿಷ್ಟ ಜಾತಿಯ ಮರದ ಕೊಂಬೆಯೊಂದನ್ನು (ಪೆಲ್ಟೋಫೋರಂ ಆಫ್ರಿಕ್ಯಾನಮ್) ಕೊಂಬೆಯೊಂದನ್ನು ತಾವು ಬಿತ್ತುವ ಮೊದಲು ಬೀಜದ ಜೊತೆಗೆ ಹೊಲದಲ್ಲಿ ನೆಡುತ್ತಾರೆ. ಇದು ಮಳೆ ತರಿಸುತ್ತದೆಂದು ನಂಬಿ ಇದನ್ನು ಮಳೆ ಪೊದೆ (Rain Bush) ಎಂದು ಕರೆಯುತ್ತಾರೆ'. (ಡಾ. ಎಸ್.ಪಿ. ಪದ್ಮಪ್ರಸಾದ್ ಅವರು ಮಳೆ ಒಂದು ಜಾನಪದೀಯ ಅಧ್ಯಯನ ಪುಸ್ತಕದಲ್ಲಿ ತಿಳಿಸುತ್ತಾರೆ.). ಈ ರೀತಿಯಾಗಿ ಸಸ್ಯಗಳನ್ನೊಂಡ ಆಚರಣೆಗಳನ್ನು ಜಗತ್ತಿನಾದ್ಯಂತ ನಾವು ಕಾಣಬಹುದಾಗಿದೆ.

* ಪ್ರಾಣಿಗಳನ್ನೊಳಗೊಳ್ಳುವ ಮಳೆಯ ಆಚರಣೆಗಳು

ಮಳೆಯನ್ನು ಕರೆಯುವ ಆಚರಣೆಗಳಲ್ಲಿ ಪ್ರಮುಖವಾಗಿ ಕತ್ತೆ ಹಾಗೂ ಕಪ್ಪೆಗಳನ್ನು ಬಳಸುತ್ತಾರೆ. ಕೆಲವೆಡೆ ಬಲಿ ರೂಪದ ಆಚರಣೆಗಳೂ (ಕೋಳಿ, ಕುರಿ ... ಇತ್ಯಾದಿ) ಬಳಕೆಯಲ್ಲಿವೆ.

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕು, ಎನ್. ಶೆಟ್ಟಳ್ಳಿ ಮತ್ತಿತರ ಗ್ರಾಮಗಳಲ್ಲಿ ಕತ್ತೆಗಳ ಮೆರವಣಿಗೆಯ ಮೂಲಕ ಮಳೆ ಕರೆಯುವ ಆಚರಣೆಗಳಿರುವುದನ್ನು ಕಾಣಬಹುದು. ಈ ಪ್ರದೇಶಗಳಲ್ಲಿನ ಅಗಸರ ಬಳಿಯಿಂದ ಎರಡು ಕತ್ತೆಗಳನ್ನು ತರಿಸುತ್ತಾರೆ. ಊರಿನ ದೇವಾಲಯ ಅಥವಾ ಕೇಂದ್ರ ಬಿಂದುವಿನ ಸ್ಥಳದಿಂದ ಅಲಂಕೃತಗೊಂಡ ಕತ್ತೆಗಳ ಮೆರವಣಿಗೆ ಆರಂಭವಾಗುತ್ತದೆ. ಕತ್ತೆಗಳ ಬೆನ್ನಿನ ಮೇಲೆ ಸೀರೆಗಳನ್ನು ಹೊದಿಸಿ, ಕೊರಳಿಗೆ ಹಾರ ಹಾಕುತ್ತಾರೆ. ಮಂಗಳ ವಾದ್ಯದ ಸಮೇತ ಊರಿನ ಮಕ್ಕಳಿಂದ ಮುದುಕರವರೆವಿನಗಿನ ಎಲ್ಲಾರೂ ಸಂಭ್ರಮದಿಂದ ಭಾಗವಹಿಸಿ, ಕತ್ತೆಗಳನ್ನು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿಸಿ ಮೊದಲು ಹೊರಟ ಸ್ಥಾನದಲ್ಲಿ ನಿಲ್ಲಿಸಿ, ಮದುವೆ ಮಾಡಿಸುವ ಸಂಪ್ರದಾಯವೂ ಆಚರಣೆಯಲ್ಲಿದೆ. ಸಾಮಾನ್ಯವಾಗಿ ಕತ್ತೆಗಳ ಮೆರವಣಿಗೆಯಲ್ಲಿ ಅವುಗಳ ಮಾಲೀಕರೇ ಹಿಡಿದು ತರುತ್ತಾರೆ. ಅನಂತರ ಮಾಲೀಕನಿಗೆ ಸಂಭಾವನೆ ನೀಡಿ ಬೀಳ್ಕೊಡಲಾಗುತ್ತದೆ. ಇದರಿಂದ ಮಳೆ ಬರುತ್ತದೆಂಬ ನಂಬಿಕೆ ಜನರಲ್ಲಿದೆ.

ಈ ಕತ್ತೆ ಪೂಜೆಯ ಹಿಂದೆ ಒಂದು ದಂತ ಕತೆಯೂ ಇದೆ. 'ಒಮ್ಮೆ ಭೂ ಲೋಕದ ಜನರು ಯಾವುದೋ ಸಂತೋಷಕ್ಕಾಗಿ ಶಿವನ ಮೂರ್ತಿಯನ್ನು ಕತ್ತೆಯ ಮೇಲಿಟ್ಟು ಮೆರವಣಿಗೆ ಮಾಡಿದರು. (ಆ ಕಾಲದಲ್ಲಿ ಅದು ಕುದುರೆಯಂತೆ ಮರ್ಯಾದಸ್ಥ ಪ್ರಾಣಿಯಾಗಿತ್ತು) ಆಗ ಜನ ಭಯಭಕ್ತಿಯಿಂದ ನಮಸ್ಕಾರ ಮಾಡುವುದನ್ನು ಕಂಡು ಅದು ತನಗೇ ಸಂದ ನಮಸ್ಕಾರ ಎಂದು ಭಾವಿಸಿತು. 'ಇಷ್ಟು ಘನವಾಗಿರುವ ತಾನು ಈ ಶಿವನ ಮೂರ್ತಿಯನ್ನು ಹೊತ್ತು ಓಡಾಡುವುದೇಕೆ? ಎಂದು ಸೊಕ್ಕಿನಿಂದ ಆ ಮೂರ್ತಿಯನ್ನು ಕೆಡವಿ ಹೋಂಕರಿಸುತ್ತಾ ಓಡಾಡತೊಡಗಿದಂತೆ, ಇದರಿಂದ ಕುಪಿತನಾದ ಶಿವ ಅದನ್ನು ಶಪಿಸಿ 'ಹಾಳು ಜಾಗಗಳು ನಿನ್ನ ವಾಸಸ್ಥಾನ ಆಗಲಿ. ಜನರು ನಿನ್ನನ್ನು ಅಸಡ್ಡೆಯಿಂದ ಹೀಯಾಳಿಸುವಂತಾಗಲಿ' ಎಂದ. ಆಗ ಕತ್ತೆಗೆ ಬುದ್ಧಿ ಬಂತು. ಶಾಪ ವಿಮುಕ್ತಿಗಾಗಿ ಅದು ಉಗ್ರ ತಪಸ್ಸನ್ನು ಆಚರಿಸಿತು. ಶಿವನನ್ನು ಕುರಿತು. ಶಿವ ಅನುಗ್ರಹಿಸಿದ. ''ಕೊಟ್ಟ ಶಾಪವನ್ನಂತೂ ಮರಳಿ ಪಡೆಯಲಾಗದು. ಆದರೆ, ಮಳೆ ಬಾರದಿದ್ದಾಗ ಭೂಲೋಕದ ಜನ ನಿನ್ನನ್ನು ಪೂಜಿಸಿದರೆ ಮಳೆ ಬರುವಂತಾಗಲಿ' ಎಂದ.

ಹೀಗೆ ಗಾರ್ಧಭರಾಜನಿಗೆ ಪೂಜಾಯೋಗ ಒದಗಿತಂತೆ." [೨]

ಹೀಗೆ ಕತ್ತೆಗಳ ಮದುವೆಯ ಮೆರವಣಿಗೆಯ ಆಚರಣೆ ಜಿಲ್ಲೆಯಾದಿಯಾಗಿ ಕರ್ನಾಟಕದಾದ್ಯಂತ ಪ್ರಚಲಿತವಾಗಿರುವುದನ್ನು ಕಾಣಬಹುದು.

* ಕಪ್ಪೆ ಬಳಕೆ

ಮಳೆಯನ್ನು ಕರೆಯುವ ಆಚರಣೆಗಳಲ್ಲಿ ಕಪ್ಪೆಗಳ ಪಾತ್ರ ವಿಶಿಷ್ಟವಾದದ್ದು. ಇದು ಪ್ರಪಂಚದ ಎಲ್ಲಾ ಕಡೆಗಳಲ್ಲೂ ಬಳಕೆಯಾಗುವ ಅಸಹಾಯಕ ಜೀವಿಯಾಗಿದೆ. ಕಪ್ಪೆ ಮದುವೆ, ಕಪ್ಪೆ ಮೆರವಣಿಗೆ, ಕಪ್ಪೆ ಕೊಲ್ಲುವಿಕೆ, ಕಪ್ಪೆಗೆ ಚಿತ್ರಹಿಂಸೆ ಕೊಡುವುದು ಇತ್ಯಾದಿ ಹಲವಾರು ವಿಧಗಳಲ್ಲಿ ಆಚರಣೆಯಲ್ಲಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ -

1. ಕಪ್ಪೆಗಳ ಮದುವೆ :

ಮಳೆ ಬಾರದ ಕೆಲವು ಪ್ರದೇಶಗಳಲ್ಲಿ ಎರಡು ಕಪ್ಪೆಗಳನ್ನು (ಗಂಡು - ಹೆಣ್ಣು) ಹಿಡಿದು ಅವುಗಳ ಕಾಲುಗಳನ್ನು ಕಟ್ಟಿ ಅವುಗಳನ್ನು ಒನಕೆ (ಭತ್ತ ಇತ್ಯಾದಿ ಕುಟ್ಟುವ ಸಾಧನ)ಗೆ ಕಟ್ಟಿ ಅಲಂಕರಿಸಿ ಅವುಗಳಿಗೆ ಮದುವೆ ಮಾಡಿಸಿ ಊರಿನ ಬೀದಿಗಳಲ್ಲೆಲ್ಲಾ ಮೆರವಣಿಗೆ ಮಾಡುತ್ತಾರೆ. ಹಾಗೆಯೇ ಮೊರದಲ್ಲಿ (ಧಾನ್ಯಗಳನ್ನು ಸ್ವಚ್ಛಗೊಳಿಸುವ ಸಾಧನ) ಕಪ್ಪೆಯ ಕಾಲನ್ನು ಕಟ್ಟಿ ಶೃಂಗಾರ ಮಾಡಿ ಬೀದಿ ಬೀದಿಗಳಲ್ಲಿ ಮೆರವಣಿಗೆ ಮಾಡುವಾಗ ಪ್ರತಿ ಮನೆಯಲ್ಲಿ ಅದಕ್ಕೆ ನೀರನ್ನು ಚುಮುಕಿಸುವ, ಪೂಜಿಸುವ ಸಂಪ್ರದಾಯ ರೂಢಿಯಲ್ಲಿದೆ. ಇದಕ್ಕೆ ಮಳೆ ದೇವರು ಎಂದು ಕರೆಯುತ್ತಾರೆ. ಆಗ ಅವರು ಮಳೆದೇವರನ್ನು ಕುರಿತು ಹಾಡುವ ಹಾಡೂ ವಿಶಿಷ್ಟವಾದುದಾಗಿದೆ.

ಹುಯ್ಯೊ ಹುಯ್ಯೊ ಮಳೆರಾಯ
ಹೂವಿನ ತೋಟಕೆ ನೀರಿಲ್ಲ
ಬಾರೊ ಬಾರೊ ಮಳೆರಾಯ
ಬಾಳೆ ತೋಟಕೆ ನೀರಿಲ್ಲ
ಚೆಚ್ಚೋ ಚೆಚ್ಚೋ ಮಳೆರಾಯ
ಸೌತೆಯ ತೋಟಕೆ ನೀರಿಲ್ಲ
ಕುಟ್ಟೊ ಕುಟ್ಟೊ ಮಳೆರಾಯ
ಕುಂಬಳ ತೋಟಕೆ ನೀರಿಲ್ಲ.

ಹೀಗೆ ಉದ್ದಕ್ಕೂ ಜೊತೆಯವರೆಲ್ಲಾ ಹಾಡಿಕೊಂಡು ಹೋಗುತ್ತಾರೆ. ಇದೊಂದು ಜನಪದ ನಂಬಿಕೆಯೂ ಹೌದು. ಈ ರೀತಿ ಮಾಡಿದಾಗ ಮಳೆಯು ಬರುತ್ತದೆ ಎಂಬ ನಂಬಿಕೆ ಈ ಪ್ರದೇಶದ ಜನರಲ್ಲಿದೆ.

II ಕಪ್ಪೆಯನ್ನು ಎಸೆಯುವುದು :-

ಕೆಲವು ಪ್ರದೇಶಗಳಲ್ಲಿ ಕಪ್ಪೆಗಳನ್ನು ಆಕಾಶಕ್ಕೆ ಎಸೆಯುತ್ತಾರೆ. ಅವು ಅರಚುತ್ತಾ ಕೆಳಗೆ ಬೀಳುತ್ತವೆ. ಇವುಗಳ ಅರಚುವಿಕೆಯ ಶಬ್ದ ಕೇಳಿದ ವರುಣನು ದಯಾಪೂರ್ವಕವಾಗಿ ಮಳೆ ಸುರಿಸುತ್ತಾನೆಂಬ ನಂಬಿಕೆ ಸಾಂಪ್ರದಾಯಿಕ ಜನರಲ್ಲಿದೆ.

ಅದೇ ರೀತಿ ಕೆರೆ, ಕಟ್ಟೆ, ಹೊಂಡ ಮುಂತಾದ ಕಪ್ಪೆಗಳ ಆವಾಸ ಸ್ಥಾನಗಳಲ್ಲಿ ಸಂಜೆಯ ವೇಳೆಯಲ್ಲಿ ಒಂದೇ ಸಮನೆ ಅರಚುತ್ತಿದ್ದರೆ 'ಮಳೆ ಕರೆಯುತ್ತವೆ' ಎಂಬ ನಂಬಿಕೆ ಜನರಲ್ಲಿದೆ.

III ಕಪ್ಪೆಯ ಹಿಂಸೆ, ಕೊಲೆ :-

ಹಲವು ಭಾಗಗಳಲ್ಲಿ ಕಪ್ಪೆಗಳನ್ನು ಕೊಂದರೆ ಮಳೆ ಬರುವುದೆಂಬ ನಂಬಿಕೆ ಇದ್ದು, ಅದಕ್ಕಾಗಿ ಕಪ್ಪೆಗಳನ್ನು ಕೊಲ್ಲಲಾಗುತ್ತದೆ.

'ಪಾಕಿಸ್ಥಾನದಲ್ಲಿ ಮಳೆ ಬೇಕಾದಾಗ ಕಪ್ಪೆಯನ್ನು ಕೊಂದು ಅಂಗಾತ ಮಲಗಿಸುವ ಸಂಪ್ರದಾಯವಿದೆ' [8]

ಹೀಗೆ ಕಪ್ಪೆಯ ಮಳೆ ಕರೆಯುವ ಆಚರಣೆಗಳಲ್ಲಿ ಕಪ್ಪೆಗಳನ್ನು ಪೂಜಿಸುವುದರಿಂದ ಅವುಗಳನ್ನು ಹಿಂಸಾತ್ಮಕವಾಗಿ ಶಿಕ್ಷಿಸಿ ಕೊಲ್ಲುವ ಆಚರಣೆಗಳೂ ವಿಭಿನ್ನವಾಗಿ ದೇಶದ ಉದ್ದಗಲಕ್ಕೂ ಗೋಚರಿಸುತ್ತವೆ.

ಹಾಗೆಯೇ ಇರುವೆಗಳು ತಮ್ಮ ಸೂರಿನ (ಗೂಡಿನ) ಕಡೆ ಹೋಗುತ್ತಿರುವಾಗ ಸೂರಿನ ಬಾಗಿಲು ಮುಚ್ಚುವುದರಿಂದ ಮಳೆ ಬರುತ್ತದೆಂಬ ನಂಬಿಕೆ ಇದೆ. ಜೊತೆಗೆ ಈಚಲು ಹುಳ (ಮಳೆಯ ಚಿಟ್ಟೆ)ಗಳು ಸಂಜೆಯ ವೇಳೆ ಅಪಾರ ಸಂಖ್ಯೆಯಲ್ಲಿ ಹಾರಾಡುತ್ತಿದ್ದರೆ ಮಳೆಯಾಗುತ್ತದೆಂಬ ನಂಬಿಕೆ.

ಅಷ್ಟೇಯಲ್ಲದೆ ಕೆಲವು ಪ್ರದೇಶಗಳಲ್ಲಿ ಕೆರೆ ತುಂಬಲು, ಹಾಗೂ ವ್ಯವಸಾಯದ ಬೆಳೆಗೆ ಅವಶ್ಯಕ ಮಳೆಯಾಗಲು ಇಷ್ಟ ದೇವತೆಗಳಿಗೆ ಕುರಿ, ಹೋತ (ಗಂಡು ಮೇಕೆ), ಕೋಳಿ ಮುಂತಾದ ಪ್ರಾಣಿಗಳನ್ನು ಬಲಿ ನೀಡುವ ಸಂಪ್ರದಾಯವನ್ನು ಹಲವು ಪ್ರದೇಶಗಳಲ್ಲಿ ಕಾಣಬಹುದು.

ಪ್ರಾಣಿಗಳನ್ನೊಳಗೊಂಡ ಆಚರಣೆಗಳು ನಮ್ಮಲ್ಲಿ ಮಾತ್ರವಲ್ಲ; ಜಗತ್ತಿನಾದ್ಯಂತ ಮಳೆಯನ್ನು ಕರೆಯುವುದಕ್ಕೆ ಇಂತಹ ಆಚರಣೆಗಳು ಇವೆ ಎನ್ನುವುದು ಮಳೆ ಒಂದು ಜಾನಪದೀಯ ಅಧ್ಯಯನ ಎನ್ನುವ ಪುಸ್ತಕದಲ್ಲಿ ಡಾ. ಎಸ್.ಪಿ. ಪದ್ಮಪ್ರಸಾದ್ ಅವರು ತಿಳಿಸುತ್ತಾರೆ. ಆ ಮೇರೆಗೆ ಉತ್ತರ ಆಸ್ಟ್ರೇಲಿಯಾದ ಜಿಂಜಿಲಿ ಪಂಗಡದವರು ಒಂದು ದಪ್ಪ ಹೆಗ್ಗಣ ಹಿಡಿದು ಅದನ್ನು ಹೊತ್ತುಕೊಂಡು ಹಾಡುತ್ತಾ ತಿರುಗುತ್ತಿರುತ್ತಾರೆ. ಅದು ಹಾಗೆಯೇ ಕೃಷವಾದ ಮೇಲೆ ಅದನ್ನು ಬಿಡುತ್ತಾರೆ. ಇದರಿಂದ ಮಳೆಯಾಗುತ್ತದೆಂದು ಅವರ ನಂಬಿಕೆ. ಇದು ಬಹುಶಃ ದೇವರ ಅನುಕಂಪವನ್ನು ಕೆರಳಿಸಿ ಮಳೆ ಪಡೆಯುವ ಒಂದು ವಿಧಾನ.

ಎಸ್ಕಿಮೋಗಳಲ್ಲಿ ಸ್ಮಾಲ್ ಸ್ಕಲ್ಪಿನ್ ಮೀನನ್ನು ಯಾರಾದರೂ ಹಿಡಿದು ಮಳೆ ಬರುವುದೆಂಬ ನಂಬಿಕೆ ಇದೆ. ಇದು ಅನುಕಂಪೆಯ ಉದ್ದೀಪನದ ತಂತ್ರವೇ.

ಇದರ ಜೊತೆಗೆ ಶಿವಮೊಗ್ಗ ಜಿಲ್ಲೆಯ ಹಲವು ಕಡೆ ರೂಢಿಯಲ್ಲಿದ್ದ ಒಂದು ಆಚರಣೆ ಮಳೆ ಬಾರದಿದ್ದಾಗ ಜೀವಂತ ಹಂದಿಯನ್ನು ಕುತ್ತಿಗೆಯವರೆಗೆ ನೆಲದಲ್ಲಿ ಹೂಳಿ ಬಿಟ್ಟುಬಿಡುತ್ತಿದ್ದರು. ಅದು ನೀರಿಗಾಗಿ ಅರಚಿ, ಅರಚಿ ಸಾಯುತ್ತಿತ್ತು. ಮಳೆದೇವನ ಕರುಣೆಯನ್ನು ಕೆರಳಿಸಿ, ಮಳೆ ಕರೆಯುವ ತಂತ್ರ ಇದು.

ಹೀಗೆ ಪ್ರಾಣಿಗಳ ಮೇಲೆ ಆಧಾರಿತವಾದ ಹಲವಾರು ವಿಧದ ಆಚರಣೆಗಳು ರೂಪುಗೊಂಡಿವೆ.

* **ಆರಾಧನಾ ವಿಧಾನದ ಮಳೆ ಆಚರಣೆಗಳು**

ಹಲವು ಮಳೆ ಆಚರಣೆಗಳಲ್ಲಿ ಯಾವುದಾದರೊಂದು ದೈವದ ಆರಾಧನೆ ಪ್ರಮುಖ ಅಂಶವಾಗಿರುತ್ತದೆ. ಅನೇಕ ಗ್ರಾಮಗಳ ಜನರಲ್ಲಿ ಒಂದು ಗ್ರಾಮಕ್ಕೆ ಸೇರಿದ ದೇವ - ದೇವತೆಗಳನ್ನು ಒಟ್ಟಾಗಿ ಪೂಜಿಸುವ ಸಂಪ್ರದಾಯವು ಬೆಳೆದು ಬಂದಿದೆ. ಈ ದೇವತೆ ಬಹು ಸಂಖ್ಯಾತರ ಸಾರ್ವತ್ರಿಕ ದೈವವಾಗಿರಬಹುದು ಅಥವಾ ಒಂದು ಬುಡಕಟ್ಟಿಗೆ ಸೇರಿದ ದೈವವಾಗಿರಬಹುದು. ಹಾಗೆಯೇ ನಿರ್ದಿಷ್ಟ ಕಾರಣಕ್ಕಾಗಿಯೇ ಪೂಜಿಸುವ ದೇವರಾಗಿರಬಹುದು. ಒಟ್ಟಾರೆ ಆರಾಧನೆಯ ವಿಧಾನದಲ್ಲಿ ದೇವರನ್ನು ಪ್ರಾರ್ಥಿಸಿ ಮಳೆ ಕರೆಯುವ ಸಂಪ್ರದಾಯ ಜಿಲ್ಲೆಯಾದ್ಯಂತ ಪ್ರಚಲಿತದಲ್ಲಿದೆ.

ನಮ್ಮ ಜಿಲ್ಲೆಯ ಕೆ.ಆರ್. ನಗರ ತಾಲ್ಲೂಕಿನ ಭೇರ್ಯ ಎಂಬ ಗ್ರಾಮದಲ್ಲಿ ಇಂಥ ಒಂದು ವಿಶಿಷ್ಟ ಆಚರಣೆ ಚಾಲ್ತಿಯಲ್ಲಿದೆ. ಮಳೆಗಾಲ ಸಮೃದ್ಧವಾಗಿರಲಿ ಎಂಬ ಉದ್ದೇಶದಿಂದ ಊರಿನ ಪ್ರಮುಖ ಪಂಗಡದ ಜನರೆಲ್ಲಾ ಇದನ್ನು ಆಚರಿಸುತ್ತಾರೆ. ಸುಮಾರು 1 ಕಿ. ಮೀ. ದೂರದಲ್ಲಿರುವ ಅರಣ್ಯದಲ್ಲಿ ಮಹಾದೇಶ್ವರ ಸ್ವಾಮಿ ಮತ್ತು ಸಿದ್ಧಲಿಂಗೇಶ್ವರ ಸ್ವಾಮಿಯ ದೇವಾಲಯಗಳಿವೆ. ಮಳೆಗಾಲ ಪ್ರಾರಂಭವಾದಾಗ ಸೂಕ್ತ ಸಮಯದಲ್ಲಿ ಮಳೆ ಬೀಳದೆ ರೈತರು ಕಂಗಾಲಾದಾಗ ಈ ದೇವಾಲಯಗಳ ಸನ್ನಿಧಿಯಲ್ಲಿ 'ಹೆಡಿಗೆ ಪುರ' ಎಂಬ ಪದ್ಧತಿಯ ಆರಾಧನಾ ರೂಪದಲ್ಲಿ ಮಳೆರಾಯನನ್ನು ಕರೆಯುವ ಸಂಪ್ರದಾಯವಿದೆ. ಅಂದರೆ ಊರಿನ ಪ್ರಮುಖ ಜಾತಿಯ ಜನರೆಲ್ಲಾ (ಬ್ರಾಹ್ಮಣ, ಲಿಂಗಾಯಿತ, ದಲಿತರನ್ನು ಹೊರತುಪಡಿಸಿ) ನಿಗಧಿ ಪಡಿಸಿದ ದಿನದಂದು (ಸಾಮಾನ್ಯವಾಗಿ ಸೋಮವಾರ) ತಮ್ಮ ತಮ್ಮ ಮನೆಗಳಲ್ಲಿ ಮೀಸಲಾಗಿ ತಯಾರಿಸಿದ ಆಹಾರವನ್ನು (ಸಸ್ಯಾಹಾರ) ಹೆಡಿಗೆಯಲ್ಲಿ (ಬುಟ್ಟಿ)ರಿಸಿಕೊಂಡು ಕುಡಿಯಲು ನೀರಿನ ಚಿಂದಿಗೆಯೊಂದಿಗೆ ಸುಮಾರು ಮಧ್ಯಾಹ್ನ ಮೂರು ಗಂಟೆಯ ಸಮಯದಲ್ಲಿ ಮಹಾದೇಶ್ವರ ಸ್ವಾಮಿ ದೇವಾಲಯದ ಬಳಿ ನೆರೆಯುತ್ತಾರೆ. ಅಲ್ಲಿಗೆ ಊರ ಗ್ರಾಮ ದೇವತೆಯಾದ ಕರಿಯಮ್ಮನ ಪೂಜಾರಿ (ಗುಡ್ಡಪ್ಪ), ದೇವರು ಬರುವ ವ್ಯಕ್ತಿ ನಾಡಗೌಡರು, ಊರ ಮುಖಂಡರ ಸಹಿತವಾಗಿ ಸೇರಿರುವ ಜನರ ಸಭೆಯಲ್ಲಿ ಗ್ರಾಮ ದೇವತೆ ಕರಿಯಮ್ಮನು ಪೂಜಾರಿ (ಸಣ್ಣ ನಾಯ್ಕ)ರ ಮೈತುಂಬಿ ಬಂದಾಗ ಕಲ್ಲು ಮುಳ್ಳುಗಳ ಬೇಲಿಯನ್ನು ಹಾರಿ ಬರಿಗಾಲಲ್ಲಿ ಸುಮಾರು ೨ ಕಿ. ಮೀ. ದೂರದಲ್ಲಿರುವ ಮತ್ತೊಂದು ದೇವತ (ಬಾಣಂತಮ್ಮನ ಸನ್ನಿದಿ) ಬಳಿಗೆ ತೆರಳಿ ಅಲ್ಲಿಂದ ಕೆಲವೇ ನಿಮಿಷಗಳಲ್ಲಿ ಹಿಂದಿರುಗುತ್ತದೆ. (ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ದೇವರು ಬರುವ ಪೂಜಾರಿ ಸುಮಾರು ೭೫ ವರ್ಷಗಳನ್ನು ದಾಟಿದವನಾಗಿದ್ದು ಅವರಿಗೆ ಸರಿಯಾಗಿ ಕಣ್ಣು ಕಾಣುವುದಿಲ್ಲ. ಸಾಮಾನ್ಯವಾಗಿ ನಡೆಯಲು ತಮ್ಮ ಮೊಮ್ಮಕ್ಕಳ ಸಹಾಯದಿಂದ ನಡೆಯುವ ಇವರು ದೇವತೆ ಮೈದುಂಬಿದಾಗ ವೇಗವಾಗಿ ಓಡುತ್ತಾರೆ.) ಅನಂತರ ಪೂಜೆಯನ್ನು ಸ್ವೀಕರಿಸಿದ ದೇವತೆಗೆ ಊರಿನ ಮುಖಂಡರಾದಿಯಾಗಿ ಊರಿನ ಕಷ್ಟಗಳನ್ನು ತಿಳಿಸುತ್ತಾರೆ. ಇದರಲ್ಲಿ ಪ್ರಮುಖ ಹಾಗೂ ಸಾಮಾನ್ಯ ಪ್ರಶ್ನೆಗಳೆಂದರೆ ನಮ್ಮ ಊರಿನ ಕೆರೆಯು ಯಾವಾಗ ತುಂಬುತ್ತದೆ? ಹಾಗೂ ಮಳೆ, ಬೆಳೆ, ಊರಿನ ಸಾಂಕ್ರಾಮಿಕ ರೋಗಗಳನ್ನು ಕುರಿತದ್ದಾಗಿರುತ್ತವೆ. ಈ ಪ್ರಶ್ನೆಗಳಿಗೆ ಉತ್ತರಿಸಿ ದೇವತೆಯು ಕೆರೆ ತುಂಬುವ

ನಿರ್ದಿಷ್ಟ ಅವಧಿಯನ್ನು ಸೂಚಿಸಿ ಹೊರಡುತ್ತದೆ. ಅನಂತರ ಈ ಮೊದಲೇ ಏರ್ಪಡಿಸಿದ ನಿರ್ದಿಷ್ಟ ತಂಡಗಳಲ್ಲಿ ಎಲ್ಲಾ ಜನಾಂಗದವರು ತಾವು ತಂದಿಟ್ಟ ಆಹಾರವನ್ನು ಎಲ್ಲರೊಡಗೂಡಿ, ಸಾಲಿನಲ್ಲಿ ಕುಳಿತು ಊಟ ಮಾಡಿ ಹೊರಡುವ ಸಮಯಕ್ಕಾಗಲೇ ಮಳೆ ಬೀಳುತ್ತದೆ. (ಶೇ. 95 ರಷ್ಟು ಆಚರಣೆಯಲ್ಲಿ ಮಳೆ ಬಿದ್ದಿರುವುದನ್ನು ಸ್ಮರಿಸಬಹುದು) ಅನಂತರ ನಿಗದಿಪಡಿಸಿದ ದೇವತೆ ನಿಗದಿಪಡಿಸಿದ ನಿರ್ದಿಷ್ಟ ಅವಧಿಯೊಳಗೆ ಕೆರೆ ಭರ್ತಿಯಾಗುತ್ತದೆ. (ಅದೇ ರೀತಿ ಭರ್ತಿಯಾದ ವರ್ಷಗಳನ್ನು ಸ್ಥಳೀಯರು ಸ್ಮರಿಸುತ್ತಾರೆ.)

ಬನ್ನೂರಿನ ಸುತ್ತಮುತ್ತಲ ಪ್ರದೇಶದಲ್ಲಿ ಮಳೆರಾಯನನ್ನು ವಿಶೇಷ ರೀತಿಯಲ್ಲಿ ಪೂಜಿಸುತ್ತಾರೆ. ಮಳೆರಾಯ ಯಾವುದೇ ದೇವಾಲಯವನ್ನು ಹೊಂದಿರುವುದಿಲ್ಲ. ಬದಲಾಗಿ, ಕುರ್ಚಿಯಂತೆ ತತ್ಕಾಲಕ್ಕಷ್ಟೇ ನಿರ್ಮಿತವಾದ ಪೀಠದಲ್ಲಿ ಪೂಜೆ ಆದ ಕೂಡಲೇ ವಿಸರ್ಜಿತವಾಗುವ ದೇವತೆಯಾಗಿದ್ದು, ಜೊತೆಗೆ ಜೋಡಿ ಒನಕೆಯನ್ನು ಪೂಜಿಸುವ ಪರಿಪಾಠವೂ ಇದೆ. ಕರ್ನಾಟಕದ ಇತರ ಭಾಗಗಳಲ್ಲಿರುವ ಆರಾಧನಾ ವಿಧಾನದ ಆಚರಣೆಗಳನ್ನು ಅವಲೋಕಿಸಿದರೆ ಅವುಗಳಲ್ಲಿ ಪ್ರಮುಖವಾದವು ಕೆಳಗಿನಂತಿವೆ.

* ಗುರ್ಚಿಪೂಜೆ :

ಇದು ಉತ್ತರ ಕರ್ನಾಟಕದ ಇಬ್ಬರು ಪ್ರಸಿದ್ಧ ಮಳೆ ದೇವರುಗಳಲ್ಲಿ ಒಂದು. (ಇನ್ನೊಂದು - ಫಲ ಕೊಡುವ ದೇವರೆಂದು ಪ್ರಸಿದ್ಧವಾಗಿ ಆ ಕಾರಣಕ್ಕಾಗಿ ಮಳೆ ತರುವನೆಂದು ನಂಬಲಾಗಿರುವ ಜೋಕುಮಾರ)

ಒಂದು ರೊಟ್ಟಿ ತವೆಯನ್ನು ಕವುಚಿಟ್ಟು, ಅದರ ಮೇಲೆ ಲಿಂಗಾಕಾರದ ಸಗಣಿ ಉಂಡೆಯನ್ನು ಇಡುತ್ತಾರೆ. ಅದರ ತುದಿಗೆ ಒಂದಷ್ಟು ಕರಕಿ (ಗರಿಕೆ) ಮತ್ತು ಬಿಲ್ವಪತ್ರೆಯನ್ನು ಸಿಕ್ಕಿಸುತ್ತಾರೆ. ಇದೇ ಗುರ್ಚಿ. ಇದನ್ನು ಸಾಮಾನ್ಯವಾಗಿ ಕುಂಚಿ ಕೊರವರು (ಕುಂಚಿ ಗೊರವರು) ತಲೆ ಮೇಲೆ ಹೊತ್ತು ಮನೆ ಮನೆಗೆ ತಿರುಗುತ್ತಾರೆ. ಊರಿನ 7 - 8 ವರ್ಷದ ಸಣ್ಣ ಹುಡುಗರೇ ಹೊತ್ತು ತಿರುಗುವುದೂ ಉಂಟು. (ಕೆಲವೆಡೆಯಲ್ಲಿ ಈ ಗುರ್ಚಿಯು ಪಿರಮಿಡ್ ಆಕಾರದ ಬುಡವನ್ನೂ ದುಂಡಾದ ತಲೆಯನ್ನು ಹೊಂದಿರುತ್ತದೆ.

ಗುರ್ಚಿ ಹೊತ್ತವನು, ಅವನ ಜೊತೆಯ ಹುಡುಗರು, ಮನೆ ಮನೆಗೆ ಹೋಗುತ್ತಾರೆ. ಗುರ್ಚಿ ಹಾಡು ಹಾಡುತ್ತಾರೆ. ಮನೆಯವರು ತಂಬಿಗೆಯಲ್ಲಿ ಸ್ವಲ್ಪ ನೀರು ತಂದು ಅದರ ಮೇಲೆ ಸುರಿಯುವರು. ಹೀಗೆ ಸುರಿಯುವಾಗ ಆ ಗುರ್ಚಿ ಹೊತ್ತವನು ವೃತ್ತಾಕಾರವಾಗಿ ತಿರುಗುವನು. (ನೇರವಾಗಿ ಅದರ ಮೇಲೆ ನೀರು ಬಿದ್ದರೆ ಗುರ್ಚಿ ಕರಗಿ ಹೋಗುವುದಲ್ಲ!) ಆ ನಂತರ ಆ ಮನೆಯವರು ಅವರಿಗೆ ಜೋಳ / ರೊಟ್ಟಿ ಹಾಗೂ ಸ್ವಲ್ಪ ಹಣದ ಕಾಣಿಕೆ ಕೊಡುತ್ತಾರೆ. ಹೀಗೆ ಓಣಿ ಓಣಿಗಳನ್ನು ತಿರುಗಿದ ಬಳಿಕ ಒಂದೆಡೆ ಅದನ್ನಿಟ್ಟು ಮಳೆ ಬರಲೆಂದು ಪ್ರಾರ್ಥಿಸಿ ಪೂಜೆ ಮಾಡಿ, ಮನೆ ಸೇರುವರು. (ಮಾಹಿತಿ - ಬಿಜಾಪುರದ ಮಲ್ಲಪ್ಪನವರು)

ಮಳೆಗಾಗಿ ಪುರಾಣ ವಾಚನ :

ಮಳೆ ಬರಲೆಂದು ಪ್ರಾರ್ಥಿಸಿ ಪುರಾಣ ವಾಚನ ಮಾಡುವ ಪದ್ಧತಿ ಕರ್ನಾಟಕದ ಹಲವೆಡೆ ರೂಢಿಯಲ್ಲಿದೆ.

ಮೈಸೂರು ಪ್ರಾಂತ್ಯದ ಸುತ್ತಮುತ್ತ ಪುರಾಣ ವಚನ ಮಾಡುವ ಪದ್ಧತಿ ಆಚರಣೆಯಲ್ಲಿದೆ. ಇಲ್ಲಿ ಪ್ರಮುಖವಾಗಿ ಲಕ್ಷ್ಮೀಶನ ಜೈಮಿನಿ ಭಾರತ, ಕುಮಾರವ್ಯಾಸನ ವಿರಾಟಪರ್ವ, ಕನಕದಾಸರ ನಳ ಚರಿತ್ರೆಗಳನ್ನು ಊರಿನ ಚಾವಡಿ, ದೇವಸ್ಥಾನ ಅಥವಾ ಅರಳೀಕಟ್ಟೆಯ ಮೇಲೆ ಕುಳಿತು ಹಿರಿಯ ವ್ಯಕ್ತಿಯೊಬ್ಬ ವಾಚಿಸುವ ಪದ್ಧತಿ ರೂಢಿಯಲ್ಲಿದೆ. ಈ ಕೃತಿಗಳಲ್ಲಿ ಪ್ರಮುಖವಾಗಿ ವಿರಾಟಪರ್ವವನ್ನು ಹೆಚ್ಚು ವಾಚನ ಮಾಡುವುದು ಅಲ್ಲಲ್ಲಿ ಕಂಡು ಬರುತ್ತದೆ. ಇದಕ್ಕೆ ಕಾರಣವೇನೆಂದು ವಿಶ್ಲೇಷಿಸ ಹೊರಟರೆ ಪಾಂಡವರು ಅಜ್ಞಾತವಾಸದ ಸಂದರ್ಭದಲ್ಲಿ ಅನುಭವಿಸಿದ ಕಷ್ಟಗಳಿಗಿಂತೇನೂ ನಮ್ಮ ಕಷ್ಟ ದೊಡ್ಡದಲ್ಲ ಎಂದು ತಿಳಿದು ಮಾನಸಿಕವಾಗಿ ಸದೃಢರಾಗುವುದು ಮನಶ್ಶಾಸ್ತ್ರೀಯ ಹಿನ್ನೆಲೆಯ ವಿಶ್ಲೇಷಣೆಯಾದರೆ ಧಾರ್ಮಿಕ ಹಿನ್ನೆಲೆಯಲ್ಲಿ ವಿಶ್ಲೇಷಿಸಿದರೆ ಪುರಾಣ ಕಾವ್ಯವನ್ನು ವಾಚಿಸುವುದರಿಂದ ದೇವರಿಗೆ ನಮ್ಮ ಮೇಲೆ ದಯೆ ಕರುಣೆ ಹುಟ್ಟಿ ಮಳೆಯನ್ನು ತರಿಸುತ್ತಾನೆ ಎನ್ನುವುದು ಅವರ ಅಭಿಪ್ರಾಯವಾಗಿರಬಹುದೆಂದು ವಿಶ್ಲೇಷಿಸಬಹುದಾಗಿದೆ. ಅದೇನೇ ಇರಲಿ ಈ ಪುರಾಣ ವಾಚನ ಆರಾಧನಾ ವಿಧಾನದ ಆಚರಣೆಯಲ್ಲಿ ಒಂದು ರಕ್ಷಣಾ ತಂತ್ರ ಇರುವುದಂತೂ ನಮಗೆ ಗೋಚರವಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಕರ್ನಾಟಕದ ಇತರ ಭಾಗಗಳಲ್ಲಿರುವ ಕೆಲವು ಆಚರಣೆಗಳ ಉದಾಹರಣೆಗಳು -

೧) ಧಾರವಾಡ ಪರಿಸರದ ಹಳ್ಳಿಗಳಲ್ಲಿ ಮಳೆ ಬರಲೆಂದು ಪ್ರಾರ್ಥಿಸಿ'ಹರಿಶ್ಚಂದ್ರ ಕಾವ್ಯ' ವನ್ನು ಏಳು ದಿನಗಳ ಕಾಲ ಓದುವ ಪದ್ಧತಿ ರೂಢಿಯಲ್ಲಿತ್ತು. 'ಪುಣ್ಯ ಪುಣ್ಯಪುರುಷರ ಕತೆ ಓದಿದ್ರೆ ಮಳೆ ಬಂದೇ ಬರುತ್ತದೆ'ಎಂಬ ನಂಬಿಕೆ ಇದಕ್ಕೆ ಪ್ರೇರಣೆಯಾಗಿರಬೇಕು.

೨) ಇದೇ ರೀತಿ, ವಾಲ್ಮೀಕಿ ರಾಮಾಯಣವನ್ನು ಓದುವಾಗ ಋಷ್ಯಶೃಂಗ ಚರಿತ್ರೆಯನ್ನು ವಿಸ್ತರಿಸಿ ಹೇಳಿದರೆ ಮಳೆ ಬರುವುದೆಂದು ನಂಬಿಕೆ ಇದೆ.

೩) ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ಕತ್ತಿಗೆ ಹಾಗೂ ಆಸುಪಾಸಿನ ಗ್ರಾಮಗಳ ಜನ ಅಲ್ಲಿರುವ ಕರಡಿಕಲ್ಲು ಸಿದ್ಧಪ್ಪನಿಗೆ (ನಿರ್ಲಕ್ಷಿತ ದೇವರು) ಪೂಜೆ ಮಾಡಿಸಿ, ರಾತ್ರಿ ಅಲ್ಲೇ ಪುರಾಣ ವಾಚನ ಮಾಡಿ, ಅಲ್ಲೇ ನಿದ್ರಿಸಿ, ಮರು ದಿನ ಬೆಳಿಗ್ಗೆ ಅಲ್ಲಿಂದ ಹೊರಟು ಬರುತ್ತಾರೆ. ಇದರಿಂದ ಮಳೆ ಬರುತ್ತದೆ ಎಂಬ ನಂಬಿಕೆ ಅವರದು. ಈ ಪುರಾಣವಚನ ಈ ಜಿಲ್ಲೆಯ ಇತರೆಡೆಗಳಲ್ಲೂ ಇದೆ.

ಆರಾಧನಾ ವಿಧಾನದ ಆಚರಣೆ ನಮ್ಮಲ್ಲಿ ಮಾತ್ರವಷ್ಟೇ ಅಲ್ಲ. ಜಗತ್ತಿನ ಹಲವು ಕಡೆ ಈ ಒಂದು ವಿಧಾನ ಚಾಲ್ತಿಯಲ್ಲಿದೆ. ಉದಾಹರಣೆಗೆ -

* ''ಗ್ರೀಕ್‌ರ ಸ್ಯೂಸ್ ದೇವನ ಪೂಜೆ

ಗ್ರೀಕರ ಮಳೆ ದೇವತೆ ಸ್ಯೂಸ್. ನಮ್ಮಲ್ಲಿ ಗೌರಿಶಂಕರದಲ್ಲಿ ಶಿವ - ಪಾರ್ವತಿ ಇದ್ದಾರೆಂದು ನಂಬಿರುವಂತೆ ಗ್ರೀಸಿನ ಅಜೀನಾ ಬೆಟ್ಟಗಳ ಅತಿ ಎತ್ತರದ ಶಿಖರ ಪನಹೇಲಿಯನ್‌ದ ಮೇಲೆ ಸ್ಯೂಸ್ ಇದ್ದಾನೆಂದು ಅಥೆನ್ಸಿನ ಜನ ನಂಬಿ ಪೂಜಿಸುತ್ತಿದ್ದರು. ಇಂಥ ನಂಬಿಕೆ ಸಹಜವೂ ಹೌದು. ಮೋಡಗಳು ಕೂರುವುದೂ, ಆ ಜನಕ್ಕೆ ಹೆಚ್ಚು ಪ್ರಯೋಜನಕಾರಿಯಾದ ಓಕ್ ಮರಗಳು ಬೆಳೆಯುವುದೂ ಅಲ್ಲೇ. ಅಥೆನ್ಸಿನ ಚೌಕದಲ್ಲಿ ಹಿಂದೆ ಭೂಮಿ ಮಳೆಗಾಗಿ ಸ್ಯೂಸ್‌ನನ್ನು ಪ್ರಾರ್ಥಿಸುತ್ತಿರುವುದನ್ನು ತೋರಿಸುವ ಒಂದು ವಿಗ್ರಹವೂ ಇತ್ತು. ಮಳೆ ಬಾರದಿದ್ದಾಗ ಅಥೇನಿಯನ್ನರು (ಈ ಅಥೆನ್ಸ್ ಹಿಂದೆ ಸ್ವತಂತ್ರ ರಾಷ್ಟ್ರವಾಗಿತ್ತು. ಈಗ ಗ್ರೀಸ್‌ನ ಒಂದು ಭಾಗ) 'ಓ ಪ್ರಿಯ ಸ್ಯೂಸ್ ದೇವರೇ - ಮಳೆಯನ್ನು ಕೊಡು, ನಮ್ಮ ನೆಲದ ಮೆಲೆ, ನಮ್ಮ ಹೊಲಗಳ ಮೇಲೆ' ಎಂದು ಪ್ರಾರ್ಥಿಸುತ್ತಿದ್ದರು. ಬಿರುಗಾಳಿ, ಮಿಂಚು, ಗುಡುಗು - ಇತ್ಯಾದಿಗಳೆಲ್ಲ ಮಳೆ ಸಂಬಂಧದ ವಿವಿಧ ಭಾವಗಳೆಂದು ಅವರು ಅರ್ಥೈಸುತ್ತಿದ್ದರು''. (ಮಳೆ ಒಂದು ಜಾನಪದೀಯ ಅಧ್ಯಯನ - ಡಾ. ಎಸ್.ಪಿ. ಪದ್ಮಪ್ರಸಾದ್) ಈ ರೀತಿ ಆರಾಧನಾ ವಿಧಾನದ ಆಚರಣೆಗಳನ್ನು ನೋಡಬಹುದಾಗಿದೆ.

* ಮಳೆಯನ್ನು ತಡೆಯುವ ಆಚರಣೆಗಳು

ಅತಿಯಾದರೆ ಅಮೃತವೂ ವಿಷವಾದಂತೆ ; ಅದರಿಂದ ಯಾವುದು ಮಿತಿಯನ್ನು ಮೀರಬಾರದು. ಮಳೆರಾಯನನ್ನು ಕಾಡಿ, ಬೇಡಿ ಕರೆಯಿಸಿಕೊಳ್ಳುವಂತೆಯೇ ಅತಿಯಾದಾಗ ಅದರಿಂದ ಹಾನಿಯೂ ಹೆಚ್ಚು. ಸಾಕು, ಸಾಕು, ಮಳೆರಾಯ, 'ಹಾಳಾದ್ದು ಜಡಿಮಳೆ' ಎಂದು ಎಲ್ಲಾ ಕೆಲಸಗಳಿಗೂ ಅಡ್ಡಿ ಮಾಡುತ್ತದೆಂದು ಶಪಿಸಿ ಹಿಡಿ ಶಾಪ ಹಾಕಿ, ಮೂಗು ಮುರಿಯುವುದು ಉಂಟು. ಮಳೆ ಸ್ವಾಭಾವಿಕವಾಗಿ ಅತಿಯಾಗಿ ಬೀಳುವ ಕಡೆಗಳಲ್ಲೆಲ್ಲಾ ಬಿಡುವಿಲ್ಲದ ಜನತೆ, ರೋಸಿ ಕೆಲವು ಆಚರಣೆಗಳನ್ನು ಮಾಡುತ್ತಾರೆ. ಆದರೆ ನಮ್ಮ ಜಿಲ್ಲೆಯಲ್ಲಿ ಮಳೆಯನ್ನು ತಡೆಯುವ ಆಚರಣೆಗಳು ತುಂಬಾ ವಿರಳ. ಆದರೂ ಕೆಲವೆಡೆ ಉರಿಯುವ ಕೊಳ್ಳಿಯನ್ನು ಬೆತ್ತಲೆಯವರು (ಸಾಮಾನ್ಯವಾಗಿ ಮನೆಯ ಹಿರಿಯ ಮಗ) ಮಳೆಯಲ್ಲಿ ಎಸೆದರೆ ಮಳೆ ನಿಲ್ಲುವುದೆಂಬ ನಂಬಿಕೆ ಇದೆ. ಇದೇ ರೀತಿಯ ಆಚರಣೆ ನೆರೆಯ ಜಿಲ್ಲೆಯಾದ ಕೋಲಾರದಲ್ಲಿಯೂ ಕಾಣಬಹುದು.

"ಮನೆಯ ಹಿರಿ ಮಗ ಬೆತ್ತಲೆಯಾಗಿ ಮಳೆಯೊಳಗಿನಿಂದ ಉರಿಯುವ ಕೊಳ್ಳಿ ತಂದು ಒಂದು ಕಾಲನ್ನು ಎತ್ತಿ ಅದರ ಕೆಳಗಿನಿಂದ ಆ ಕೊಳ್ಳಿಯನ್ನು ಮೇಲಕ್ಕೆಸೆಯೋದು ಮಳೆಯನ್ನು ನಿಲ್ಲಿಸಬಲ್ಲರೆಂದು ನಂಬಿಕೆ ಕೋಲಾರ ಜಿಲ್ಲೆಯಲ್ಲಿದೆ."[೪]

ಮಳೆ ಒಂದು ಜಾನಪದೀಯ ಅಧ್ಯಯನ ಕೃತಿಯಲ್ಲಿ ಡಾ. ಎಸ್.ಪಿ. ಪದ್ಮಪ್ರಸಾದ್ ಅವರು ಮಳೆ ತಡೆಯುವ ಆಚರಣೆಗಳನ್ನು

* ಮಾನವರನ್ನೊಳಗೊಂಡ ಆಚರಣೆಗಳು
* ಪ್ರಾರ್ಥನಾ ವಿಧಾನದ ಆಚರಣೆಗಳು
* ಅನುಕರಣಾ ವಿಧಾನದ ಆಚರಣೆಗಳು
* ಸಸ್ಯಗಳನ್ನೊಳಗೊಂಡ ಆಚರಣೆಗಳು
* ಅನ್ಯವರ್ಗದ ಆಚರಣೆಗಳು ಎಂದು ವಿಭಾಗಿಸುತ್ತಾರೆ.

ಇವುಗಳಲ್ಲಿ ಪ್ರಮುಖವಾಗಿ ಮಾನವರನ್ನೊಳಗೊಂಡ ಆಚರಣೆಗಳಲ್ಲಿ ಗಂಡಸರಿಬ್ಬರಲ್ಲಿ ಒಬ್ಬರನ್ನು ಹೆಣ್ಣಿನಂತೆ ವೇಷ ತೊಟ್ಟು, ಶಾಸ್ತ್ರೋಕ್ತವಾಗಿ ಮದುವೆಯಾದರೆ ಮಳೆ ದೇವಸಿಗೆ ನಾಚಿಕೆಯಾಗಿ ಮುಖ ಮರೆಸಿಕೊಳ್ಳುತ್ತಾನೆಂದು ಇದರಿಂದ ಮಳೆ ನಿಲ್ಲುವುದೆಂದು ಬಿಜಾಪುರ ಜಿಲ್ಲೆಯ ಜಮಖಂಡಿ ತಾಲ್ಲೂಕಿನಲ್ಲಿ ಈ ನಂಬಿಕೆ ಇದೆ.

ಅದೇ ರೀತಿ ಪ್ರಾರ್ಥನಾ ವಿಧಾನದ ಆಚರಣೆಯನ್ನು ನೋಡಿದರೆ ಎರಡು ಕುಡಿ ಬಾಳೆ ಎಲೆಗಳನ್ನು ಒಂದರ ಮೆಲೊಂದನ್ನಿಟ್ಟು ಅದರ ಮೇಲೆ ತುಂಬಾ ಅಕ್ಕಿ ಹಾಕಿ, ಅದರ ಮಧ್ಯೆ ಒಂದು ಕಾಯಿಯನ್ನು ಇರುಸುತ್ತಾರೆ. ಹೂವು, ಕುಂಕುಮ, ಅರಿಶಿಣ, ಎಲ್ಲ ಅದರ ಮೇಲಿಡುತ್ತಾರೆ. ಇದನ್ನು ಹೊಳೆಯಲ್ಲಿ

ತೇಲಿಬಿಟ್ಟು ಕೈಮುಗಿದು ಪ್ರಾರ್ಥಿಸುತ್ತಾರೆ. ಆ ಎಲೆ ನೀರಿನ ಸೆಳವಿಗೆ ತೇಲಿ ಹೋದಂತೆಯೇ ಮನೆಗೆ ತೊಂದರೆಯಾಗುವ ರೀತಿಯಲ್ಲಿ ಏರುತ್ತಿದ್ದ ನೀರೂ ಇಳಿದು ಹೋಗುತ್ತದೆ ಎಂದು ಅವರ ನಂಬಿಕೆ.

ಅನುಕರಣಾ ವಿಧಾನದ ಮಳೆ ತಡೆಯುವ ಆಚರಣೆಗಳಲ್ಲಿ ಇಂಗ್ಲೆಂಡಿನ ಕೆಲವು ಭಾಗಗಳಲ್ಲಿನ ಜನ ಬಿಸಿ ಬೂದಿಯನ್ನು ಗಾಳಿಯಲ್ಲಿ ಊದಿದರೆ ಮಳೆ ನಿಲ್ಲುವುದೆಂದು ಭಾವಿಸಿ ಹಾಗೆ ಮಾಡಿದರೆ ಅಲ್ಲಿನ ಸುಲ್ಕ್ ಜನ ಕಲ್ಲುಗಳನ್ನು ಕೆಂಪಗೆ ಕಾಯಿಸಿ ಮಳೆಯಲ್ಲಿ ಇಡುವುದರಿಂದ ಮಳೆ ಬರುವುದನ್ನು ತಡೆಯಬಹುದೆಂದು ನಂಬುತ್ತಾರೆ. ನ್ಯೂ ಸೌತ್ ವೇಲ್ಸ್ ಪ್ರಾಂತ್ಯದ ಜನ ಆಕಾಶದತ್ತ ಉರಿಯುವ ಕೊಳ್ಳಿ ಎಸೆಯುವುದರಿಂದ ಇದೇ ಪರಿಣಾಮವಾಗುತ್ತದೆಂದು ಭಾವಿಸುತ್ತಾರೆ.

ಈ ರೀತಿ ಜಗತ್ತಿನಾದ್ಯಂತ ಮಳೆ ತಡೆಯುವ ಆಚರಣೆಗಳು ಚಾಲ್ತಿಯಲ್ಲಿವೆ. ಆದರೆ ಕರ್ನಾಟಕದ ದಕ್ಷಿಣ ಪ್ರಾಂತ್ಯದಲ್ಲಿ ಮಳೆ ತಡೆಯುವ ಆಚರಣೆಗಳು ಅತ್ಯಲ್ಪ ಪ್ರಮಾಣದಲ್ಲಿ ದೊರೆಯುತ್ತವೆ. ಕಾರಣವೇನೆಂದರೆ ಹಿಡಿದ ಮಳೆ ನಿರಂತರವಾಗಿ ಸುರಿಯುವುದು ಕಡಿಮೆ. ಹಾಗಾಗಿ ಇಲ್ಲಿ ಮಳೆ ತಡೆಯುವ ಆಚರಣೆಗಳು ಕೂಡಾ ಅಷ್ಟಾಗಿ ಇಲ್ಲವೆಂದೇ ಹೇಳಬಹುದು.

ಒಟ್ಟಾರೆ ಹೆಚ್ಚಾಗಿ ಬರುತ್ತಿರುವ ಮಳೆಯನ್ನು ತಡೆಯಲು ಜನ ಹಲವು ಆಚರಣೆಗಳನ್ನು ಶತ ಶತಮಾನಗಳಿಂದ ರೂಢಿಸಿಕೊಂಡು ಬಂದಿದ್ದಾರೆ. ಆದರೆ ಮಳೆ ತರುವ ಆಚರಣೆಗಳಿಗೆ ಹೋಲಿಸಿದರೆ ಇವುಗಳ ಸಂಖ್ಯೆ ತುಂಬಾ ವಿರಳ ಎನ್ನಬಹುದು.

* 'ಮಳೆ' ಬರುವ - ಬರದಿರುವ ಕುರಿತ ನಂಬಿಕೆಗಳು

ಮಳೆ ಬರದಿರುವಾಗ ಕಾದು ಕಾದು ಆಹಾರವಿಲ್ಲದೆ ಸತ್ತ ಶ್ರಮ ಜೀವಿಗಳನ್ನು ಕಂಡ ಅದೇ ಗುಂಪಿನವರು ಕಟ್ಟಿದ ಹಾಡು. ಮನಮುಟ್ಟುವಂತಿದೆ.

"ಬಣ್ಣದ ಗುಬ್ಯಾರು ಮಳಿರಾಜಾ| ಅವರು
ಮಣ್ಣಾಗಿ ಹೋದರು ಮಳಿರಾಜಾ
ಬಣ್ಣದ ಗುಬ್ಯಾರು ಮಣ್ಣಾಗಿ ಹೋದರು
ಅನ್ನದ ದಿನ ಬಂದು ಮಳಿರಾಜಾ||

ಒಕ್ಕಲಗೋರ್‍ಯಾಗ ಮಳಿರಾಜಾ| ಅವರು
ಮಕ್ಕಳ ಮಾರ್‍ಯಾರ ಮಳಿರಾಜಾ
ಮಕ್ಕಳ ಮಾರೀ ರೊಕ್ಕಾ ಹಿಡಕೊಂಡು
ಭತ್ತಂತ ತಿರಗ್ಯಾರ ಮಳಿರಾಜಾ||

ಸೊಲಗಿ ಹಿಟ್ಟಿನಾಗ ಮಳಿರಾಜಾ| ಅವರು
ಸುಣ್ಣನ್ನ ಕೂಡಿಸ್ಯಾರ ಮಳಿರಾಜಾ
ಹಸು ಬಂದ ಕೇರಿ ಗಪಗಪ ತಿಂದು
ಒಬ್ಬಾಡಿ ಸತ್ತಾರ ಮಳಿರಾಜಾ||

ಗಿದ್ದನ ಅಕ್ಕ್ಯಾಗ ಮಳಿರಾಜಾ| ಅವರು
ಅಪುವನ್ನ ಕೂಡ್ಯಾರ ಮಳಿರಾಜಾ
ಸಣ್ಣ ಕೂಸಿಗಿ ಮನ್ನಿಸಿ ಉಣಿಸ್ಯಾರಾ
ಕಣ್ಣನ್ನೇ ಮುಚ್ಯಾವ ಮಳಿರಾಜಾ||

ಗಂಡುಳ್ಳ ಬಾಲ್ಯಾರು ಮಳಿರಾಜಾ| ಅವರು
ಭಿಕ್ಷಾಕ ಹೊರಟಾರ ಮಳಿರಾಜಾ
ಗಂಡುಳ್ಳ ಬಾಲ್ಯಾರು ಭಿಕ್ಷಾಕ ಹೋದರು
ಅನ್ನದ ದಿನ ಬಂದು ಮಳಿರಾಜಾ||

ಸ್ವಾತೀಯ ಮಳಿಬಂದು ಮಳಿರಾಜಾ| ಸುತ್ತ
ದೇಶಾಕ ಆಗ್ಯಾದ ಮಳಿರಾಜಾ
ಹಳ್ಳ ಕೊಳ್ಳ ಹೆಣ ಹರಿದಾಡಿ ಹೋದವು
ಯಾವಾಗ ಬಂದೆಪ್ಪ ಮಳಿರಾಜಾ?"

(ಹಂಪ ನಾಗರಾಜಯ್ಯ - ಆಕಾಶ ಜಾನಪದ.)

ಕ್ಷಾಮ ಆವರಿಸಿದಾಗ ಹೊಟ್ಟೆಗೆ ಅನ್ನವಿಲ್ಲದೆ ಸತ್ತ ಜನತೆಯ ದುರಂತ ಚಿತ್ರಣವನ್ನು ಈ ಹಾಡು ಸಮರ್ಥವಾಗಿ ಚಿತ್ರಿಸುತ್ತದೆ. ಶ್ರೀಮಂತ ವರ್ಗ ಶ್ರಮ ಜೀವಿಗಳಿಗೆ ಮಾಡಿದ ಮೋಸವನ್ನು ವ್ಯಂಗ್ಯವಾಗಿ ಧ್ವನಿಸುತ್ತದೆ.

ಗ್ರಾಮೀಣ ವರ್ಗದ ಜನರು ಪ್ರಕೃತಿಯಲ್ಲಾಗುವ ಆಗು - ಹೋಗುಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಾರೆ. ಈ ನಂಬಿಕೆಗಳು ಅವರ ಅನುಭವದ ಸಾರವೂ ಹೌದು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ಪಿರಿಯಾಪಟ್ಟಣದ ಪ್ರಾದೇಶಿಕ ನಂಬಿಕೆಗಳನ್ನು ಗಮನಿಸುವುದಾದರೆ ಹಿಂದೂ ಸಂಪ್ರದಾಯದ ನಂಬಿಕೆಯಂತೆ ಯುಗದ ಆದಿಯಾದ ಯುಗಾದಿಯಂದೇ ಭವಿಷ್ಯವನ್ನು ನಿರ್ಧರಿಸಿಕೊಳ್ಳುವ ರೈತಾಪಿ ಜನರ ನಂಬಿಕೆಯ ಪ್ರಕಾರ, ಯುಗಾದಿಯಂದು ಆಗಸದಲ್ಲಿ ಕಾಣುವ ಚಂದ್ರನು ರೈತರಿಗೆ ಭವಿಷ್ಯವನ್ನು ಸೂಚಿಸುವ ಅವದೂತನಾಗಿರುತ್ತಾನೆ. ಹೇಗೆಂದರೆ ಆಗಸದಲ್ಲಿ ಆಗಮಿಸಿದ ಅರ್ಧ ಚಂದ್ರನು ಬಲಗಡೆಗೆ ವಾಲಿದ್ದರೆ ಆ ವರ್ಷದಲ್ಲಿ ವಾಣಿಜ್ಯ ಬೆಳೆಗಳು ಯಶಸ್ವಿಯಾಗುತ್ತವೆ. ಎಡಗಡೆಗೆ ವಾಲಿದ್ದರೆ ಆಹಾರ ಧಾನ್ಯಗಳ ಬೆಳೆ ಹುಲುಸು ಎಂಬ ನಂಬಿಕೆಯಿದೆ. ಇದೇ ಮಾತನ್ನು ಅಲ್ಲಿಯ ಜನಪದೀಯರು ಚಂದ್ರಮ ಬಲಗಡೆಗೆ ಬಾಗಿದ್ದರೆ ಮುಂಗಾರು ಮಳೆ ಉತ್ತಮವೆಂದು ಎಡಗಡೆಗೆ ವಾಲಿದ್ದರೆ ಹಿಂಗಾರು ಮಳೆ ಉತ್ತಮವೆಂದು ಭಾವಿಸುತ್ತಾರೆ. ಇವೆರಡೂ ಅಲ್ಲದೆ ಚಂದ್ರನು ಸಮ ತೋಲನದಲ್ಲಿದ್ದರೆ ಹಿಂಗಾರು ಮತ್ತು ಮುಂಗಾರು ಸಮ ಪ್ರಮಾಣದ್ದೆಂದು ಭಾವಿಸುತ್ತಾರೆ. ಈ ನಂಬಿಕೆ ನೆರೆಯ ತಾಲ್ಲೂಕಾದ ಕೆ.ಆರ್. ನಗರದಲ್ಲೂ ದೂರದ ಪ್ರದೇಶವಾದ ಟಿ. ನರಸೀಪುರದಲ್ಲೂ ಕಂಡುಬರುವುದು.

ಸಾಲಿಗ್ರಾಮದ ಸುತ್ತಮುತ್ತಲ ಪ್ರದೇಶಗಳಲ್ಲಿ ರೈತರು ವ್ಯವಸಾಯಕ್ಕೆ ಬಳಸುವ ಹಸು ಗಾಳಿಯು ಬೀಸುವ ವಿರುದ್ಧ ದಿಕ್ಕಿನಲ್ಲಿ ನಿಂತು ಗಾಳಿಯನ್ನು ಸೇವಿಸುವಾಗ ಮಳೆ ಬರುವ ಮುನ್ಸೂಚನೆ ಇದ್ದರೆ ಉಲ್ಲಾಸದಿಂದ ಬಾಲವನ್ನೆತ್ತಿ ಕುಣಿಯುತ್ತದೆ. ಹೀಗಾದಾಗ ಮಳೆ ಬರುತ್ತದೆಂಬ ನಂಬಿಕೆ ಇದೆ.

ಸಕಾಲದಲ್ಲಿ ಮಳೆ ಬರದಿದ್ದರೆ ಪರಿಸರ ಶಾಸ್ತ್ರಜ್ಞರು, ಹವಾಮಾನ ಶಾಸ್ತ್ರಜ್ಞರು ಹೇಳುವ ಕಾರಣಗಳು ಸಾಧಾರಣವಾಗಿ ಬೇರೆಬೇರೆಯಾಗಿರುತ್ತವೆ. ಆ ಕಾರಣಗಳೇನೇ ಇರಲಿ ಈ ಪ್ರಾಕೃತಿಕ ವಿಫಲತೆಗೆ ಜಾನಪದರಂತೂ ಪಾರಂಪರಿಕವಾಗಿ ಮನುಷ್ಯನ ಕೆಲವು ಸಾಮಾನ್ಯ ನಡವಳಿಕೆಗಳನ್ನೇ ಹೊಣೆಯಾಗಿಸಿದ್ದಾರೆ.

ಆಗ ರಿಂದ ಇಂತಹ ಹೊಣೆಗೇಡಿತನದ ಕೆಲಸಗಳು ನಡೆಯದಂತೆ ನೋಡಿಕೊಳ್ಳುವಲ್ಲಿ ಅವರು ಪ್ರಾಮಾಣಿಕ ಶ್ರದ್ಧೆಯಿಂದ ಪ್ರಯತ್ನ ನಡೆಸುತ್ತಾರೆ. * ನಾಟಕದವರು ಊರಿಗೆ ಬಂದರೆ ಮಳೆಯಾಗುವುದಿಲ್ಲ. ಮಳೆ ಆಗಬೇಕಾದ ಸಂದರ್ಭದಲ್ಲಿ ಒಂದೂರಿಗೆ ನಾಟಕದ ಕಂಪೆನಿಯವರು ಬಂದು ಊರಿದರೆ ಇನ್ನು ನಮ್ಮೂರಿನಲ್ಲಿ ಮಳೆಯಾಗದು ಉತ್ತರ ಕರ್ನಾಟಕದ ಕೆಲವು ಪ್ರದೇಶಗಳ ಜನ ಪಾರಂಪರಿಕವಾಗಿ ನಂಬಿದ್ದಾರೆ. ಇದಕ್ಕೆ ಕಾರಣವೇನೆಂದರೆ ಮಳೆ ಬಂದರೆ ಅವರ ನಾಟಕಕ್ಕೆ ತೊಂದರೆ ಅಲ್ಲೇನು? ಕಲೆಕ್ಷನ್ ಆಗಲ್ಲ, ಅದಕ್ಕೆ ಮಳೆ ಬರದೆ ಇರಲಿ ಅಂತ ಅವರು ದಿನಾ ಪೂಜೆ ಮಾಡುತ್ತಾರೆ. ಹಿಂಗಾಗಿ ಮಳೆ ತಪ್ಪೋಗ್ತದೆ. ನಾಟಕದವರ ಪ್ರಾರ್ಥನೆಗೆ ದೇವರೆಂಬುವನು ನಿಜವಾಗಿಯೂ ಇಷ್ಟೊಂದು ಕಿವಿ ಕೊಡುವುದಾಗಿದ್ದರೆ ನಮ್ಮ ಎಷ್ಟೋ ನಾಟಕ ಕಂಪೆನಿಗಳು ಇನ್ನೂ ಬದುಕಿಯೇ ಇರುತ್ತಿದ್ದವು. (ಮಳೆ ಒಂದು ಜಾನಪದೀಯ ಅಧ್ಯಯನ - ಡಾ. ಎಸ್.ಪಿ. ಪದ್ಮಪ್ರಸಾದ್)

* ರಾಜರು ಹೋದುದ್ದರಿಂದ ಮಳೆ ಹೋಯಿತು ಎನ್ನುವ ಕಲ್ಪನೆ ಹಳೆ ಮೈಸೂರು ಪ್ರಾಂತ್ಯದ ಕೆಲವು ಕಡೆ ಚಾಲ್ತಿಯಲ್ಲಿದೆ. ರಾಜರು ಸತ್ಯ, ಧರ್ಮಗಳನ್ನು ಆಧರಿಸಿ ರಾಜ್ಯಭಾರ ಮಾಡುತ್ತಿದ್ದರು. ಅದರಿಂದಾಗಿ ರಾಜ್ಯ ಸುಭಿಕ್ಷವಾಗಿತ್ತು. ಕಾಲ ಕಾಲಕ್ಕೆ ಮಳೆಯಾಗುತ್ತಿತ್ತು. ಆದರೆ ಇಂದು ರಾಜಕಾರಣಿಗಳ ದೊಂಬರಾಟ, ಭ್ರಷ್ಟತೆ, ಸತ್ಯ ಧರ್ಮಗಳ ವಿವೇಚನೆ ಇಲ್ಲದಿರುವುದು ಮಳೆ ಬರದಿರುವುದಕ್ಕೆ ಕಾರಣವಾಗಿದೆ ಎಂಬ ನಂಬಿಕೆಯಿದೆ.
* ಸತ್ಯಧರ್ಮ ಕಡಿಮೆಯಾಗಿ ಮಳೆ ಹೋಗ್ತಾ ಇದೆ. ನಮ್ಮ ಸನಾತನಿಗಳು ಪದೇ ಪದೇ ಹೇಳುವ ಈ ಮಾತುಗಳ ಬಗ್ಗೆ ಜಿಜ್ಞಾಸೆ ಅನಾವಶ್ಯಕ. ಸಾಮಾನ್ಯ ರೈತನೂ ಸಹ ಇದೇ ಮಾತುಗಳನ್ನೇ ಆಗಾಗ ಹೇಳುತ್ತಿರುತ್ತಾರೆ ಎಂಬುದು ಸ್ಮರಣಾರ್ಹ. ಇದು ಕರ್ನಾಟಕದ ಎಲ್ಲಾ ಪ್ರದೇಶಗಳಲ್ಲಿಯೂ ಕೇಳಿ ಬರುವ ಮಾತಾಗಿದೆ ಮತ್ತು ನಂಬಿಕೆಯಾಗಿದೆ.
* ಹೆಂಡತಿ ನಿಷ್ಕಾರಣವಾಗಿ ಗಂಡನನ್ನು ಬೈದರೆ ಮಳೆ ಹೋಗುತ್ತದೆ ಎನ್ನುವ ನಂಬಿಕೆ ಅಲ್ಲಲ್ಲಿ ಕೆಲವು ಕಡೆ ಚಾಲ್ತಿಯಲ್ಲಿದೆ.

'ಬಸವಣ್ಣನನ್ನು ಬಾವಿಗೆ ಹಾಕುವುದು, ಭಜನೆ ಮಾಡಿಸುವುದು, ಸುಗ್ಗಿ ಕುಣಿತ, ಕಥೆ ಓದಿಸುವುದು ಮೊದಲಾದ ಆಚರಣೆಗಳನ್ನು ಮಳೆಗಾಗಿ ಮಾಡುವರು. ಮಳೆಯನ್ನು ನಿಲ್ಲಿಸುವ ಆಚರಣೆಗಳು ನಮ್ಮಲ್ಲಿ ವಿರಳವಾಗಿವೆ. ವಿಪರೀತ ಮಳೆ ಬರುವಾಗ ಬೆತ್ತಲೆಯಲ್ಲಿ ಉರಿಯುವ ಕೊಳ್ಳಿಯನ್ನು ಮಳೆಯಲ್ಲಿ ಎರಚಿದರೆ ಮಳೆ ನಿಲ್ಲುತ್ತದೆ ಎಂದು ಹೇಳುತ್ತಾರೆ. ಮಲೆನಾಡಿಗಿಂತ ಬಯಲು ಸೀಮೆಯಲ್ಲಿ ಮಳೆರಾಯನನ್ನು ಕುರಿತ ಆಚರಣೆಗಳು ಹೆಚ್ಚು. ಈ ಬಗೆಗಿನ ಸಾಹಿತ್ಯ ಹೆಚ್ಚು ಸಂಗ್ರಹವಾಗಿದೆ ಎಂದು ಭಾವಿಸಿರುವೆ' (ಆಕಾಶ ಜಾನಪದ - ಹಂಪ ನಾಗರಾಜಯ್ಯ) ಈ ರೀತಿ ಮಳೆ ಬಾರದಿರುವುದಕ್ಕೂ ನಮ್ಮಲ್ಲಿ ಅಷ್ಟೇ ಅಲ್ಲ, ಜಗತ್ತಿನ ಹಲವು ಕಡೆ, ಹಲವು ಆಚರಣೆಗಳು, ನಂಬಿಕೆಗಳಿವೆ ಎನ್ನುವುದರಲ್ಲಿ ಎರಡು ಮಾತಿಲ್ಲ.

* "ಕುಷ್ಠ ರೋಗಿಗಳನ್ನು, ತೊನ್ನು ಹಿಡಿದ ಜನರನ್ನು ಸತ್ತ ನಂತರ ಹೂತರೆ ಮಳೆ ಸಕಾಲಕ್ಕೆ ಆಗುವುದಿಲ್ಲ ಎಂದು ಕರ್ನಾಟಕದ ಸರ್ವ ಸಾಮಾನ್ಯ ಎಲ್ಲ ಭಾಗಗಳ ಗ್ರಾಮೀಣ ಜನ ನಂಬುತ್ತಾರೆ. ಕೆಲವು ಪ್ರದೇಶಗಳಲ್ಲಿ ಕೇವಲ ಕುಷ್ಠ ರೋಗಿಗಳ ಬಗ್ಗೆ ಮಾತ್ರ ನಂಬಿಕೆ ಇದ್ದರೆ, ಇನ್ನು ಕೆಲವೆಡೆಗಳಲ್ಲಿ ಕುಷ್ಠ ಹಾಗೂ ತೊನ್ನು ಈ ಎರಡೂ ತೆರನ ತೊಂದರೆಗಳಿಂದ ಪೀಡಿತರಾದವರ ಬಗ್ಗೆಯೂ ಈ ನಂಬಿಕೆ ಇದೆ." ೫

ಈ ಅಭಿಪ್ರಾಯವು ಜಿಲ್ಲೆಯಾದ್ಯಂತ ಇದ್ದು, ಈ ರೀತಿ ತೊನ್ನಿರುವ ದೇಹದ ಜನರು ಸತ್ತಾಗ ಆ ಹೆಣವನ್ನು ಹೂಳುವಾಗ (ಸಾಮಾನ್ಯವಾಗಿ ಸುಡುತ್ತಾರೆ) ಗುಂಡಿಯೊಳಗೆ ಸಾಕಷ್ಟು ಸುಣ್ಣವನ್ನು ಹಾಕಿ ಹೂಳುತ್ತಾರೆ. ಉಪ್ಪನ್ನು ಹಾಕಿ ಹೂಳುವುದು ಸಂಪ್ರದಾಯವಿದೆ. ಇದರಿಂದ ಭೇರ್ಯ ಸುತ್ತ ಮುತ್ತಲ ಪ್ರದೇಶಗಳಲ್ಲಿ ಮದುವೆಯ ಸಂದರ್ಭದಲ್ಲಿ ಶಾಸ್ತ್ರದ ಭತ್ತ, ಹಾಗೂ ಅಕ್ಷತೆ ಅಕ್ಕಿಯನ್ನು ಮದು ಮಕ್ಕಳು ತಿಂದರೆ ಮದುವೆಯ ಸಂದರ್ಭದಲ್ಲಿ ಮಳೆ ಬೀಳುತ್ತದೆಂಬ ನಂಬಿಕೆ ಇದೆ. ಇದು ಸಾಮಾನ್ಯವಾಗಿ ಜಿಲ್ಲೆಯಾದ್ಯಂತ ಹರಡಿರುವ ನಂಬಿಕೆಯಾಗಿದೆ.

ಹೀಗೆ ಮಳೆಯು ಬರುವ ಹಾಗೂ ಬರದಿರುವ ಕುರಿತು ಇರುವ ನಂಬಿಕೆ ನಡವಳಿಕೆಗಳನ್ನು ಕಲೆ ಹಾಕುತ್ತಾ ಹೋದರೆ 'ಮಳೆ ನಿಂತರೂ ಮರದ ಹನಿಗಳು ನಿಲ್ಲವು' ಎಂಬ ಮಾತಿನಂತೆ ಮಳೆ ಸಂಬಂಧಿ ಜಾನಪದ ನಂಬಿಕೆಗಳನ್ನು ಹುಡುಕುತ್ತಾ ಆಚರಣೆಗಳನ್ನು ಕೆದಕುತ್ತಾ ಹೊರಟರೆ ಬಹುಶಃ ಕೊನೆಯೇ ಇರದು ಅಥವಾ ಅಲ್ಪ ಸ್ವಲ್ಪ ಪ್ರಾದೇಶಿಕ ಭಿನ್ನತೆಯಿಂದ ಆಚರಣೆಯ ಭಿನ್ನತೆಯೂ ಕಂಡು ಬರುತ್ತದೆ. ಏಕೆಂದರೆ ಜಾನಪದರ ನಂಬಿಕೆಯ ಬದುಕು, ವಿಸ್ಮಯಕರ ಮತ್ತು ಅಕ್ಷಯವಾದದ್ದಾಗಿದೆ. ಆದ್ದರಿಂದ ಈ ನಂಬಿಕೆಗಳ ಭಂಡಾರವನ್ನು ಮೊಗೆದಷ್ಟು ಹೊಸ ಹೊಸ ಸಾಮಗ್ರಿ ಉದ್ಭವಿಸುವ ಕಣಜಗಳಾಗಿವೆ. ಈ ವಿಚಾರವಾಗಿ ಕಲೆ ಹಾಕುವ ಸಂಶೋಧಕನಿಗಂತೂ ಬಿಸಿಲ ಬೇಗೆಯಲ್ಲಿ ಹನಿವ ತುಂತುರು ತರುವ ಹರ್ಷೋಲ್ಲಾಸದಂತೆ ಸಂಶೋಧನಾ ಪ್ರಕ್ರಿಯೆಯಲ್ಲಿ ಮೈದೋರುವ ಈ ಹೊಸ ಹೊಳಹುಗಳು ಸಂಭ್ರಮ ಪೂರ್ಣವಾದುವಾಗಿವೆ.

* * * * *

ಅಡಿ ಟಿಪ್ಪಣಿಗಳು

೧ ಮಳೆ ಒಂದು ಜಾನಪದೀಯ ಅಧ್ಯಯನ. - ಲೇ. ಡಾ. ಎಸ್.ಪಿ. ಪದ್ಮಪ್ರಸಾದ್. - ಪುಟ - ೯

೨ ಅದೇ - ಪುಟ - ೧೨

೩ ಅದೇ - ಪುಟ - ೧೩

೪ ಅದೇ - ಪುಟ - ೫೨, ೫೩

೫ ಅದೇ - ಪುಟ - ೯೫

ಉಪಸಂಹಾರ

ಜಗತ್ತಿನ ಇತರ ಭಾಗಗಳಲ್ಲಿ ಜಾನಪದ ವಿಜ್ಞಾನವನ್ನು ಕುರಿತು ನಡೆದಿರುವ, ನಡೆಯುತ್ತಿರುವ ಸಂಶೋಧನೆ, ವಿಶ್ಲೇಷಣೆ, ಪ್ರಕಟಣೆ, ಅನ್ವಯ ಕ್ರಿಯೆಗಳಿಗೆ ಹೋಲಿಸಿದರೆ ಭಾರತದಲ್ಲಿ, ಕರ್ನಾಟಕದಲ್ಲಿ ನಡೆದಿರುವ ಕೆಲಸ ತುಂಬ ಕಡಿಮೆ ಎಂದು ಭಾಸವಾಗುವುದು ಸಹಜ. ಜಾನಪದದ ಬಗೆಗಿನ ಆಸಕ್ತಿ ನಮ್ಮಲ್ಲಿ ಕುತೂಹಲದ ಚಿಪ್ಪೊಡೆದು, ಮೊಳಕೆಗೊಂಡು ಹೆಚ್ಚೂ ಕಡಮೆ ನೂರು ವರ್ಷಗಳೇ ಆದರೂ ಅದು ತನ್ನ ಅಸ್ಪೃಶ್ಯತೆಯನ್ನು ಕಳಚಿ ಹಾಕಿ ಸರ್ವಜನ ಪ್ರೀತಿಯನ್ನು ಗಂಭೀರ ಗೌರವವನ್ನು, ವೈಜ್ಞಾನಿಕ ದೃಷ್ಟಿಯನ್ನೂ ಗಳಿಸಿಕೊಂಡಿದ್ದು ತೀರಾ ಇತ್ತೀಚೆಗೆ ಎಂದು ಹೆಚ್.ಜೆ. ಲಕ್ಕಪ್ಪಗೌಡ ಅವರ ಮಾತು ನಮ್ಮಲ್ಲಿ ಜಾನಪದ ಕ್ಷೇತ್ರದಲ್ಲಿ ಮತ್ತಷ್ಟು, ಮೊಗದಷ್ಟು ಕೆಲಸಗಳು ಆಗಬೇಕು ಎನ್ನುವ ಆಶಯವನ್ನು ತಿಳಿಸುತ್ತವೆ. ಆ ನಿಟ್ಟಿನಲ್ಲಿ ಮಳೆ ಜಾನಪದ ಒಂದು ಅಧ್ಯಯನ ಎನ್ನುವ ನನ್ನ ಈ ಸಂಪ್ರಬಂಧದಲ್ಲಿ ಜನಪದೀಯರ ಹಿನ್ನೆಲೆಯಲ್ಲಿ ಮಳೆ ಕುರಿತು ವಿವೇಚಿಸುವ, ವಿಶ್ಲೇಷಿಸುವ ಪ್ರಯತ್ನವನ್ನಷ್ಟೇ ಇಲ್ಲಿ ಮಾಡಿರುತ್ತೇನೆ.

ಮಾನವನಿಗೆ ಮೊದಲಿನಿಂದಲೂ ನಿಗೂಢವೂ, ವಿಸ್ಮಯಕರವೂ, ಕುತೂಹಲ ಪೂರ್ಣವೂ, ಅನ್ವೇಷಣ ಶಕ್ತಿ ಜನಕವೂ, ಆರಾಧನೀಯವೂ. ಸವಾಲು ಆಗಿರುವುದು ಎಂದರೆ ಪ್ರಾಕೃತಿಕ ಲೋಕ. ಅದು ತನ್ನ ಮೇಲೆ ನಿರಂತರವೂ ಬೀರುವ ಪ್ರಭಾವ, ಪರಿಣಾಮಗಳ ರಹಸ್ಯವನ್ನು ಸಂಶೋಧಿಸಲು ಆತ ಅಂದಿನಿಂದಲೂ ಒಂದಲ್ಲಾ ಒಂದು ರೀತಿಯಲ್ಲಿ ಪ್ರಯತ್ನಿಸುತ್ತಲೇ ಬಂದಿದ್ದಾನೆ. ಆಕಾಶ ಕಾಯಗಳೆಡೆಗೆ ಮಾನವನ ದೃಷ್ಟಿ ಹರಿದದ್ದನ್ನು ಅವುಗಳಿಂದ ತನ್ನ ಮೇಲಾಗುವ ಪರಿಣಾಮಗಳಿಗೆ ಆತ ತನ್ನನ್ನು ಒಡ್ಡಿಕೊಳ್ಳುವುದು ಮಾತ್ರವಲ್ಲದೆ ಅವುಗಳ ಬಗ್ಗೆ ಭಯ, ಗೌರವ, ಪ್ರೀತಿ ಕೃತಜ್ಞತೆ, ಆಶ್ಚರ್ಯ, ಆರಾಧನಾ ಮನೋಧರ್ಮವನ್ನು ಬೆಳೆಸಿಕೊಂಡಿದ್ದನ್ನು ಅದರ ಫಲವಾಗಿ ಕಲ್ಪನೆಗಳು, ಸಂಪ್ರದಾಯಗಳು ಬಗೆಬಗೆಯಾಗಿ ಬೆಳೆದು ನಿಂತವೆಂಬುದನ್ನು ನಾವು ಅವಲೋಕಿಸಬಹುದಾಗಿದೆ. ಈ ನಿಟ್ಟಿನಲ್ಲಿ ಮಳೆ ಕುರಿತಂತೆ ಜನಪದೀಯರಲ್ಲಿ ಇರುವ ಕಲ್ಪನೆ, ಸ್ವರೂಪ, ಆಚರಣೆ, ನಂಬಿಕೆ ಇತ್ಯಾದಿ ಸಂಗತಿಗಳ ವಿಶ್ಲೇಷಣೆ ಬಹಳ ಪ್ರಧಾನವಾದುದಾಗಿದೆ. ಮಳೆಯ ಬಗ್ಗೆ ಅತ್ಯಂತ ಆಸಕ್ತಿದಾಯಕವಾದ ಅಂಶಗಳನ್ನು ಒಂದೆಡೆಗೆ ತಂದು ಈ ಸಂಪ್ರಬಂಧದಲ್ಲಿ ಸ್ವಾರಸ್ಯವಾಗಿ ವಿವರಿಸಲಾಗಿದೆ.

ಒಟ್ಟಾರೆ 'ಮಳೆ' ಅಂದರೆ ಬದುಕು. ಇದು ಇಡೀ ಜೀವ ಜಗತ್ತಿನ ಅನುಭವ. ಮಳೆ ಬಿದ್ರೆ ಸೊಬಗು, ಇಲ್ಲದಿದ್ರೆ ಕೊರಗು. ಮನುಷ್ಯ ವ್ಯಾವಸಾಯಗಾರನಾದ ಮೇಲಂತೂ ಮಳೆ ಇನ್ನೂ ಆಪ್ತವಾಯಿತು. ಕೃಷಿಗಿಂತ 'ಮುನ್ನ' ನೈಸರ್ಗಿಕವಾಗಿ ಪಡೆಯುತ್ತಿದ್ದ ಸ್ನಾನಕ್ಕಾಗಿ ಆಹಾರಕ್ಕಾಗಿ ಮಳೆಯನ್ನೇ ಇದಿರು ನೋಡುತ್ತಿದ್ದ ಮನುಷ್ಯ ನಾಗರಿಕನಾದಂತೆ ಮಳೆಯ ನೀರಿನ ಅವಶ್ಯಕತೆ ಹೆಚ್ಚಾಯಿತು. ಇಂತಹ ಮಳೆಯ ಹುಟ್ಟಿನ ಬಗೆಗೆ ಪ್ರಾದೇಶಿಕ ಮಟ್ಟದಲ್ಲಿ ಭಿನ್ನ ಭಿನ್ನವಾದ ಕಲ್ಪನೆ, ಕಥೆಗಳಿವೆ ಎನ್ನುವುದರಲ್ಲಿ ಎರಡು ಮಾತಿಲ್ಲ. ನನ್ನ

ಅಧ್ಯಯದ ಉದ್ದೇಶದಿಂದಾಗಿ ಮೈಸೂರು ಜಿಲ್ಲೆಯ ಕೆಲವು ಪ್ರದೇಶಗಳಲ್ಲಿನ ಕೆಲವು ಕಲ್ಪನೆಗಳನ್ನಷ್ಟೇ ಇಲ್ಲಿ ತಿಳಿಸಲು ಪ್ರಯತ್ನಿಸಿದ್ದೇನೆ.

ಮಳೆಯೆಂಬ ವಿಷಯ ಭಾರತೀಯ ಸಮಾಜದಲ್ಲಿ ಪಂಚಾಂಗದೊಂದಿಗೆ ತಳುಕು ಹಾಕಿಕೊಂಡು ಬೆಳೆದು ಬಂದರೆ ಮುಂದುವರೆದ ದೇಶಗಳಲ್ಲಿ 'ಮಳೆ ಶಾಸ್ತ್ರ'ವೆಂದು ಬೆಳೆಯ ತೊಡಗಿದಂತೆ ಕಾಣುತ್ತದೆ. ಮಳೆಯ ಹುಟ್ಟು, ಮಳೆಯ ನಕ್ಷತ್ರ, ಮಳೆಯ ಬಗೆಗಿನ ಆಚರಣೆಗಳು. ನಂಬಿಕೆ ಕಲ್ಪನೆ ಮತ್ತು ಮಳೆ ಯಾವಾಗ ಬರುತ್ತದೆ, ಎಷ್ಟು ಕಾಲ ಬರುತ್ತದೆ. ಯಾವ ಮಳೆ ರೈತನ ಮಿತ್ರ. ಯಾವ ಮಳೆ ಹದವಾದ ಮಳೆ, ಬೆದೆ ಮಳೆ ಯಾವುದು ಇತ್ಯಾದಿ ವಿಷಯಗಳನ್ನು ಕುಳಿತಲ್ಲಿಯೇ ಹೇಳುವ ನಮ್ಮ ಗ್ರಾಮೀಣ ಜನತೆಯ ಪ್ರತಿಭೆ ನಿಜಕ್ಕೂ ಕಲಿತವರಿಗಿಂತ ಒಂದು ಕೈ ಮೇಲು ಎಂದೇ ಹೇಳಬೇಕು. ಆದ್ದರಿಂದಲೇ ನಾನು ಇವರನ್ನು 'ಗ್ರಾಮೀಣ ಹವಾಮಾನ ತಜ್ಞ'ರೆಂದೇ ಕರೆಯಲೂ ಇಷ್ಟಪಡುತ್ತೇನೆ.

ದಕ್ಷಿಣ ಭಾರತದ ವಿವಿಧ ಭಾಷೆಗಳಲ್ಲಿನ ಮಳೆ ಗಾದೆಗಳ ತೌಲನಿಕ ಅಧ್ಯಯನ ಈ ಭೂಖಂಡದಲ್ಲಿನ ಮಳೆ ನಂಬಿಕೆಗಳ ಮೇಲೆ ಇನ್ನಷ್ಟು ಬೆಳಕು ಚೆಲ್ಲಬಹುದು. ಮಳೆ ಲೆಕ್ಕಾಚಾರದ ಪದ್ಧತಿಯೇನೋ ಇಡೀ ಭಾರತದಲ್ಲೆಲ್ಲಾ ಏಕ ರೂಪವಾಗಿರುವಂತೆ ಕಾಣುತ್ತದೆ. ಆದರೆ ಮಳೆ ಶಕುನಗಳು, ವಿವಿಧ ವರ್ಗದ ಮಳೆ ಆಚರಣೆಗಳು, ಇವುಗಳಲ್ಲೆಲ್ಲಾ ಸಾಕಷ್ಟು ವ್ಯತ್ಯಾಸಗಳೂ ವೈವಿದ್ಯತೆಗಳೂ ಕಂಡು ಬರುವ ಸಾಧ್ಯತೆ ಇದೆ. ಜಿಲ್ಲಾವಾರು, ಪ್ರದೇಶವಾರಾಗಿ ಇಂಥ ಅಧ್ಯಯನಗಳು ನಡೆದರೆ ಅವು ಮಾದರಿ ಅಧ್ಯಾಯಗಳಾಗುತ್ತವೆ.

'ವಾಸ್ತವವಾಗಿ ಮಳೆ ಜಾನಪದ ಆಕಾಶ ಜಾನಪದದ ಒಂದು ಅವಿಭಾಜ್ಯ ಅಂಗ. ಆಕಾಶ ಜಾನಪದದ ಬಗ್ಗೆಯೇ ತಲಸ್ಪರ್ಶಿ ಅಧ್ಯಯನ ಕನ್ನಡದಲ್ಲಿ ಈ ವರೆಗೆ ಆಗಿಲ್ಲ. ಮಳೆ ಜಾನಪದ ಕುರಿತು ನಾವು ನಡೆಸುವ ವಿಸ್ತೃತ ಅಧ್ಯಯನ ಈ ಆಕಾಶ ಜಾನಪದದ ಅಧ್ಯಯನ ಕ್ಷೇತ್ರಕ್ಕೆ ನಾವು ಸಲ್ಲಿಸಬಹುದಾದ ಕಾಣಿಕೆ ಎಂದು ಡಾ. ಎಸ್.ಪಿ. ಪದ್ಮಪ್ರಸಾದ್ ಹೇಳಿದ್ದಾರೆ.

ಹೀಗೆ ಮಳೆ ಕುರಿತ ಕಲ್ಪನೆ, ನಂಬಿಕೆ, ಆಚರಣೆಗಳ ಸಂಶೋಧನಾ ವಿಷಯ ಒಂದು ಮಹಾಪ್ರಬಂಧ ವಸ್ತು ವಿಷಯವು ಆಗಿರುವುದರ ಜೊತೆಗೆ ಈ ನಿಬಂಧವು ಆ ದಿಕ್ಕಿನಲ್ಲಿ ಇಟ್ಟ ಒಂದು ಸಣ್ಣ ಹೆಜ್ಜೆ ಎಂದು ಹೇಳುತ್ತಾ ಇಂತಹ ವೈಜ್ಞಾನಿಕ ಯುಗದಲ್ಲಿಯೂ ಈ ಹುಡುಕು ಕ್ರಿಯೆಯೇ ಸಂತೋಷದಾಯಕ, ಬಿಸಿಲ ಬೇಗೆಯಲ್ಲಿ ಹನಿಯ ತುಂತುರು ತರುವ ಹರ್ಷೋಲ್ಲಾಸದಂತೆ ಎಂದು ಹೇಳುತ್ತಾ ನನ್ನ ಸಂಪ್ರಬಂಧವನ್ನು ಮುಕ್ತಾಯಗೊಳಿಸುತ್ತೇನೆ.

* * * * *

ಅನುಬಂಧ

ಮಳೆ ಗಾದೆಗಳು

೧. ಅಶ್ವಿನಿ :-

೧. 'ಅಶ್ವಿನಿ ಮಳೆ ಬಂದರೆ ಅಳೋ ಮಕ್ಕಳಿಗೂ ಹಾಲಿಲ್ಲ'

೨. 'ಅಶ್ವಿನಿ ಬಂದರೆ ಅಡಿಕೆ ತೆಂಗು ಹುಸಿಯಾಕ್ಕವೆ'

೩. 'ಅಸೂನಿ ಮಳೆ ಅದರ ಸಿಸುಗೋಳಿಗೂ ನೀರು ಸಿಗೋದಿಲ್ಲ. (ಶಿರಹಟ್ಟಿ - ಧಾರವಾಡ)

೪. 'ಅಶ್ವಿನಿ ಸಸ್ಯನಾಶಿನಿ.

೫. 'ಅಶ್ವಿನಿ ಮಳೆ ಬಿದ್ರೆ ಅಡಿಕೆ ತೆಂಗಿಗೆ ಕೇಡು.

೬. 'ಅಶ್ವಿನಿ ಮಳೆ ಅರಿಸಿನಕ್ಕೆ ಮೇಲು,ಅಡಿಕೆ ತೆಂಗಿಗೆ ಕೇಡು.

೭. 'ಅಶ್ವಿನಿ ಮಳೆಯಲ್ಲಿ ಬಿತ್ತಿದರೆ ಸರ್ವನಾಶ.

೮. 'ಅಶ್ವಿನಿಯೋ ನಾಶಿನಿಯೋ? (ಅಶ್ವಿನಿಯೋ ನಾಶವೋ - ಪಾಠಾಂ)

೯. 'ಅಶ್ವಿನಿ ಪೊಡತೆ ಅಶ್ವೀಸಂಚೆ ಕೂಡ ನೀಂಡದು (ತುಳು ಕಾರ್ಕಳ. ದ. ಕ.) (ಅಶ್ವಿನಿ ಬಿದ್ದು ಹೋದ್ರೆ ಆ ಮೇಲಿನ ಮಳೆಗಳೂ ಇಲ್ಲ)

೨. ಭರಣಿ :-

೧. ಭರಣಿ ಮಳೆ ಧರಣೀಗೊಳ್ಳೇದು. (ಮಧುಗಿರಿ - ತುಮಕೂರು)

೨. ಭರಣಿ, ಬಂಗಾರದ ಕರಣಿ.

೩. ಭರಣಿ ಮಳೆ ಬಂದು ಧರಣಿ ತಂಪಾಯ್ತು.

೪. ಭರಣಿ ಸುರಿದು ಧರಣಿ ಬದುಕಿತು.

೫. ಭರಣಿ ಮಳೆ ಧರೆಗೆ ಗಂಡ.

೬. ಭರಣಿ ಬಂದರೆ ಧರಣಿ ಎಲ್ಲಾ ಬೆಳೆ. (ಗೌರಿಬಿದನೂರು - ಕೋಲಾರ)

೭. ಭರಣಿ ವಸ್ತೆ ಧರಣಿ ಪೂಂಡನು (ತೆಲುಗು) - ಗುಡಿಬಂಡೆ, ಕೋಲಾರ)

೮. ಭರಣಿ ಮಳೆ, ಚಿನ್ನದ ಮಳೆ (ಹೊನ್ನಾಳಿ ; ಶಿವಮೊಗ್ಗ)

೩. ಕೃತ್ತಿಕಾ :-

೧. ಕರ್ತಕೀ ಮಳೇನ ಕೇಳವರು ಇಲ್ಲ (ಧಾರವಾಡ)

೨. ಕೃತ್ತಿಕೆ, ಬೀಳ್ಲಿದ್ರೆ ಮೃತ್ತಿಕೆ.

೩. ಕೃತ್ತಿಕೆಗೆ ಕುರುಹು ಗಾಳಿ.

೪. ರೋಹಿಣಿ :-

೧. ರೋಹಿಣಿ ಮಳೇಲಿ ದೋಣಿ ಹಾಕೋದು. (ಹೊನ್ನಾವರ - ಉ. ಕ.)

೨. ರೋಹಿಣಿ ಮಳೇಗೆ ಓಣೆಲ್ಲಾ ಜ್ವಾಳ (ಬಿಜಾಪುರ - ಧಾರವಾಡ), (ಓಣೆಲ್ಲಾ ಷೊಳೆ - ಪಾಠಾಂ, ಶಿವಮೊಗ್ಗ)

೩. ರೋಹಿಣಿ ಮಳೇಲಿ ಊರೆಲ್ಲಾ ಕೆಸರು.

೪. ರೋಣಿ ಮಳೇಲಿ ಬಿತ್ತಿದ್ರೆ ರೋಗ ಇಲ್ಲ. (ಗೌರಿಬಿದನೂರು ; ಕೋಲಾರ)

೫. ಮೃಗಶಿರಾ :-

೧. ಮೃಗಶಿರಾ ಮಳೇಲಿ ಮಿಸುಗಾಡದೆ ಹೊಳೆ ಬಂತು.

೨. ಮೃಗಶಿರಾ ಮಳೆ, ಮೃಗಗಳಿಗೆ ಸೆರೆ.

೩. ಮಿಕ್ಕ ಎಳ್ಳು, ಮೃಗಶಿರೇಲಿ ಬಿತ್ತು.

೪. ಬತ್ತದ ನೆಲವನ್ನು ಮೃಗಶಿರೆಲೀ ಬಿತ್ತು.

೬. ಆದ್ರಾ :-

೧. ಅರಿದ್ರಾ ಮಳೇಗೆ ಆದೋನೇ ಗಂಡ. (ಹೊನ್ನಾವರ ಉ. ಕ.)

೨. ಆದರ ಆರಿದ್ರಾ, ಆಗದಿದ್ದರ ದರಿದ್ರ (ಧಾರವಾಡ) (ಅದ್ರೆ ಆರಿದ್ರ, ಇಲ್ಲದಿದ್ದರೆ ದರಿದ್ರ - ಪಾಠಾಂ)

೩. ಆರ್ದ್ರೆ ಹಾಂಗೆ ಮುಂದಿನ ಆರು ನಕ್ಷತ್ರ (ಉತ್ತರ ಕನ್ನಡ)

೪. ಆದ್ರೆ ಮಳೆ, ಹೂದರೆ (ಹೂ ಬಿಟ್ಟರೆ) ಬೆಳೆ.

೫. ಅದ್ದೂರಿ ಮಳೆ, ಅದ್ದೂರಿ ಬೆಳೆ.

೬. ಆದ್ರಿ ಮಳೆ ಲೋಕಕ್ಕೇ ಆರಂಭ.

೭. ಆರಿದ್ರ ಮಳೆ ಗುಡುಗಿದರೆ ಮುಂದಿನ ಆರು ಮಳೆ ಹೋಯ್ತು.

೮. ಆರಿದ್ರ ಮೃಗಶಿರೆಎ ಹಂಗಾದ್ರೆ ನಾನೂ ನಾಲ್ಕರಂತೆ ಆರಂಭಗಾರ.

೭. ಪುನರ್ವಸು :-

೧. ಪುನರ್ವಸುನಲ್ಲಿ ಪುಣ್ಯ ಇದ್ದಷ್ಟೇ ಮಳೆ.

೨. ಪುನರುಶುಡು ಪುನಲ ಪಿರಾಯೆ ದೀವರ ಬುಡುಜಿ (ತುಳು) ('ಪುನರ್ವಸುವಿನಲ್ಲಿ ಹೆಣಾ ಹೊರಗಿಡೋದಕ್ಕೂ ಬಿಡೋದಿಲ್ಲ' ಕಾರ್ಕಳ, ದ.ಕ.)

೮. ಪುಷ್ಯ :-

೧. ಪುಷ್ಯದ ಮಳೆ ಹುಸಿಯದ ಮಳೆ.

೨. ಪುಷ್ಯಡು ಪುರಿ (ತುಳು - ಪುಷ್ಯ ಮಳೆ ಹೆಚ್ಚು ಬಂದ್ರೆ ಹುಳು ಬೀಳುತ್ತೆ ಎಂದರ್ಥ. ಕಾರ್ಕಳ - ದ. ಕ.)

೯. ಆಶ್ಲೇಷಾ :-

೧. ಆಸ್ಲಿ ಮಳಿಗೆ ಅಸಲು ಬಡ್ಡೀ ಕೂಡೇ ಬರ್ತ್ತಾವ (ಧಾರವಾಡ)

೨. ಅಸ್ಲಿ ಮಳೆಗೆ ತಸ್ಲಿ (ಮೀನು) ಬೆಟ್ಟ ಏರ್ತು (ಹೊನ್ನಾಳಿ - ಶಿವಮೊಗ್ಗ) (ಅಸ್ಲಾಸಿ ಮಳೇಲಿ ಶಿಸ್ಲು ಮೀನು ಘಟ್ಟ ಹತ್ತಿತು (ಹೊನ್ನಾವರ, ಉ.ಕ.)

೩. ಆಶ್ಲೇಷ ಮಳೆ, ನಿಶ್ಯೇಷ ಕೊಳೆ.

೪. ಆಶ್ಲೇಷ ಮಳೆಗಿಂತ ಬಿಸಿಲೇ ಲೇಸು.

೫. ಅಸಲೆ ಮಳೆ ಬಿದ್ದರೆ ಭೂಮಿಯೆಲ್ಲಾ ಹಸಿರು.

೬. ಅಸಲೆ ಮಳೆ ಕೈಕೊಟ್ಟು ಮೀಸಲಾಯ್ತು ಬೆಳೆ.

೭. ಅಸಲೆ ಮಳೇಲಿ ಬಿತ್ತಿದ್ರೆ ಎಸಳು ಎಸಳು ಕಾಯಿ. (ಗೌರಿಬಿದನೂರು, ಕೋಲಾರ.)

೮. ಅಸಲೆ ಮಳೆಗೆ ನೆಲವೆಲ್ಲ ಹಸಲೆ.

೯. ಆಸಲ್ ಫಿಸಲ್ ಗಯಾ, ಕಮ್‌ಜೋರ್ ಚಡ್‌ಗಯಾ (ಉರ್ದು : ಆಶ್ಲೇಷ ಬಿದ್ದು ಹೋಯ್ತು. ಕೆಳವರ್ಗದವ್ರು (ತಮ್ಮ ಕೂಲಿ ಏರಿಸಿ) ಮೇಲೇರಿ ಬಿಟ್ರು)

೧೦. ಮಗೆ - ಮಖೆ :

೧. ಮಗೆ ಮಳೆ ಹುಯ್ದ್ರೆ ಕೇಡಲ್ಲ, ಮನೆ ಮಗ ಉಂಡ್ರೆ ಕೇಡಲ್ಲ. (ಕುಮಟಾ - ಉ. ಕ.) (ಮಗೆ ಮಳೆ ಹೂದಷ್ಟೂ ಸಾಲದು, ಮಗ ಉಂಡಷ್ಟೂ ಸಾಲದು)

೨. ಮಗಾ ಮಳಿ ಬಿದ್ದರ, ಮುಗಿಲೆ ನೀರು ಸುರುವಿದಾಂಗ.

೩. ಊದರೆ (ಹೂತರೆ) ಮಗೆ, ಓದರೆ (ಹೋದರೆ) ಹೊಗೆ.

೪. ಮಖೆ ಗುಡುಗು ಮರದ ಮೇಲೆ ಕೇಳು.

೫. ಆದರೆ ಮಗಿ, ಆಗದಿದ್ರೆ ಹೋಗಿ (ಆಗದಿದ್ರೆ ಹೋಗಿ - ಪಾಠಾಂ, ಶಿವಮೊಗ್ಗ)

೬. ಮಘೆಯ ಮಳೆ ಮೊಗೆ ಮೊಗೆದು ತುಂಬಬೇಕು.

೭. ಮಘೇ ನೀರು ಮೊಗೇಲಿಡು.

೮. ಮಘಾ - ಮಳೆ ಮಗನಿಗೂ ಬಿಡದು.

೯. ಮಗೆ ಮಳೆ ಹೊಯ್ದರೆ ಮಗೆ ಗಾತ್ರ ತೆನೆ (ಶಿವಮೊಗ್ಗ)

೧೧. ಹುಬ್ಬ - ಪೂರ್ವಾ - ಹುಬ್ಬೆ :-

೧. ಹುಬ್ಬೆ ಮಳೆ ಅಬ್ಬೆ ಹಾಲು ಕುಡಿದಂಗೆ (ಹೊನ್ನಾವರ - ಉ. ಕ.)

೨. ಉಬ್ಬೆ ಮಳೆಗೆ ಗುಬ್ಬಿ ತಲೆಯೂ ನೆನೆಯದು.

೩. ಉಬ್ಬೆ ಮಳೆ ಚೆಂದ, ತಬ್ಬಲಿ ಮಕ್ಕಳು ಚೆಂದ.

೪. ಉಬ್ಬೆ ಮಳೇಲಿ ಬಿತ್ತಿದರೆ ಹುಲ್ಲು ಕಾಳೂ ಇಲ್ಲ.

೫. ಹುಬ್ಬಿ ಹತ್ತಿದರೆ ಗುಬ್ಬಿ ಗೋಳಿಗೆಲ್ಲಾ ಸಾವು (ಧಾರವಾಡ)

೬. ಅಮ್ಮನ ಕಂಡದ ನೀರು ಮಗಕ್ಕೂ ಬುಡಾಯೆ, ಮಗನ ಕಂಡದ ನೀರು ಅಮ್ಮೆಕ್ಕು ಬುಡಾಯೆ. (ತುಳು : (ಹುಬ್ಬೆ ಮಳೆ ಸಂದರ್ಭದಲ್ಲಿ) ತಂದೆ ತನ್ನ ಹೊಲದ ನೀರನ್ನು ಮಗನಿಗೂ ಬಿಡೋದಿಲ್ಲ. ಮಗ ತನ್ನ ನೀರನ್ನು ತಂದೆಗೂ ಬಿಡೋದಿಲ್ಲ. ಕಾರ್ಕಳ - ದ. ಕ.)

೭. ಉಬ್ಬವಾನ ಉಬ್ಬಿ ಉಬ್ಬಿ ಕುರುಸಿನ ಗುಬ್ಬಶೆಟ್ಟಿ ಕಿಂದನ್ಯಾನೆ ಲೇದು. (ತೆಲುಗು : ಗೌರಿಬಿದನೂರು, ಕೋಲಾರ.) (ಅರ್ಥ - ಉಬ್ಬೆ ಮಳೆ ಹೊಯ್ಯುವಾಗ ಶೆಟ್ಟಿಯ ಹೊಟ್ಟೆಯಷ್ಟೇ ನೆನೆಯುತ್ತದೆಯೇ ವಿನಾ, ಕೆಳಗೆ ನೆನೆಯೋದೇ ಇಲ್ಲ) (ಸಾರಾಂಶಾರ್ಥ - ಉಬ್ಬೆ ಮಳೆ ಎಷ್ಟೇ ಜೋರಾಗಿ ಬಂದರೂ ಗುಬ್ಬಿ ಗುಡುಕೂಡಾ ನೆನೆಯೋದಿಲ್ಲ)

೮. ಹುಬ್ಬೆ ಮಳೆಗೆ ಗೌರಮ್ಮ ಉಬ್ಬೆ ಹೊದ್ದು ಬಂದಳು (ಶಿವಮೊಗ್ಗ)

೧೨. ಉತ್ತರಾ :-

೧. ಉತ್ತರೆ ಮಲೆಗೆ ಎತ್ತು ಬಾಯ್ಬಿಡುತ್ತಾವೆ (ಧಾರವಾಡ)

೨. ಉತ್ತರೆ ಮಳೆಗೆ ಪೈರು ಹುತ್ತ ಬೆಳದಾಂಗ ಬೆಳೀತದೆ (ಉ. ಕ.)

೩. ಅದರ ಉತ್ತರಿ ಆಗದಿದ್ದರೆ ಕತ್ತರಿ (ಧಾರವಾಡ)

೪. ಹೊನ್ನುತ್ರೆ - ಹೊಳ್ಳುತ್ರೆ (ಉ. ಕ.)

೫. ಉತ್ತರಿ ಮಳೆ ಬಂದರೆ ಕೂತಲ್ಲಿ ಕೂಳು.

೬. ಉತ್ತರೆ ಮಳೇಲಿ ಉತ್ತ ಎತ್ತು ನೀರಿಗೆ ಬಿತ್ತು.

೭. ಉತ್ತರೆ ಬೀಳದಿದ್ರೆ ಹೆತ್ತವ್ವ ತೊರೆದ್ಹಾಂಗೆ.

೮. ಉತ್ತರೆ ಮರೆತರೆ, ಹೆತ್ತಮ್ಮ ತೊರೆದರೆ, ಮುತ್ತು ಮಣ್ಣಾದರೆ, ಲೋಕ ಬೆಳಗು, ಬೈಗು ಆಗೋದು ಹ್ಯಾಗೆ?

೯. ಉತ್ತರೆಡೆ ಹೆತ್ತರೆ ಅಪುಂಡು.
(ತುಳು : ಉತ್ತರೆ ಮಳೆ ಹೊತ್ತಿಗೆ (ಬೇಸಾಯದ ಕೆಲಸವೆಲ್ಲ) ಒತ್ತರ ಆಗಿರುತ್ತೆ (ಕಾರ್ಕಳ - ದ. ಕ.)

೧೦. ಉತ್ತರ ಸೂಸ್ಕುನಿ ಎತ್ತರ ಗಂಪ (ತೆಲುಗು)
(ಉತ್ತರೆ ಮಳೆ ಆಗ್ದಿದ್ರೆ ಎತ್ಕೊಂಡು ಹೋಗು - (ಗೌರಿಬಿದನೂರು, ಕೋಲಾರ.)
೧೧. ಉತ್ತರವಾನ ರಾಕುಂಟೆ ಎತ್ತರಗಂಪ (ತೆಲುಗು) -- " --
೧೨. ಉತ್ತರಿ ಮಳೆ ಹೋದ್ರೆ ಹೆತ್ತಮ್ಮನೂ ಆಗೋಲ್ಲ (ಚಿತ್ರದುರ್ಗ)

೧೩. **ಹಸ್ತಾ :-**

೧. ಆದರ ಹಸ್ತ, ಆಗದಿದ್ರ ಹಲ್ಲುಕಿಸ್ದ (ಧಾರವಾಡ - ಬಿಜಾಪುರ)
೨. ಹಸ್ತ ಆರ್‌ಕಾಳು, ಚಿತ್ತಿ ಮೂರ್‌ಕಾಳು (ಹುನಗುಂದ - ಬಿಜಾಪುರ)
೩. ಹಸ್ತೆ ಹಣುಕ್ಬೇಕು, ಚಿತ್ತೆ ಬರೀಬೇಕು (ಹೊನ್ನಾವರ, ಉ. ಕ.)
೪. ಹಸ್ತದ ಮಳೆ ಹಂಗಾದರೆ, ಹೆತ್ತ ತಾಯಿ ಹಿಟ್ಟಿಕ್ಕೋದಿಲ್ಲ.
೫. ಹಸ್ತೆಗೆ ಆರು ಕಾಯಿ, ಚಿತ್ತೆಗೆ ಮೂರು ಕಾಯಿ.

೧೪. **ಚಿತ್ತ (ಚಿತ್ರ) :-**

೧. ಚಿತ್ತಿ ಮಳಿ ಆದಂಗೆ, ಹಿರಿ ಸೊಸಿ ನಡದಂಗೆ (ಉತ್ತರ ಕನ್ನಡ ಜಿಲ್ಲೆ)
೨. ಚಿತ್ತಿ ಮಳಿ ಚಿತ್ತಗಡಕ (ಚಿತ್ತಿ ಮಳೆ ಚಿತ್ತ ಬಂದ್ ಕಡೆ) ಬಿಜಾಪುರ.
೩. ಕುರುಡು ಚಿತ್ತಿ (ತುಮಕೂರು, ಧಾರವಾಡ, ಶಿವಮೊಗ್ಗ)
೪. ಕುಡ್ಡೀ ಮಳೆ ಬಿದ್ದಲ್ಲೇ ಬಿತ್ತು, ಎದ್ದಲ್ಲೆ ಎತ್ತು (ಧಾರವಾಡ)
೫ ಹುಳುಕು ಚಿತ್ತಿ (ಹೊನ್ನಾವರ - ಉ. ಕ.)
೬. ಚಿತ್ತಾ ಮಳೆ, ವಿಚಿತ್ರದ ಬೆಳೆ.
೭. ಕುರುಡು ಚಿತ್ತ ಮಳೆ, ಎರಚಿದತ್ತ ಬೆಳೆ.
೮. ಚಿತ್ತಿ ಮಳೆಗೆ ಕುರುಡು, ದಿಗಿಲು ; ಹಗಲು ಬರುತ್ತೆ, ರಾತ್ರಿ ಬರಲ್ಲ.
೯. ಚಿತ್ತ ವಾನುಲೋ ಚಿನಕು ನೇಲ ಪಡೆಲೇದು (ಗೌರಿಬಿದನೂರು, ಕೋಲಾರ)
೧೦. ಚಿತ್ತಿ ಮಳೆಗೆ ಗಳೆ ಹೊಡೆದ ಒಂದು ಎತ್ತಿನ ಕೊಂಬು ತೋಯಿತು. ಇನ್ನೊಂದರ ಕೊಂಬು ತೋಯಲಿಲ್ಲ. (ಚಿತ್ರದುರ್ಗ)
೧೧. ಸ್ವಾತಿ ಮಳೆಗೆ ಎತ್ತಿನ ಒಂದು ಕುಂಡಿ ತೋದರೆ ಇನ್ನೊಂದು ಕುಂಡಿ ತೋಯೂದಿಲ್ಲ. (ಧಾರವಾಡ)

೧೫. ಸ್ವಾತಿ :-

೧. ಸ್ವಾತಿ ಮಳೆಗೆ ತ್ಯಾಪೆ ಹಾಕೋದು ಹೊನ್ನಾನರ - ಉ. ಕ.

೨. ಸ್ವಾತಿ ಮಳೆ ಹೇತೇನಂದ್ರೂ ಬಿಡದು (ಧಾರವಾಡ, ಬಿಜಾಪುರ)

೩. ಸ್ವಾತಿ ಸುರ್‍ಯಾಕ ಹತ್ತಿದರ ಹೇತಾಡಿದರೂ ಬಿಡೊದಿಲ್ಲ (ಧಾರವಾಡ)

೪. ಸ್ವಾತಿ ಮಳಿ ಆದಮ್ಯಾಲ ಯಾತರ ಮಳಿ? (ಬಿಜಾಪುರ, ಶಿವಮೊಗ್ಗ)

೫. ಸ್ವಾತಿಗು ಮುತ್ತುವು ಲೇಗುನು. (ತುಳು : ಸ್ವಾತಿ ಮಳೆಗೆ ಮುತ್ತು ಬೆಳೀತದೆ ; ದ. ಕ.)

೬. ಸ್ವಾತಿ ಮಳಿ ಆದಸ್ಯಾಕೆ ಆತೇನು?

೭. ಸ್ವಾತಿ ಮುತ್ತಿನ ಮಳೆ.

೮. ಸ್ವಾತಿ ಮಳೇಲಿ ಕಾಸಿಕೊಂದಿ ಕುರಿ.

೯. ಸ್ವಾತಿ ಮಳೇಲಿ ಸಾಲೊಳಗೆ ನೀರು ಹರಿದ್ರೂ ಬಿತ್ತುವುದು ಬೇಡ.

೧೦. ಸ್ವಾತಿನು ಪೇರಿಗು ಬೆರ್ಪು ಪಾಡಲೆ. (ತುಳು : ಹಾಲಿಗೆ ಸ್ವಾತಿಯ ನೀರನ್ನೇ ಹೆಪ್ಪಿಗೆ ಹಾಕು (ಅಂದರೆ ಅದೇ ಸಾಕಾಗುತ್ತದೆ. ಬೇರೆ ಮಜ್ಜಿಗೆಯ ಅಗತ್ಯವಿಲ್ಲ ಎಂದು ಅರ್ಥ) ಕಾರ್ಕಳ ದ. ಕ. ಜಿಲ್ಲೆ)

೧೧. ಸ್ವಾತಿಡ್ ಬಿತ್ತ್ ಬೂರುಂಡ ಶಾಶ್ವತೊ. (ತುಳು : ಸ್ವಾತಿಯಲ್ಲಿ ಬಿತ್ತು ಹಾಕಿದರೆ ಬೆಳೆ ಖಂಡಿತ)

೧೬. ವಿಶಾಖಾ :-

೧. ವಿಶಾಖಾ ಮಳೆ ಪಿಶಾಚಿ ಹಿಡಿದ ಹಾಗೆ.

೨. 'ವಿಶಾಖಾ' ಮಳೆ 'ಆಶಿಷಿ' ಅಂದ್ರೂ ಬಿಡದು.

೩. ವಿಷಾಕುವಾನುವಸ್ತೇ ವಿಷವುಲಗಲು ಪೊತಾಯಿ (ಗೌರಿಬಿದನೂರು)

೧೭. ಅನುರಾಧಾ :-

೧. ಅನುರಾಧಾ ಮಳೆಗೆ ಆನೆ ಮೈ ನಡುಗ್ತು.

೨. ಅನುರಾಧ ಬಿತ್ತು, ಮನೋರೋಗ ಹೋಯ್ತು.

೩. ಅನುರಾಧ ಬಂದ್ರೆ ನಮ್ಮ ರಾಗಿ ನಮ್ಮದು.

೧೮. ಮಳೆ ಕುರಿತ ಸಾಮಾನ್ಯ ಗಾದೆಗಳು :-

೧. (ಕಾಮನ ಬಿಲ್ಲು) ಅರೆ ಮೇಲೆ ಕಟ್ಟಿದ್ರೆ ಕೆರೆ, ಕಡ್ಲಾಗ ಕಟ್ಟಿದ್ರು ಮದ್ಲು (ಹೊನ್ನಾವರ, ಉತ್ತರ ಕನ್ನಡ.)

೨. ಆದದ್ದು ಆದ್ರಿ ಮಳೇಲಿ ಚೆಲ್ಲು, ಮಿಕ್ಕಿದ್ದು ಮಿಕ್ಸಿರಿ (ಮೃಗಶಿರಾ) ಮಳೇಲಿ ಚೆಲ್ಲು (ಶಿವಮೊಗ್ಗ).

೩. ಅತ್ತೆ (ಆರ್ದ್ರಾ) ಮಳೆ ಹೂದು, ಚಿತ್ತಿ ಬಿಸಿಲು ಕಾದು, ಸ್ವಾತಿ ಜಡಿ ಹಿಡಿದರೆ ಮುತ್ತಿನಂಥ ಆರಂಭ.

೪. ಅಶ್ವಿನಿ ಮಳೆ ಆಗದೆ ಹೋಗಲ್ಲ, ಆರ್ದ್ರೆ ಮಳೆ ಗುಡುಗದೆ ಹೋಗಲ್ಲ.

೫. ಆರಿದ್ರ ಘರ್ಜಿಸಲು ಆಷಾಢದಲ್ಲಿ ಮಳೆ ಬರಲು ಲೇಸಲ್ಲ...

೬. ಆಷಾಢ ಮಳಿ ಬೀಸಿ ಬೀಸಿ ಬಡಿವಾಗ ಹೇಸಿ ನನ ಜೀವ ಹೆಣ್ಣಾಗ್ಯಾಕ ಹುಟ್ಟಲಿಲ್ಲ? (ಧಾರವಾಡ)

೭. ಆರಂಭ ಮಳೆ ಆಗದಿದ್ರೆ ಕಷ್ಟ, ಅಧಿಕಾರ ಕೈತಪ್ಪಿದ್ರೆ ಕಷ್ಟ.

೮. ಆಟೀಡು ಅಟ್ಟ ಬೊಲ್ಲಿನು, ಸೋನಡು ಸೊಂಟ ಬಲ್ಲಿನು. (ತುಳು : 'ಆಷಾಢ್ಯದಲ್ಲಿ ಅಟ್ಟ ಅಟ್ಟ ಮುರಿಯುತ್ತೆ (ಹಪ್ಪಳ ಸೆಂಡಿಗೆ ಹೇರಿ) ಶ್ರಾವಣದಲ್ಲಿ ಸೊಂಟ ಮುರಿಯುತ್ತೆ' (ಕಾರ್ಕಳ, ದ. ಕ.)

೯. ಆಟ ಆನೆಡು ಪೋವುನು ಸೋನ ಕುದುರೆಯಿತ್ತು ಪೋವನು. (ತುಳು : ಆಷಾಢ ಆನೇಮೇಲೆ ಹೋಗುತ್ತೆ (ನಿಧಾನವಾಗಿ) ಶ್ರಾವಣ ಕುದುರೆ ಮೇಲೆ (ವೇಗವಾಗಿ) ಹೋಗುತ್ತೆ).

೧೦. ಉತ್ತರಿಕಾರ್ತಿ ಅತ್ತಳ ಕೊತ್ತಳ, ಹಸ್ತಕಾರ್ತಿ ಅಸ್ತವ್ಯಸ್ತ.

೧೧. ಎರಿ, ಮಳಿಯಾಗದಿದ್ರ ಬಾಯಿತೆರಿ.

೧೨. ಚಿತ್ತದಲ್ಲಿ ಭತ್ತ ಹಸ್ತದಲ್ಲಿ ಹೊಸ್ಸು (ಹೊನ್ನಾವರ, ಉ.ಕ.)

೧೩. ತಿಂಗಳು (ಚಂದ್ರ) ಗುಡಿಕಟ್ಟಿದ್ರೆ ತಿಂಗಳು ಮಳೆ ಇಲ್ಲ.

೧೪. ಪೂರ್ವಾಷಾಢ ಉತ್ತರಾಷಾಢ ಬೇಡವೇ ಬೇಡ.

೧೫. ಭರಣಿದು ಬರೆ ಪಾಡ್‌ದು ಬಿತ್ತಂಡ ಪೋವದು. ಕರ್ತಿಗೆಡು ಗೊಬ್ಬರ ಪಾಂಡಲ ಕೊರ್ಪ್ (ತುಳು : ಭರಣಿ ಮಲೆಗೆ ಬರೆ ಹಾಕಿದಂತೆ (ಎಲ್ಲೆಂದರಲ್ಲಿ) ಬಿತ್ತಿದರೂ (ಬೆಳೆ) ಆಗ್ತದೆ, ಕೃತ್ತಿಕಾದಲ್ಲಿ ಗೊಬ್ಬರ ಹಾಕಿದ್ರೂ ಆಗಲ್ಲ) (ಕಾರ್ಕಳ, ದ. ಕ.)

೧೬. ಮೃಗಶಿರ ಮಳೆ ಮಿಂಚಬಾರದು, ಆದ್ರಿ ಮಳೆ ಗದ್ದರಿಸಬಾರದು.

೧೭. ಮಳೆ ನಿಂತ್ರೂ ಮರದ ಹನಕ್ಲು ನಿಲ್ಲಲ್ಲ. (ಶಿವಮೊಗ್ಗಾ)

೧೮. ಮಳಿ ಆದ್ರೆ ಕೇಡಲ್ಲ, ಮಗ ಉಂಡ್ರೆ ಕೇಡಲ್ಲ.

೧೯. ಮಳೆ ನೀರು ಬಿಟ್ಟು ಮಂಜಿನ ನೀರಿಗೆ ಕೈಯೊಡ್ಡಿದಂತೆ. (ಉ. ಕ.)

೨೦. ಮಳೆ ಬರುವ ಮೊದಲು ಮಾಳಿಗೆ ನೋಡಬೇಕು, ಹುಲ್ಲು ಬರುವ ಮೊದಲು ಎಡೆ ಹೊಡೆಯಬೇಕು. (ಹೊನ್ನಾವರ, ಉ. ಕ.)

೨೧. ಮಕ್ಕಳು ಹುಟ್ಟಿದರೆ ಕೇಡಲ್ಲ, ಮಳಿ ಬಂದರ ಕೇಡಲ್ಲ. (ಧಾರವಾಡ).

೨೨. ಸೂರ್ಯ ಗುಡಿ ಕಟ್ಟಿದ್ರೆ ಸೂರೆಲ್ಲ ಮಳೆ.

೨೩. ಮಕ್ಕಳು ನೆನೆದ್ರೆ ಒಕ್ಕಲು ಬದುಕುತ್ತೆ.

೨೪. ಪಿರಿಪಿಶಾ ಚಿಕ್ಕ ಪಿಶಾ (?) ಮಲ್ಲಾದಡವರಿಗೆ ಮಾತು ಕೊಟ್ಟ ಮಳಿ.

೨೫. ಹಸ್ತ ಹಣಿಕಿ, ಚಿತ್ತ ಬೆರಸಿ, ಸ್ವಾತಿ ಮಳಿ ಸುರಿಮಳೆಯಾದ್ರೆ 'ಎತ್ತು ಕೊಟ್ಟು ಎಮ್ಮಿ ತಾ' ಅಂದಳು.

೨೬. ಹಸ್ತದ ಮಳೇಲಿ ಆರಂಭ ಬೇಡ, ಚಿತ್ತದ ಮಳೇಲಿ ಹೋರಾಟ ಬೇಡ.

೨೭. ರೇವತಿ ಬೇಕು, ಅಶ್ವಿನಿ ಬೇಡ.

೨೮. ಅಸಲಿಲ್ಲದೆ ಬಡ್ಡಿ ಇಲ್ಲ, ಮಳೆ ಇಲ್ಲದೆ ಚಳಿ ಇಲ್ಲ.

೨೯. ಅರಿಯದ ಮಳೆ ಬಂದು ಅರಿವೆ ನೆನೆಸಿತು.

೩೦. ಅರೇಪುರಕ್ಕೆ ಆನೆಕಲ್ಲು ಮಳೆ, ಬೇಗೂರಿಗೆ ಬಟ್ಟೆ ನೆನೆಯೋ ಮಳೆ, ಕೋಟೆ ಕಡೆಗೆ ಮಳೆಯೇ ಇಲ್ಲ.

೩೧. ಆರುಗಾಲ ಉತ್ತರೂ ಮಳೆ ಇಲ್ಲದೆ ಬೆಳೆ ಇಲ್ಲ.

೩೨. ಆದರೆ ಮಳೆಗಾಲ, ಭೂಮಿಯ ಬೆಳೆ.

೩೩. ಆಕಾಶದ ಮಳೆ, ಭೂಮಿಯ ಬೆಳೆ.

೩೪. ಆದಷ್ಟೇ ಆರಂಭ, ಹೋದಷ್ಟೇ ಮಳೆಗಾಲ.

೩೫. ಮಕರದ ಮಳೆ ಹೋದರೆ, ಮಕ್ಕಳ ಬಾಯಿಗೆ ಮಣ್ಣು.

೩೬. ಮಂಜು ಮಳೆಯಲ್ಲ, ಮರಳು ಸಕ್ಕರೆಯಲ್ಲ, ಎಂದಿದ್ರೂ ಸೂಳೆ ತಿರವಿಲ್ಲ.

೩೭. ನಡುಗಿದರೆ ಗುಡುಗು ಕೇಳೀತೆ?

೩೮. ಧನಿಕ ಅಂತ ಹನಿ ಬೀಳೋದು ತಪ್ಪೀತೆ?

೩೯. ದಿನಾ ಹೋಗಿ ಮಳೆಗಾಲವೆ?

೪೦. ತೆಂಕಣ ಗಾಳಿ ಮಂಕು ಮಳೆ ಬರಿಸಿತು.

೪೧. ಗುಡಗುಡ ಅಂದ್ರೆ ಗುಡ್ಡದ ಗಾತ್ರ ಹನಿ ಬಿದ್ದೀತೆ?

೪೨. ಕ್ಯಾಟೆ ಮೂಲೇಲಿ ಮಿಂಚಿದ್ರೆ, ದಾಟ್ಕಂಡಾದ್ರು ಮಳೆ ಬರ್‍ತದೆ.

೪೩. ಕಾಡಿಗೆ ಮಳೆ, ನಾಡಿಗೆ ಬೆಳೆ.

೪೪. ಉತ್ತು ಬಿತ್ತಿದ ಭತ್ತವಾದರೂ ಮಳೆ ಇಲ್ಲದೆ ಬೆಳೆಯದು.

೪೫. ಮಳೆ ಇಲ್ಲದ ಪೈರು, ಮಾತೆ ಇಲ್ಲದ ಕೂಸು ಸಮ.

೪೬. ಸಂಜೆಗೆ ಬಂದ ಮಳೆ, ಸಂಜೆಗೆ ಬಂದ ನೆಂಟ (ರಾತ್ರಿ ಎಲ್ಲಾ ಇರ್ತದೆ ಎಂಬರ್ಥ)

೪೭. ಮಳೆಗಾಲದ ಬಿಸಿಲನ್ನು ನೆಗೆಗಾರನ ಮಾತನ್ನು ನಂಬಬಾರದು.

೪೮. ಮಳೆ ಬಿದ್ರೆ ಸೊಬಗು, ಇಲ್ಲದಿದ್ರೆ ಕೊರಗು.

೪೯. ಮಳೆ ಹನಿ ಬಿಟ್ಟರೂ ಮರದ ಹನಿ ಬಿಡದು. (ಪಾಠಾಂ : ಮರ ನಿಂತ್ರೂ ಮರದ ಹನಿ ನಿಲ್ಲಲ್ಲ)

೫೦. ಮಳೆ ಹನಿಗಿಂತ, ಮರದ ಹನಿ ಘನ.

೫೧. ಮೊದಲ ಮಳೆ ಚೆಂದ, ಮೊದಲ ಯೌವನ ಚೆಂದ.

೫೨. ಯೋಗವಾಗಿದ್ರೆ ಮೇಘವೆಲ್ಲ ಮಳೆ.

೫೩. ರಾತ್ರಿಯ ಮಳೆ ಸಹ, ಖಾತ್ರಿಯ ಮಾಲು ಹಸ.

೫೪. ಸುರಿಮಳೆ ಅರಗಳಿಗೆ, ಸೋನೆ ಮಳೆ ದಿನವೆಲ್ಲ.

೫೫. ಹಡಗು ಗಾಳಿಗೆ ಲೇಸು, ಮಳೆ ಗುಡುಗಿಗೆ ಲೇಸು.

೫೬. ಹದಕ್ಸರಿಯಾಗಿ ಮಳೆ ಆಗ್ತಿದ್ರೆ, ರೈತ ತನ್ನ ಹಜಾರಾನೂ ಉತ್ತಿ ಬಿಡುತ್ತಾನೆ.

೫೭. ಹುಯ್ಯದ ಮಳೆಗೆ ಅಯ್ಯನ ತಲೆ ಅಲ್ಲಾಡಿಸು (ತು)?

೫೮. ಬೇಡಿದಾಗ ಮಳಿ ಅದರ ಹೊಳೆ ಎಲ್ಲ ಹೆಂಡ (ಧಾರವಾಡ)

೫೯. ಗೌರಿ ಹೊತ್ತಿಗೆ ಗಡಿಗೆ ಮುಳುಗೋ ಮಳೆ.

೬೦. ಕಾಲವಲ್ಲದ ಕಾಲದಲ್ಲಿ ಮೂಲದ ಮಳೆ ಬಂತು.

೬೧. ಮಳೆಗೊಂದು ಗಾದೆ, ಬೆಳೆಗೊಂದು ಆಚರಣೆ.

(೨೮ ರಿಂದ ೫೭ರ ವರೆಗಿನ ಗಾದೆಗಳಿಗೆ ಆಕರ : ಡಾ. ಹಂಪನಾ ಅವರ ಆಕಾಶ ಜಾನಪದ)

* * * * *

ಮಳೆ ಕುರಿತ ಜನಪದ ಗೀತೆಗಳು

ಜೋಕುಮಾರನ ಹಾಡು

(ಪುರಾಣ ಕಥೆಗಳಲ್ಲಿ ಜೋಕುಮಾರನು ಜೋಕಮುನಿಯ ಮಗನೆಂದು ಒಂದು ಕಥೆಯು ಬರುವುದು. ಆದರೆ ಜಾನಪದದಲ್ಲಿ ಬರುವ ಕಥೆಯು ಬೇರೆ ರೂಪಾಂತರದಲ್ಲಿ ಕಾಣುವುದು. ಇವನನ್ನು ಹೊತ್ತುಕೊಂಡು ತಿರುಗುವ ಹೆಣ್ಣುಮಕ್ಕಳು ಅವನ ಕಥೆಯನ್ನೇ ಹಾಡುವುದು.)

ಅಡ್ಡಡ್ಡ ಮಳೆ ಬಡಿದ, ದೊಡ್ಡೊಡ್ಡ ಕೆರೆತುಂಬಿ
ಗುಡ್ಡಗಳೆಲ್ಲ ಹೈನಾಗಿ| ಜೋಕುಮಾರ|| ಗೌಡರ
ಸೆಡ್ಡಿಯ ಮ್ಯಾಲೆ ಸಿರಿಬಂದು|| ಜೋಕುಮಾರ ||೧||

ಹಾಸ್ಹಾಸಿ ಮಳೆಬಡಿದು, ಬೀಸ್ಬೀಸಿ ಕೆರೆತುಂಬಿ
ಬಾಸಿಂಗದಂತ ತೆನಿಬಾಗಿ| ಗೌಡರ
ರಾಸಿಯ ಮ್ಯಾಲೆ ಸಿರಿ ಬಂದ ||೨||

ಕರುಣುಳ್ಳ ಕೋಮರಾಮ್ನ ಕೆರೆನೋಡ ಹೋದಾರ
ಕರದು ಕಾರ್ಗಲ ಮಳೆ ಬಂದು| ಗೌಡರು
ಕರೆದು ಹಚ್ಚಡ ಹೊಚ್ಚ್ಯಾರ ||೩||

ಕೆಂಚ ನಮ ಕೊಮಾರಾ, ಬೆಂಚೀಯ ನೋಡಹ್ವಾದ
ಮಿಂಚ್ಯಾವ ಕಾರಮಳೇಬಂದು| ಗೌಡರು
ಕೆಂಪು ಹಚ್ಚಡ ಹೊಚ್ಚ್ಯಾರ ||೪||

ಹುಟ್ಟಿದೇಳು ದಿವಸಕ ಪಟ್ಣಾವ ತಿರುಗ್ಯಾನ
ದಿಟ್ನಾ ದೇವಿನಿನ ಮಗನ| ಕೊಮರಾಗ
ಕೊಟ್ರವ್ವೇಳು ದಿನಗಳ ||೫||

ಪುಂಡಿಯ ಪಲ್ಲೆನಂರು ಕೊಂಡ ತಾನುಣಲಿಲ್ಲ
ದಂಡನಾಳವನ ಬಂಕ್ಯಾಗ| ನಮದೇವಿ
ಹೊಂಬಳಿಸರವ ಬಗಿಸ್ಯಾಳ ||೬||

ಚೊಕ್ಕೋಟಿ ರಸಪಲ್ಲಿ, ಇಕ್ಕೊಂಡು ಉಣಲಿಲ್ಲ
ದಿಕ್ಕನಾಳವ್ನ ಬಂಕ್ಯಾಗ| ನಮದೇವಿ
ಚೊಕ್ಕ ಮುತ್ತಿನ ಸರ ಬಗಿಸೆ ||೭||

ಅರಕೊಂಬ ಅರಿಮಿಣವು, ದರಬಟ್ಲ ಒಳ್ಳೆಣ್ಣೆ
ನರನಮ್ಮ ದೇವಿ ಕುಲಿಹೊಕ್ಕು| ಎರಕೊಂಡ
ತೆರೆ ಬಂದನೀರು ಬಾಗಿಲಕ ||೮||

ಬಾನ ಹುಟ್ಟಿದನಂತ ಬನಕ ತೊಟ್ಟಿಲ ಕಟ್ಟಿ
'ಬಾಗಿಲನ್ನೇರು' ನೆರದಾರ| ಹಾಡುತಲಿ
ಕೋಲೆನ್ನು ಜನಕ ಜನಕ ಜಯಜಯವೂ ||೯||

ಕಬ್ಬುಳ್ಳ ತ್ಯಾಟ್ಯಾಗು ಇಟ್ಟನ್ನಿ ವರದ್ಯಾಂಗ
ಇಬ್ಬರು ತೂಗಲು ಮಲಗಾನ| ನಮದೇವಿ
ಹೆಬ್ಬೂಲಿ ಮಗನ ಹಡೆದಾಳ ||೧೦||

ಹಾರೊರ ಕೇರ್ಯಾಗ ಹಾರಿ ಚೆಂಡಾಡ್ಯಾನ
ನಾರಿ ನಿನಮಗ ಕೊಮರಯ್ಯ| ಚಂಡಾಡಿ
ಊರ ಭೂಮೆಲ್ಲ ಬೆಳೆಬಂದ ||೧೧||

ಒಕ್ಕಲಗೇರಿ ತಾ ಸೇರಿ, ಹೊಕ್ಕು ಚೆಂಡಾಡ್ಯಾನ
ಅಕ್ಕನ ಮಗನು ಕೊಮರಯ್ಯ| ಆಡಿದರ
ಅಕ್ಕಿನಾಡೆಲ್ಲ ಬೆಳೆದಾವ ||೧೨||

ಹಾಲ್ಬೇಡಿ ಹಲುಬ್ಯಾನ ಕೆನೆಬೇಡಿ ಕುಣಿದಾನ
ಮೊಸರ ಬೇಡಿ ಕೆಸರ ತುಳಿದಾನ| ಕೊಮರಾನ
ಕುಸುರಾದ ಗೆಜ್ಜ ಕೆಸರಾಗ್ಯೊ ||೧೩||

ಸಂದೀಯ ಮನೆಯನ್ನ ಗೋಧೀಯ ಮನೆಯನ್ನ
ಗೊಂಜಾಳದನ್ನ ಕೆಸರನ್ನ| ನಮಕೊಮರ
ಸಂದೀಯ ಹೊಕ್ಕನು ನಡುಗೇರಿ ||೧೪||

ಹಾದೀಯ ಮನೆಯನ್ನ ಬೀದಿಯ ಮನೆಯನ್ನ
ಬಾಜರದನ್ನ ಮೊಸನ್ನ ನಮಕೊಮರ
ಗೌಳೇರೋಣಿ ಹೊಕ್ಕಾನ ||೧೫||

ಹಳ್ಳಕ್ಕ ತಾಹೋಗಿ, ಸಣ್ಣಾವ್ನ ಇಟ್ಯಾನ
ಕನ್ನುಡಿ ತೆಗೆದು ಮೊಕನೋಡೊ| ಕೊಮರಾಮ
ಕಣ್ಣುಮೂಗಿ ಲೆಕರ ಚೆಲುವ ||೧೬||

ಅಳಕೂತ ಬಳಕೂತ ಬಂದಾಳ ಗುಳಕವ್ವ
ಬಂದು ನಿಂತಾಳ ಅಗಸ್ಯಾಗ| ಗೌಡರು
ತಂದು ಇಳಿಸ್ಯಾರ ಸೆಳಿಮಂಚ ||೧೭||

ಕೊಮರಾಮ ಬರ್ತಾನಂತ, ಕೋಣೇಯ ಸಾರೀಸಿ
ಜಣಚಕ್ಕಲಗಿತ್ತಿ ಚದರೀಯ| ಮನಿಯಾ
ಒಂದಾರ ಜ್ಯಾವ ಇರಲಿಲ್ಲ ||೧೮||

ಹೋಗತ ಹೊನ್ನ ಮುರಿದ, ಬರತ ಬನ್ನಿಯ ಮುರಿದ
ಕಂಡಕಂಡಲ್ಲಿ ಕರಿಬೇವು| ಮುಡುವಂತ
ಪುಂಡನ್ನ ದೇವಿ ಹಡೆದಾಳ ||೧೯||

ಅಕ್ಕ ಹಡದಾಳಂತ ಏನೊಯ್ದೆ ಬಸವಯ್ಯ
ಮುತ್ತಿನ ಚೆಂಡ ಕಾರ್ಮುಗಿಲ| ಸುರಿಮಳೆಯ
ಅರತೀಲೊಯ್ದೆ ಹರಳೆಲೆಯ ||೨೦||

ಬೆಣ್ಣೀಯ ತಾ ಮುದ್ದಿ, ಕನ್ಯುಳ್ಳ ಕುಮಾರಾಗ
ಹೊನ್ನ ಮಾಳಿಗೆಯಮನೆಯವ್ವ| ಕೆನೆಮೊಸರ
ಬಿನ್ನಾಯ ಹೇಳ ಕೊಮರಾಗ ||೨೧||

ಹಾಲ ತಾ ಮುಗಿತುಂಬಿ, ಬಾಲನಮ್ಮ ಕೊಮರಾಗ
ಮೇಲಮಾಳಿಗೆ ಮನೆಯವ್ವ ನೀಕೊಟ್ರ
ಮೇಲಾಗಿ ಬೆಳಿಲಿ ನಿಂಭೂಮಿ ||೨೨||

ಅಳವುತ ಸಿರಿತಾನು, ಬಳಲುತಲಿ ಬಂದಾಳು
ಅಳಕಾದಂಬಲಿ ತಡೆದಾವು| ನಮಕೊಮರ
ಕಳೆದೇಳು ದಿನಕ ಮರಣವ್ವ ||೨೩||

ಹುಟ್ಟೀದಾ ಏಳ್ದಿನಕ, ಪಟ್ಟಾವ ತಿರಗ್ಯಾನ
ದಿಟ್ಟಾದೇವಿ ನಿನಮಗನ| ಕೊಮರಾಗ
ಬರೆದಾಳ ಸೆಟವಿ ಏಳ್ದೀನ ||೨೪||

ಪುಂಡಾನ ಪುಂಡಾಟ್ಕಿ, ಹಿಂಡಮಂದಿ ಕೂಡ್ಯಾರ
ಕಂಡಲ್ಲಿ ಕಲ್ಲಿಗೆ ಬಡಿದಾರ| ರಾತ್ರ್ಯಾಗ
ಅಗಸರ ಕಲ್ಯಾಗ ತುರಿಕ್ಯಾರ ||೨೫||

ಜಂಗಮ ನಾನಲ್ಲ, ಜೋಗಯ್ಯ ನಾನಲ್ಲ
ತಿಂಗಳ್ಗೆ ಬರುವ ತಿರುಕಲ್ಲ| ತಾಯವ್ವ
ತುಂಬಿ ಮೊರಚೋಳ ನೀಡವ್ವ ||೨೬||

ಕಲ್ಲಳಿಗಿ ಕಬ್ಬಿಣದ, ಮೆಟ್ಟತ್ತಿ ಏರ್‍ಯಾಳ
ಬಳಕುತ ಬಳತ ತೆಗೆದಾಳ| ತಾಯವ್ವ
ಬಿಳಿಯೆಳ್ಳು ತುಂಬಿ ನೀಡ್ಯಾಳ ||೨೭||

ಜಯ ಜಯ ಕೊಮರಾಗ, ಜಯ ಜಯ ಹಾಡೀರೆ
ಜಯ ಜಯ ಭೂಮಿ ಬೆಳಸೀಗೆ| ಹಡದವ್ವ
ಜಯ ಜಯ ಇರಲಿ ಜಗದಾಗ ||೨೮||

ಜೋಕುಮಾರನು ದಿಟ್ಟಾದೇವಿಯ ಮಗನು ಹುಟ್ಟಿದ ಏಳು ದಿನಗಳಲ್ಲಿ ಪಟಿಂಗನಾಗಿ ಊರೆಲ್ಲ ಅಳುವಾಡಿ ಹಳ್ಳಗಳಲ್ಲಿರುವ ಅಗಸರ ಹುಡಿಗಿಯರಿಗೆ ಬೆನ್ನು ಹತ್ತಲು ಇವನ ಪುಂಡಾಟಕ್ಕೆ ಊರು ಬೇಸತ್ತ, ಹಿಂಡುಗಟ್ಟಿ ಕೂಡಿ, ಕಂಡ ಕಂಡಲ್ಲಿ ಕಲ್ಲಿಗೆ ಬಡಿಮ ರಾತ್ರಿಯಲ್ಲಿ ಅಗಸರ ಕಲ್ಲ ಬುಡದಲ್ಲಿಟ್ಟರೆಂದು ಹಾಡಿನಲ್ಲಿ ಬಂದಿದೆ. 'ಜೋಕುಮಾರ'ನ ತಲೆಯನ್ನು ಹೊಡೆಯುವಾಗ ಅವನು ಉಂಡದ್ದು ಅಂಬಲಿಯಾಗಿ ಸೂರಾಡಲು ಭೂಮಿ ಭೂಮೆಲ್ಲ ಬೆಳೆ ಬಂದಿತಂತೆ ; ಕೋಲ್ಮಿಂಚು ಕಾರ್ಮುಗಿಲೆಯು ಸುರಿದು ಗುಡ್ಡಗಳೇ ಹೈನಾದಂತೆ ; ಒಕ್ಕಲಿಗನ ಸೆಡ್ಡೆಯ ಮೇಲೆ ಸಿರಿಬರಲು ಒಕ್ಕಲಿಗನು ಜೋಕುಮಾರನನ್ನು ಹೇಗೆ ಮೆರೆಯಬೇಕು? ಅಲ್ಲದೆ, ಉಣ್ಣದೆ, ಉಡದೆ ತಲೆ ಹೊಡೆಸಿಕೊಂಡು ಹೋದ ಜೋಕುಮಾರನು ಶಿವನ ಮುಂದೆ ಲೋಕದ ದುಃಖದ ಕಥೆಯನ್ನು ಹೇಳಿದನಂತೆ.

(ಆಕರ : ಡಾ. ಬಿ.ಎಸ್. ಗದ್ದಗಿಮಠ 'ಕನ್ನಡ ಜಾನಪದ ಗೀತೆಗಳು'. ಪುಟ ೧೫೭ - ೧೫೮.)

ಮಳೆರಾಜ

ಅಂಬಕೊಡುವವನೆ ಗೊಂಬೆ ಹಚ್ಚಡದವನೆ
ರಂಬೆ ತೊಡೆ ಮೇಲಿರುವನೆ| ಮಳೆದೇವ
ಅಂಬರದಿಂದ ಕರುಣಿಸೋ ||೧||

ಗುಡುಗುಡು ಹುಟ್ಟೀತು ನಡು ಬಾನ ಮಿಂಚಿತು
ಮೂಡಾದ್ರಿ ಅಂಬು ದಂಡೀನ ಕುದುರೆ! ಮೇಲೆ
ಚಂಡಾಡಿ ಸುರಿಯೋ ಮಳೆದೇವ ||೨||

ಸ್ವಾತಿಯ ಮಳೆ ಹುಯ್ದು ಸೀತೆ ಶೆರೆ ತುಂಬಿ
ಜೋಡಾಡತೈತೆ ನಮ್ಮೂರು ಕೆರೆ| ಮೀನು
ಆಡಾಡಿ ನೋಡಿ ನಗತಯತ ||೩||

ಹೊಳೆಯ ಆಚೇನ ತಂಗಿ ಮಳೆಯ ಸುದ್ದಿ ಹೇಳ
ಹೊಳಿ ಭಾಳ ಅಕ್ಕ ಮಳಿ ಭಾಳ ಈ ವರುಷ
ಬಿಳಿ ಮುತ್ತಿನಂತಹ ಬಿಳಿಜೋಳ ||೪||

ಸ್ವಾತಿಯ ಮಳೆಯಾಗಿ ಭೂತಾಳ ಹಸಿಯಾಗಿ
ಪಾತಾಳ ಎಲ್ಲ ತುಳಿಕ್ಯಾವು| ಭೂಮ್ಯಾಲ
ಫಲವೆದ್ದು ಕೈಯ ಮುಗಿದಾವು ||೫||

ಮಳೆಯಪ್ಪ ಮಳೆರಾಜ ಕರೆಯುತಾರೋ ನಿನ್ನ
ಮೊದಲು ಕೂರಿಗೆಯ ರೈತರೊ| ಹೊಲದಾಗ
ಬೆಳೆ ಎದ್ದು ಕೈಯ ಮುಗಿದಾವ ||೬||

ಬಿತ್ತಿ ಬಂದಣ್ಣ ಮುತ್ತಿನ ಕಂಬ ಸೇರಿ
ಬಿತ್ತಿ ಬಂದ ಶಿವನೆ ಮಳೆಯಿಲ್ಲ| ಅಂದಾಗ
ಮುತ್ತಿನ ಮಂಜು ಹರಿದಾವ ||೭||

ಕಂಚು ಮಿಂಚಿತು ಕಾಳಸ್ತ್ರ ಗುಡುಗೀತು
ಶಿವಗಂಗ್ಯಾಗಿಂದು ಹನಿ ಬಿದ್ದು| ಪರ್ವತದ
ಗಿರಿ ಮ್ಯಾಲ ಕೋಡಿ ಹರಿದೀತ ||೮||

ಮೂಡಲ ಸೀಮೆಗೆ ಹೋಗಿ ಬಾರೋ ಮಳೆರಾಯ
ಕಗ್ಗಲ್ಲ ನನ್ನ ತವರೂರಿಗೆ| ಹೋಗಿ
ಜಗ್ಗಿಸಿ ಹುಯ್ಯೋ ಮಳೆರಾಯ ||೯||

ಪಡವಲ ಸೀಮೆಗೆ ಬಡ ಬಡ ಹೋಗಯ್ಯ
ಪಡವಲಕ ನನ್ನ ಪಡೆದವರ| ಮಳೆರಾಯ
ಪಡೆದು ಬಂದೇವ ಪುಣ್ಯಾವ ||೧೦||

ತೆಂಕಣ ಸೀಮೆಯಲಿ ತಂಗಿಯ ಮನೆಯುಂಟ
ತಂಗಿ ಬಳಗ ನೋಡುದ ನಿನದಾರಿ| ಮಳೆರಾಜ
ಮನತುಂಬಿ ಸುರಿಯೋ ಸರವರಿಗೂ ||೧೧||

ಬಡಗಣ ಸೀಮೆಗೆ ಗಡಿಬಿಡಿಲಿ ಹೋಗಯ್ಯ
ಬಡವರ ಭಾವ ತುಂಬುತ| ಮಳೆರಾಜ
ಬಂದ ಸಂಕಟವ ಸರಿಸೋಗ ||೧೨||

ಹತ್ತೇರು ಕಟ್ಟಿಗೆ ಮತ್ತೆ ಮಳೆರಾಯ ಬಂದ
ಮುತ್ತು ಚೆಲ್ಲಯ್ಯ ಹೊಲಕೆಲ್ಲ| ಅಣ್ಣಯ್ಯನ
ಮತ್ತೆ ಧಾನ್ಯವು ಬೆಳೆಯಲಿ ||೧೩||

ಮಳೆರಾಯನ ಕರುಣೆಗೆ ಕರ್ಮೆಲ್ಲ ಬಯಲಾಗಿ
ಸಂದು ಸಂದಿಗೆ ಸಮಸುಖ| ಮಳೆರಾಜ
ಜಗಕೆಲ್ಲ ದಾರಿ ಸುಖವಾಗೆ ||೧೪||

(ಆಕರ - ಮಳೆ ಒಂದು ಜಾನಪದೀಯ ಅಧ್ಯಯನ - ಡಾ. ಎಸ್.ಪಿ. ಪದ್ಮಪ್ರಸಾದ್.)

ಉತ್ತರ ದೇವಿ

ಉತ್ತರೆ ನೀರಿಗೋಗಿ ಮತ್ತೇಕೆ ಬರಲಿಲ್ಲ
ಉತ್ತರ ದೇಸೆಂಬೂ ಮಳೆ ಹುಯ್ದು - ಕೆರೆ ತುಂಬಿ
ಹನಿ ಬಿದ್ದು ಹರಬಿ ಒಡೆದಾವು

ಅಳ್ಳಡಸಗಾರೆಣ್ಣೆ ಮೇಲಕ್ಕೆ ನೀರಿಗೋಗಿ
ಮುಳ್ಳು ಸಿಕ್ಕಿ ಸೀರೆ ಸೆರಗೆರಿದೊ-ದಾಳಿಂಬೆ
ಹನಿಬಿದ್ದು ಹರಬಿ ಒಡೆದಾವು

ನೀರೇಕೆ ಕಲಕಿದವು ನರಿಗೇಕೆ ಮಾಸಿದವು
ಮಾವನ ತೋಟಾದ ಮರುಗಾವು - ಕುಯ್ಯುಕೋಗಿ
ಬಾಳೆಯ ಮುಳ್ಳು ಸೆಣೆದಾವು

ಬಾಳೇಗೆ ಮುಳ್ಳುಂಟೆ ಬದನೀಗೆ ಚಪ್ಪರುಂಟೆ
ಹಸಿನಾಲಿಗೆ ಇಸವುಂಟೇ - ಸೊಸಿಬಾಲೆ
ಸೊಸಿ ಬಾಲೆ ನಿನ ಮಾತು ನಿಜವೇನೇ

ಎತ್ತಿಗೆ ಮಾತುಂಟೆ ಕತ್ತೇಗೆ ಕೋಡುಂಟೆ
ಖುಷಿಯಾಡಿದ ಮಾತೀಗೆ ಹುಸಿಯುಂಟೆ - ಅತ್ತೆಮ್ಮ
ಅತ್ತ್ಯಮ್ಮ ನಿಮ್ಮ ಮಾತು ನಿಜವುಂಟೇ

ಅತ್ತೆಗೂ ಸೊಸಿಗೂ ಹತ್ತ್ಯಾವೆ ಕಾಳಗಿ
ಉತ್ತರದೇವೆಂಬಾ ಸೊಸಿ ಬ್ಯಾಡ

ಉತ್ತು ಬಂದ ಮಗನಿಗೆ ತುಪ್ಪ ಅನ್ನ ಇಕ್ಕುವಳೆ
ಉತ್ತರದೇವೆಂಬ ಸೊಸಿಬ್ಯಾಡ - ಕಂದಯ್ಯ
ಬಿಟ್ಟು ಬಿಡವಳ ತವರೀಗೆ

ಬಿಟ್ಟು ಬಿಡಲಿಕ್ಕೆ ಎತ್ತಲ್ಲ ಎಮ್ಮೆಲ್ಲ
ಹತ್ತುವರ ಮುಟ್ಟ ತೆರಮುಟ್ಟಿ ಬಂದವಳ
ಬಿಟ್ಟಿರುನಾರೆ ಹಡದವ್ವಾ

ಅವಳ ಕೊರಳಲ್ಲಿರುವ ಸಲಿಕೆ ಸರಪಳಿ ಮಾರಿ
ನಿನ್ನ ಮುಂಚಾಕೆ ರಾಣಿಯ ತರಬಲ್ಲೆ ಕಂದಯ್ಯ
ಉತ್ತರದೇವೆಂಬ ಸೊಸಿ ಬ್ಯಾಡಾ

ಅರಗಿ ಬಂದ ಮಗನೀಗೆ ಹಾಲನ್ನ ಇಕ್ಕುವಳೆ
ಬೇಡತಿಯೆಂಬ ಸೊಸಿ ಬ್ಯಾಡ -ಕಂದಯ್ಯ
ಬಿಟ್ಟು ಬಿಡವಳ ತವರೀಗೆ

ತವರೀಗೆ ಬಿಡುವಾಕೆ ಎತ್ತಲ್ಲ ಎಮ್ಮೆಲ್ಲ
ಆರು ವರ ಮುಟ್ಟಿ - ಬಂದವಳ
ನೋಡದಿರುನಾರೆ ಹಡದವ್ವಾ

ಮೂಗುತಿ ಮುರಿದಾರೆ ಮಾಡಿಸಬಹುದು
ಮಡದಿ ಸತ್ತಾರೆ ತರಬಹುದು - ಕಂದಯ್ಯ
ನಿನ್ನ ಹೆತ್ತವ್ವನೆಲ್ಲಿ ಪಡೆದಿಯೇ

ಅವಳ ಕಾಲಲಿರುವ ಪಿಲ್ಲಿ ಸರಪಣಿ ಮಾರಿ
ನಿನ್ನ ಮಂಚಾಕೆ ರಾಣಿಯ ತರಬಲ್ಲೆ - ಕಂದಯ್ಯ
ಬಿಟ್ಟು ಬಿಡವಳ ತವರೀಗೆ

ಮಡದೀಯ ಕರದವನು ಮತ್ತೇನ ಹೇಳ್ಯಾನು
ಇತ್ತ ಕೇಳೆ ಮಡದಿ ನನ್ನ ಮಾತಾ

ಆಗ ತಂದವನಲ್ಲ ಈಗ ಕಳಗವನಲ್ಲ
ಹೋಗಿರು ನಿನ್ನ ತವರೀಗೆ

ತಂದ ರಾಯರಿಗೆ ಘುಟ್ಟದ ಮಡದೊಪ್ಪಿಲ್ಲವ
ನಾ ಹೋತಿನಿ ರಾಯ ತವರೀಗೆ
ನಾ ಹೋದಳು ಎಂದು ಚಿಂತಿ ಮಾಡಲು ಬ್ಯಾಡ
ನೀ ನನಗಿಂತ ಚೆಲುವೇ ತರಬೇಕು

ತಂದಾರು ತತ್ತನ್ನಿ ನನಗಿಂತಲು ಚೆಲುವೆಯಾ
ನಾ ಮುಡಿದು ನನ್ನ ಶಿರ ಮುಡಿದು - ಮಿಕ್ಕಿದ್ದ ಹೂವ
ಯಾವ ರಾಣ್ಯಾರೇ ಮುಡಿಯಾಲಿ
ಆಗ ಉತ್ತರದೇವಿ ಮತ್ತೆಲ್ಲಿಗೆ ಹೋಗುತಾಳೆ
ಕಿತ್ತಲಿ ವನಕೆ ನಡೆದವಳೆ

ಕಿತ್ತಲಿ ನೀವು ಕೇಳಿ ಕಿತ್ತಲಿಯ ವನಕೇಳಿ
ನಾನು ಬಂದಾಗ ಸಸಿಗೋಳು
ಗೊಬ್ಬರವಾ ಹಾಕಿ ಸಲುವಿದೇನು ವನಗಳಿರಾ
ಹೋತೀನ ನನ್ನ ತವರೀಗೆ

ನೀರ ಹುಯ್ಯುವರ‍್ಯಾರೆ ಗೊಬ್ಬರ ಹಾಕವರ‍್ಯಾರೆ
ಹಣ್ಣಾದರ‍್ಯಾರೆ ಮೆಲ್ಲುವರೂ

ಅತ್ತ್ಯಮ್ಮ ನೀರು ಹುಯ್ಯುತಾರೆ
ಅತ್ತ್ಯೆಮ್ಮ ಗೊಬ್ಬರ ಹಾಕುತ್ತಾರೆ
ಹಣ್ಣಾದರಾಕೆ ಮೆಲ್ಲುತಾರೆ

ಅಲ್ಲಿಂದುತ್ತರದೇವಿ ಬಾಳೆ ವನಕೋಗಿ
ನಾನು ಬಂದಾಗ ಎಳೆ ಕಂದು
ಬೂದಿ ಹಾಕಿ ಸಲುವಿದೇನು ವನಗಳಿರಾ
ಹೋತೀನಿ ನನ್ನ ತವರೀಗೆ

ಬೂದಿ ಹಾಕವರ್‍ಯಾರೆ ನೀರ ಹುಯ್ಯುವರ್‍ಯಾರೆ
ನಾ ಹಣ್ಣಾದಗೆ ಮೆಲ್ಲುವರ್‍ಯಾರೆ

ಅತ್ತೆಮ್ಮ ನೀರು ಹುಯ್ಯುತಾರೆ
ಅತ್ತೆಮ್ಮ ಬೂದಿ ಹಾಕುತಾರೆ
ಹಣ್ಣಾದರಾಕೆ ಮೆಲ್ಲುತಾರೆ

ಅಲ್ಲಿಂದ ಹಿಂದಿರುಗಿ ಅರಮನೆಗೆ ಬರುತಾಳೆ
ಅಡಿಗೆಯ ಮಾಡಿದಳು ನೀರಾನೆ ತಂದಾಳು
ಮಾವನಿಗೆ ನೀರಾ ಕೊಟ್ಟಳು ಉತ್ತರದೇವಿ

ಮಾಳಿಗೆಯ ಮೇಲೆ ಮಲಗಿರುವ ಮಾವಯ್ಯ
ಊಟಕ್ಕಪ್ಪಣೆ ದಯಮಾಡಿ

ನೆನ್ನೆ ಉಂಡಾ ಊಟ ಇನ್ನು ನಂಗೆ ಅರಗಿಲ್ಲಾ
ನಿನ್ನಾಣೆಗು ನಂಗೆ ಹಸಿವಿಲ್ಲಾ

ಮಾಳಿಗೆಯ ಮೇಲೆ ಮಲಗಿರುವ ಮಾವಯ್ಯ
ನಾ ಹೋಗಿ ಬತ್ತೀನಿ ತವರೀಗೆ

ತೌರೀಗೆ ಹೋದಾರೆ ತೌರಲ್ಲಿರಬ್ಯಾಡ
ತೌರೊಳ್ಳೆದಂತ ಇರಬ್ಯಾಡ - ಉತ್ತರ ದೇವಿ
ನಾಳೆ ಬುಧುವಾರ ಬರಬೇಕು

ಅಲ್ಲಿಂದ ಉತ್ತರದೇವಿ ಅಂಗಳಾವ ಇಳಿದಾಳು
ಅವರ ಭಾವನ ಪಾದಕೆ ಶರಣೆಂದು - ಏನಂದಳು
ಹೋತೀನಿ ಭಾವಯ್ಯ ತವರೀಗೆ

ಹೋಗಿ ಬಾರೆ ಹೋಗಿ ಬಾರೆ ಹೊನ್ನೋಲೆ ಕಿವಿಯೊಳೆ
ನಾಗಭೂಷಣದ ನರಿಗ್ಯವಳೇ - ಉತ್ತರದೇವಿ
ತೌರೊಳ್ಳೆದಂತ ಇರಬ್ಯಾಡ - ಉತ್ತರದೇವಿ
ನಾಳೆ ಬುಧುವಾರ ಬರಬೇಕು

ಅತ್ತೆಗೆ ಶರಣೆಂದು ಮತ್ತೇನ ಹೇಳ್ಯಾಳು
ಹೋತಿನತ್ತಮ್ಮ ತವರೀಗೆ

ಹೋಗಿ ಬಾರೆ ಹೋಗಿ ಬಾರೆ ಹೊನ್ನೋಲೆ ಕಿವಿಯೋಳೆ
ನಾಗಭೂಷಣದ ನರಿಗ್ಯವಳೇ - ಉತ್ತರದೇವಿ
ಮಳ್ಳ ಮಗುಚಿ ಮನೆಗೆ ಬರಬ್ಯಾಡ

ಅತ್ತಿಗೆಗೆ ಶರಣೆಂದಾಳು ಮತ್ತೇನ ಹೇಳ್ಯಾಳು
ಹೋತ್ತಿನತ್ತಿಗ್ಯಮ್ಮ ತವರೀಗೆ

ಹೋಗಿ ಬನ್ನಿ ಹೋಗಿ ಬನ್ನಿ ಹೊನ್ನೋಲೆ ಕಿವಿಯವರೆ
ನಾಗಭೂಷಣದ ನರಿಗ್ಯವರೆ - ಅತ್ತಿಗ್ಯಮ್ಮ
ನೀವು ಮಳ್ಳ ಮಗುಚಿ ಮನೆಗೆ ಬರಬ್ಯಾಡಿ

ಒಂದಾನೆತ್ತಿಕೊಂಡು ಕಂದಾನ ಕೈಲಿಹಿಡಕೊಂಡು
ಹಟ್ಟಿ ಮೆಟ್ಟಿಗೆ ಇಳಿದಾಳು
ಮೆಟ್ಟಿಗೆ ಇಳಿದಾಳು ಅತ್ತಿಗೆ ಏನ ಹೇಳ್ಯಾಳು
ಅತ್ತೆಮ್ಮ ಅತ್ತೆಮ್ಮ ಇತ್ತ ಕೇಳಮ್ಮಾ
ನಾ ಹೋಗಿ ಬತ್ತೇನಿ ತವರೀಗೆ

ಎಮ್ಮೆ ಎಮ್ಮೆ ನೂರು ಎಮ್ಮೆಯ ಕರು ನೂರು
ನಮ್ಮಪ್ಪ ಕೊಟ್ಟ ಐನೂರು - ಎಮ್ಮೆಯ
ಬಿಟ್ಹೋಡೆಯತ್ತಮ್ಮ ನನ್ನ ಕುಟೆ

ಹಸು ಹಸುವೇ ನೂರು ಹಸೀನ ಕರು ನೂರು
ನಮ್ಮಪ್ಪ ಕೊಟ್ಟ ಐನೂರು - ಹಸುಗಳಾ
ಬಿಟ್ಹೋಡೆಯತ್ತಮ್ಮ ನನ್ನ ಕುಟೆ

ಆಡು ಆಡೇ ನೂರು ಆಡಿನ ಮರಿ ನೂರು
ನಮ್ಮಪ್ಪ ಕೊಟ್ಟ ಐನೂರು - ಆಡುಗಳ
ಬಿಟ್ಹೋಡೆಯತ್ತಮ್ಮ ನನ್ನ ಕುಟೆ

ಒಂದಾನೆತ್ತಿಕೊಂಡು ಕಂದಾನ ಕೈಲಿಡ್ಕಂಡು
ಅಂಗಳಾವ ಬಿಟ್ಟು ಇಳಿವಾಗ
ಅವರತ್ತೇನಂತಾ ನುಡಿದಾಳು
ಅಟ್ಟದ ಮೇಲೆ ಪಟ್ಟೆಯಸೀರೈಯ್ತೆ
ಉಟ್ಟು ಹೋಗೆ ಸೊಸೆ ಬಾಲಿ

ನಾನು ಉಟ್ಟಾರೆ ನನ್ಯಾರು ನೋಡೋರು
ನೀವುಟ್ಟು ನಿಮ್ಮ ಮಗ ನೋಡಿ ಅತ್ತಮ್ಮ
ಮುಂದೆ ಬರೋಳಿಗೆ ಮಡಗೀರಿ

ಮಾಳಿಗೆಯ ಮೇಲೆ ಮಾಡಿಸಿದ ಓಲೆ ಅವ
ಇಕ್ಕೊಂಡ್ಹೋಗೆ ಸೊಸೆ ಬಾಲೆ

ನಾನು ಇಕ್ಕಿದರೆ ನನ್ಯಾರ ನೋಡೋರು
ನೀವು ಇಕ್ಕಿ ನಿಮ್ಮ ಮಗ ನೋಡಿ - ಅತ್ತಮ್ಮ
ಮುಂದೆ ಬರೋಳಿಗೆ ಮಡಗೀರಿ

ಒಂದಾನೆತ್ತಿಕೊಂಡು ಕಂದಾನ ಕೈಲಿಡ್ಕಂಡು
ಮುಂದಲ ಚಿಕ್ಕೆ ಬೆಳಕಲಿ - ಉತ್ತರದೇವಿ
ಕುಂದೂರಿಗ್ಯಾಗಿ ನಡೆದಾಳು

ಕುಂದೂರಿಗ್ಯಾಗಿ ನಡೆದು ಹೋಗಾಗ
ಕುಂದೂರು ಗೌಡಾರು ತಡೆದು - ಏನಾಂದರು
ನಾವು ಒಂದು ವರ ಕೊಡುತೀನಿ ಇರುಬಾರೆ

ಒಂದು ವರ ಎಂಬುದು ನನ್ನ ಕಂದಾಗೆ ಬೆಲೆ ಇಲ್ಲಾ
ನಾ ಮುಂದಕೆ ಕಂದಾನ ನಡಿಸೇನು

ಒಂದಾನೆತ್ತಿಕೊಂಡು ಕಂದಾನ ಕೈಲಿ ಹಿಡ್ಕಂಡು
ಮುಂದಲ ಚಿಕ್ಕೆ ಬೆಳಕಲಿ - ಉತ್ತರದೇವಿ
ಭಾಗೂರಿಗಾಗಿ ನಡೆದಾಳು
ಭಾಗೂರಿಗಾಗಿ ನಡೆದು ಹೋಗಾಗ
ಭಾಗೂರು ಗೌಡಾರು ತಡೆದು - ಏನಂದಾರು
ಆರು ವರ ಕೊಡುತೀವಿ ಇರುಬಾರೆ

ಆರು ವರ ಎಂಬುದು ಆಡಿನ ಬೆಲೆ ಇಲ್ಲಾ
ನಾ ಮುಂದಾಕೆ ಕಂದಾನ ನಡಿಸೇನು

ಒಂದಾನೆತ್ತಿಕೊಂಡು ಕಂದಾನ ಕೈಲಿ ಹಿಡ್ಕಂಡು
ಮುಂದಾಲ ಚಿಕ್ಕೆ ಬೆಳಕಲ್ಲಿ - ಉತ್ತರದೇವಿ
ತಾಳೂರಿಗಾಗಿ ನಡೆದಾಳು

ತಾಳೂರಿಗಾಗಿ ನಡೆದು ಹೋಗಾಗ
ಈ ತಾಳೂರ ಗೌಡಾರು ತಡೆದು ಕೇಳಿದರಲ್ಲಾ
ಎಂಟು ವರ ಕೊಡುತಿನಿ ಇರುಬಾರೆ

ಎಂಟು ವರ ಎಂಬುದು ನನ್ನ ದಟ್ಟಿಯ ಬೆಲೆ ಇಲ್ಲಾ
ನಾ ಮುಂದಾಕೆ ಕಂದಾನ ನಡಿಸೇನು

ಒಂದಾನೆತ್ತಿಕೊಂಡು ಕಂದಾನ ಕೈಲಿ ಹಿಡ್ಕಂಡು
ಮುಂದಲ ಚಿಕ್ಕ ಬೆಳಕಲಿ - ಉತ್ತರದೇವಿ
ಹೆತ್ತೂರಿಗಾಗಿ ನಡೆದಾಳು

ಹೆತ್ತೂರಿಗಾಗಿ ನಡೆದು ಹೋಗಾಗ
ಹೆತ್ತೂರಗೌಡರು ತಡೆದು - ಏನಾಂದರು
ಹತ್ತುವರ ಕೊಡುತಿನಿ ಇರುಬಾರೆ

ಹತ್ತುವರ ಎಂಬುದು ನನ್ನ ಎತ್ತಿನ ಬೆಲೆ ಇಲ್ಲಾ
ನಾ ಮುಂದಕೆ ಕಂದಾನ ನಡಿಸೇನು

ಒಂದಾನೆತ್ತಿಕೊಂಡು ಕಂದಾನ ಕೈಲಿ ಹಿಡ್ಕಂಡು
ಹ್ವಾದಳು ತಾಯವ್ವನ ಅರಸನೆಗೇ

ತಾಯಿ ಬಾಗಿಲಾ ತೆಗೆ ತಾಯವ್ವ ಬಾಗಿಲಾ ತೆಗೆಯೇ
ನಾ ಬಂದನೇ ತಾಯಿ ತೆಗಿ ಬಾಗಿಲವಾ

ಬಾಗಿಲಾ ತೆಗೆಯುವುದಕ್ಕೆ ನಾ ಹೆಂಗೆ ತೆಗೆಯಾಲಿ
ನಿಮ್ಮಪ್ಪ ತೋಳಲ್ಲಿ ವರಗವರೇ - ಉತ್ತರದೇವಿ
ಹೋಗೇ ಅಣ್ಣಯ್ಯನರಮನೆಗೇ

ಅಣ್ಣಾ ಬಾಗಿಲ ತೆಗಿ ಅಣ್ಣಯ್ಯ ಬಾಗಿಲಾ ತೆರೆ
ನನ್ನ ಮಕ್ಕಳು ಬಾಯಾರಿ ಬಳಲಿದೊ - ಅಣ್ಣಯ್ಯ
ನಾ ಬಂದೇನು ಕದಾವ ತೆಗಿರಣ್ಣ

ಕದವಾ ತೆಗೆಯಾಕೆ ತಂಗಿ ನಾ ಹೆಂಗೆ ತೆಗೆಯಾಲಿ
ನಿಮ್ಮತ್ತಿಗೆ ತೋಳಲ್ಲಿ ವರಗವಳೆ - ಉತ್ತರದೇವಿ
ಹೋಗೇ ತಮ್ಮಯ್ಯನರಮನೆಗೆ

ತಮ್ಮಯ್ಯಾ ಬಾಗಿಲಾ ತೆರೆಯೊ ತಮ್ಮ ಬಾಗಿತಾತೆಗೆ
ನನ್ನ ಮಕ್ಕಳು ಬಾಯಾರಿ ಬಳಲಿವೊ - ತಮ್ಮಯ್ಯ
ನಾ ಬಂದೇ ತಮ್ಮ ತೆಗೆ ಬಾಗಿಲು

ಬಾಗಿಲಾ ತೆಗೆಯಾಕೆ ನಾ ಹೆಂಗೆ ತೆಗೆಯಲಕ್ಕ
ನಿನ್ನ ನಾದಿನಿ ತೋಳಲ್ಲಿ ವರಗವಳೆ - ಅಕ್ಕಯ್ಯ
ಹೋಗೇ ಅಕ್ಕಯ್ಯನರ ಮನೆಗೆ

ಅಕ್ಕ ಬಾಗಿಲ ತೆಗೆಯೇ ಅಕ್ಕಯ್ಯ ಬಾಗಿಲ ತೆಗೆ
ನನ್ನ ಮಕ್ಕಳು ಬಾಯಾರಿ ಬಳಲಿದೋ - ಅಕ್ಕಯ್ಯ
ನಾ ಬಂದೆ ಕದಾವ ತೆಗೆ ಅಕ್ಕಯ್ಯ

ಕದಾವ ತೆಗೆಯಾಕೆ ತಂಗಿ ನಾನೆಂಗೆ ತೆಗೆಯಾಲಿ
ನಿಮ್ಮ ಭಾವ ತೋಳಲ್ಲಿ ವರಗವರೆ -ತಂಗ್ಯಮ್ಮ
ಹೋಗೇ ತಂಗ್ಯಮ್ಮನರಮನೆಗೆ

ತಂಗಿ ಬಾಗಿಲಾ ತೆಗೆ ತಂಗಮ್ಮಾ ಬಾಗಿಲಾ ತೆಗೆಯೇ
ನನ್ನ ಮಕ್ಕಳು ಬಾಯಾರಿ ಬಳಲಿದೋ - ತಂಗಮ್ಮ
ನಾ ಬಂದೆನು ತಂಗಿ ತೆಗಿ ಕದವಾ

ಕದಾವ ತೆಗೆಯಾಕೆ ತಂಗಿ ನಾನೆಂಗೆ ತೆಗೆಯಾಲಿ
ನಿನ್ನ ಮೈದುನ ತೋಳಲ್ಲಿ ವರಗವರೆ - ಅಕ್ಕಯ್ಯ
ಹೋಗೇ ಅಪ್ಪಾಜಿಯರಮನೆಗೆ

ಅಪ್ಪಾ ಬಾಗಿಲು ತೆಗೆ ಅಪ್ಪಾಜಿ ಬಾಗಿಲು ತೆರೆ
ನನ್ನ ಮಕ್ಕಳು ಬಾಯಾರಿ ಬಳಲಿದೊ - ನನ್ನ ತಂದೆ
ತಂದೆ ನೀವು ಕದಾವ ತೆಗಿರಿ ತಂದೆ

ಕದಾವ ತೆಗೆಯ್ಯಾಕೆ ಮಗಳೆ ನಾನೆಂಗೆ ತೆಗೆಯಾಲಿ
ನಿಮ್ಮ ತಾಯಿ ತೋಳಲ್ಲಿ ವರಗವಳೆ - ಉತ್ತರದೇವಿ
ಎದ್ದೆಂಗೆ ಕದಾವ ತೆಗೆಯಾಲಿ

ಹತ್ತೂರು ತಿರುಗಿದರೂ ನೆತ್ತೀಗೆ ಎಣ್ಣೆಯಿಲ್ಲಾ
ಒಬ್ಬಾರು ಕದಾವ ತೆಗಿನಿಲ್ಲಾ

ಮಗಳ ಸಂಕಟ ನೋಡಿ ತಾಯಿ ಏನು ಹೇಳುತಾರೆ
ಇತ್ತಾ ಕೇಳೇ ಕಂದಾ ನನ್ನ ಮಾತು

ಹಿಂದಾಲ ಕಾಲದಲ್ಲಿ ನನಗೂ ಈ ಸಾಗಿತ್ತು
ನಿಮ್ಮಪ್ಪಾ ನನ್ನ ಉರಿಸಿದಾರು - ಉತ್ತರದೇವಿ
ನನ್ನ ಸಾಗು ನಿನಗೇ ಒದಗೀತು - ಉತ್ತರದೇವಿ
ಹೋಗವ್ವ ಹಂಪೆ ಹೊಳೆಗಾಗಿ

ಒಂದಾನೆತ್ತಿಕೊಂಡು ಕಂದಾನ ಕೈಲಿ ಹಿಡ್ಕಂಡು
ವಕ್ಕಳಾ ಸಂಕಟಾವ ಮಾಡತಾಳೆ - ಉತ್ತರದೇವಿ
ಹ್ಯಾದಾಳೂ ಹಂಪೆ ಹೊಳೆಗಾಗಿ

ಹಂಪೆ ಹೊಳೆಗೋಗಿ ಕಂದಾನ ಇಳಿಸ್ಯಾಳು
ಅಡ್ಡ ಬಿದ್ದು ಉದ್ದಾಕೆ ಏಳುತಾಳೆ - ಉತ್ತರದೇವಿ
ಪೂಜೆ ಮಾಡೋಣಾಂದರೆ ಹಣ್ಣಿಲ್ಲ ಕಾಯಿಲ್ಲಾ

ಇತ್ತ ಕೇಳೇ ಗಂಗವ್ವ ನನ ಮಾತು
ನನ್ನಂತ ಪಾಪಿಗೆ ಯಾರೂ ಇಲ್ಲಾ
ಯಾರು ಇಲ್ಲದವರಿಗೆ ನೀವೇ ತಂದೆ ತಾಯಿ
ನಾನು ನನ್ನ ಬಳಗಾವ ಒಳಕಳ್ಳಿ

ಅಡ್ಡ ಬೀಳುತಾಳೆ ಕೈಮುಗೀತಾಳೆ
ಪಟ್ಟೆ ಕಂಬಿಸೀರೆ ಜಳದಾಳೂ - ಉತ್ತರದೇವಿ
ಮಕ್ಕಳ ಕಣ್ಣಾ ಕಟ್ಟುತಾಳೆ

ಮಕ್ಕಳು ದುಃಖವಾ ಮಾಡುತ್ತವೆ
ಇದುವೇನೆ ತಾಯಿ ಅಪಸಕುನವು

ಈ ರೀತಿ ಮಾಡುವಕೆ ನಮ್ಮೇಕೆ ಸಾಕಿದಿರಿ
ಮುದ್ದು ಕೊಟ್ಟು ನಮ್ಮ ಕೊಲ್ಲಬಾರದೂ

ಮಕ್ಕಳ ನೋಡುತಾಳೆ ವಕ್ಕಳ ಸಂಕಟವ ಮಾಡಿ
ನೀವೆಲ್ಲಿ ಹೋತಿರೊ ನನ್ನ ಕಂದಾ - ಮಕ್ಕಳಿರಾ
ನನ್ನ ಜೊತೇಲಿ ಇರಬನ್ನಿ

ಹಂಗಂತಾವ ಹೇಳುತಾಲೆ ಮಕ್ಕಳಾ ಕಂಕಳಲ್ಲಿ ಎತ್ತಿ
ಒಂದೊಂದು ಮೆಟ್ಟಗಿ ಇಳಿದಾಳು - ಉತ್ತರದೇವಿ
ಗಂಗಮ್ಮ ತಾಯಿ ಒಳ್ಕಂಡರು

ಅತ್ತ ಹರಿಯಾಗಂಗೆ ಇತ್ತ ಹರಿಯವ್ವ
ಒತ್ತಿ ಹರಿಯವ್ವ ಸಿವಗಂಗೆ

ಎತ್ತ ಹರಿಯಾ ಗಂಗೆ ಇತ್ತ ಹರಿಯವ್ವ
ದಡ ಸೂಸಿ ಹರಿಯವ್ವ ಸಿವಗಂಗೆ

ಅತ್ತ ಹರಿಯಾ ಗಂಗೆ ಇತ್ತಾವು ಹರಿದಾಳು

ತುಂಬಿ ಹರಿದಾಳು ಸಿವಗಂಗೆ

ಸಂ. : ಟಿ.ಎಸ್. ರಾಜಪ್ಪ, ಕೆರೆ ಹೊನ್ನಮ್ಮ ಮತ್ತು ಇತರ ಲಾವಣಿಗಳು.-೧೯೭೪

ಡಾ. ದೇವೇಂದ್ರಕುಮಾರ ಹಕಾರಿ ಅವರ ನಿಬಂಧ 'ಜಾನಪದ ಸಾಮಾಜಿಕ ಕಥನ ಗೀತೆಗಳಲ್ಲಿ ದುಃಖಾಂತ ನಿರೂಪಣೆ' - ಗ್ರಂಥದ ಅನುಬಂಧದಲ್ಲಿ ಉಲ್ಲೇಖಿತ ಪಾಠ. (ಪುಟ ೨೭೨ - ೨೮೦)

* * * * *

ತಿಂಗಳು ಮಾಮನ ಪದ

ಅಪ್ಪ ನೀನಿಲ್ಲದ ಸೊಪ್ಪಾದೊ ಈ ಭೂಮಿ,
ಸಪ್ಪೆ ದಂಟಾದೊ ದನಕರ| ದೇವೀಂದ್ರಾಯ
ಅಪ್ಪರಾತಿರಿಕೆ ಕರುಣಾಗೊ||

ಅಂಬಾರದಲ್ಲಿ ತುಂಬ್ಯಾಡೊ ಮಳಿರಾಯ,
ಗೊಂಬೆ ಪಚ್ಚಡದದೊರಿಮಗನೆ - ನೀನಿಲ್ಲದೆ
ರಂಭೆ ಹಾಕಿದ ಪೈರು ಒಣಗಿದೊ||

ಬಿತ್ತಿ ಬಂದ ತಮ್ಮನು ಬಿತ್ತಿದ ಸುದ್ದಿಯ ಕೇಳಿ
ಬಿತ್ತಿ ಬಂದೆವ್ವ ಮಳಿಯಿಲ್ಲ - ನಿನ್ನ ಕೊರಳೊಳ್ಳ
ಮುತ್ತಿನಂಗವೆ ತೆನಿ ಜೋಳ|

ನಕ್ಕರೆ ಬರನಲ್ಲಿ ಕಿಕ್ಕೇರಿ ಮಳೆರಾಯ
ಅಕ್ಕಯ್ಯ ನೀನ್ಹೋಗಿ ಕರೆತಾರೆ- ಬಾಳೆಯ
ತಿಟ್ಟನಲ್ಲವನೆ ಮಳೆರಾಯ||

ಎಮ್ಮೆಯ ತೊರಕೆ ಕೆಮ್ಮುಗಿಲು ಎದ್ದವೆ,
ದಮ್ಮಯ್ಯ ಹುಯ್ಯೊ ಮಳಿರಾಯ - ಹೆರಗನಹಳ್ಳಿ
ಮುಮ್ಮಳಿಗೇಲಿತೆಳಗಯ್ಯ||*

(ಈ ಹಾಡುಗಳನ್ನು 'ಜಾನಪದ ಜಗತ್ತು' ಪತ್ರಿಕೆಯ ಸಂಪುಟ ೩, ಸಂಚಿಕೆ ೭ರಲ್ಲಿನ ಡಾ. ಡಿ.ಕೆ. ರಾಜೇಂದ್ರ ಅವರ 'ಮಳೆರಾಯನ ಹಾಡುಗಳು' ಎಂಬ ಲೇಖನದಿಂದ ಎತ್ತಿಕೊಳ್ಳಲಾಗಿದೆ.)

ಮಳೆರಾಜನನ್ನು ಕುರಿತ ಕೆಲವು ತ್ರಿಪದಿಗಳು

೧. ರಾಗೀ ಬಣ್ಣದ ಕುದರಿ ರಾಚೇಕ ದೊಡ್ಡದು
ರಾಜಾರೊಳು ರಾಜಾ ಮಳೆರಾಜಾ| ಬರುವಾಗ
ರಾಜೇವ ಕೈಯs ಮುಗುದಾವs||

೨. ಮಳಿಯಪ್ಪ ಮಳಿರಾಜಾ ಕರಿಯುತಾರೋ ನಿನ್ನ
ಮೊದಲು ಕೂರಿಗಿs ರೈತಾರು| ಹೋದಾಗ
ಹೊಲವೆದ್ದು ಕೈಯs ಮುಗಿದಾವs||

೩. ಮಳಿಯಪ್ಪ ಮಳಿರಾಜಾ ಬೆಳಿ ಒಣಗಿ ಹೋದಾವೋss
ಬಡವರು ಬಾಯs ಬಿಡತಾರs| ಅಡವೆನ್ನ
ಗಿಡಬಳ್ಳಿ ಕೊರಗಿ ಕಮರ್‍ಯಾವs||

೪. ಬಾಬಾರೋ ಮಳಿರಾಜಾ ಹೊಲದ ಬೆಳಿ ಕರಿಬಾವೋ
ತೆನಿ ಎದ್ದು ಕೈಯ ಮುಗಿದಾವೋ| ಬೆಳವೊಲದ
ಜನ ಮುಗಿಲ ಮಾರೀ ನೋಡ್ಯಾರs||

೫. ಆ ರಾಜ ಈ ರಾಜ ಘನರಾಜ ಮಳೆರಾಜ
ತೇಜೇರಿ ಸುರಿದ ಮಳೆರಾಜ| ಬೆಳೆದಾನು
ಲೋಕದೊಳು ರಾಜ ತೆನಿರಾಜ||

೬. ಆ ರಾಜ ಈ ರಾಜ ಭೋರಾಜ ಮಾರಾಜ
ರಾಜರೊಳು ರಾಜ ಮಳೆರಾಜ| ಘನರಾಜ
ಬೀಜ ಸಕುರಿಗೆ ತೆನಿರಾಜ||

೭. ಗಾಳೆಪ್ಪ ಧೂಳೆಪ್ಪ ಸಿಡ್ಲಪ್ಪ ಮಿಂಚಪ್ಪ
ಇವರ್ನಾಕ ಮಂದಿ ಅಣತಮ್ರು| ಇದ್ದರ
ಸುತ್ತಣ ಹಳ್ಗೆದೊಡ್ಡವರೋ||

(ಆಕರ : ಮಳೆ ಒಂದು ಜಾನಪದೀಯ ಅಧ್ಯಯನ - ಡಾ. ಪದ್ಮಪ್ರಸಾದ್. ಎಸ್.ಪಿ.)

ತಿಂಗಳು ಮಾಮಾನ ಪದ (ತುಣುಕುಗಳು)

೧

ತಿಂಗಳು ತಿಂಗಳಿಗೂ ತಿಂಗಳು ಮಾವನ ಪೂಜೆ
ಗರುಡನಾ ಪೂಜೆ ಘನಪೂಜೆ - ಹಾಗಲವಾಡಿ
ಹನುಮನಾ ಪೂಜೆ ಶನಿವಾರ||

ಗುಡುಗೀದ ಗುಡುಗೀದ ಗುಬ್ಬೀಲಿ ಮಿಂಚೀದ
ಹೆಬ್ಬೂರಿನ ಮ್ಯಾಲೆ ಮಳೆಬಿದ್ದೋ| ನಂಜನಗೂಡು
ತೇರಿನ ಮ್ಯಾಲೆ ಹನಿ ಬಿದ್ದೋ||

೨

ಯಾರೇನಂದವ್ರು ಬಾರೋ ದೇವೇಂದ್ರುರಾಯಾ
ಮತ್ತೇ ನೆನೆದೇವು ಬಾರೋ ||ಪ||
ಮಳೆ ಹೋಯ್ತುಂತಾ ಮಾನ್ಯವರ ಬಯಬ್ಯಾಡಿ
ಸಾಲಾಕ್ಹೋಗವನೆ ಮಳೆರಾಯಾ||
ಮಳೆರಾಯ್ನ ಹೆಂಡ್ತಿ ಮಕ್ಕಳೊಂದಿಗಿತ್ತಿ
ಮಳೆ ಬಂದಾರೆಲ್ಲಿ ತಂಗ್ಯಾಳೋ| ತಿಂಗಳು ಮಾವ
ಎಳೆಯ ಹೊಂಬಾಳೆ ಸುಳಿಯಲ್ಲಿ|

(ಅಗ್ರಹಾರ ಕೃಷ್ಣಮೂರ್ತಿಯವರ 'ಬೆಳ್ದಂಗಳಪ್ಪನ ಪೂಜೆ' ಪುಸ್ತಕದಿಂದ)

ಪತ್ರಿಕಾ ಸಾಕ್ಷ್ಯ

ಬಳ್ಳಾರಿ: ಮುನಿದ ಮುಂಗಾರು, ರೈತರಿಗೆ ಆತಂಕ

ರಮೇಶ ಜಹಗೀರದಾರ್

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಮಾರ್ಚ್ ಅಂತ್ಯದಲ್ಲಿ ಅಕಾಲಿಕ ಮಳೆ ಸುರಿದಾಗ ಈ ಬಾರಿ ಮುಂಗಾರು ರೈತಪರವಾಗಿರುತ್ತದೆ ಎಂದೇ ಜಿಲ್ಲೆಯ ಜನ ಭಾವಿಸಿದ್ದರು. ಆದರೆ ಕಳೆದ 20 ದಿನಗಳ ಹವಾಮಾನ ಆ ನಿರೀಕ್ಷೆಗಳನ್ನು ಹುಸಿಯಾಗಿಸಿದೆ. ಸಂಪೂರ್ಣ ಮಳೆಯಾಶ್ರಿತವಾಗಿರುವ ಜಿಲ್ಲೆಯ ಪಶ್ಚಿಮದ ತಾಲ್ಲೂಕುಗಳು ಹಾಗೂ ಇತರೆಡೆ ಇರುವ ಒಣಭೂಮಿಗಳಲ್ಲಿ ಬಿತ್ತನೆಯೇ ಕುಂಠಿತವಾಗಿದ್ದು ಅಲ್ಲಲ್ಲಿ ಬಿತ್ತಿದ ಬೆಳೆಗಳು ಮೊಳಕೆ ಹಂತದಲ್ಲಿಯೇ ಒಣಗಿ ಹೋಗುತ್ತಿವೆ.



ಬಳ್ಳಾರಿಯ ಸುತ್ತಮುತ್ತ ಬಾನಂಗಳದಲ್ಲಿ ಮೋಡಗಳು ಕಣ್ಣಾ ಮುಚ್ಚಾಲೆಯಾಡುವ ದೃಶ್ಯ.

'ಮಳೆ ಬಂದಿದೆ ಎಂದು ಹೊಲದಲ್ಲಿ ನಿಂತರೆ ಮೈಮೇಲಿನ ಬಟ್ಟೆ ಕೂಡ ತೊಯ್ಯುವುದಿಲ್ಲ. ಭೂಮಿ ಹಸಿಯಾಗುವಂತೆ ಮಳೆಯಾಗಿಲ್ಲ. ನಾವಿನ್ನೂ ಬಿತ್ತನೆಯನ್ನೇ ಆರಂಭಿಸಿಲ್ಲ...' ಇದು ಹಡಗಲಿಯ ರೈತ ಕೊಟ್ರಯ್ಯ ಅವರ ಅಭಿಪ್ರಾಯ. ಜಿಲ್ಲೆಯ ಮಳೆ-ಬೆಳೆ ಸ್ಥಿತಿಯನ್ನು ಈ ಹೇಳಿಕೆಯೇ ವಿವರಿಸುತ್ತದೆ. ಜೂನ್ ತಿಂಗಳ ಮೊದಲ ವಾರ ಅಲ್ಪಸ್ವಲ್ಪ ಮಳೆಯಾಗಿದ್ದು ಬಿಟ್ಟರೆ ಕಳೆದ 20 ದಿನಗಳಿಂದ ಮಳೆಯಾಗಿಲ್ಲ.

ಜೂನ್ ಅಂತ್ಯಕ್ಕೆ ವಾಡಿಕೆಯಂತೆ 165.4 ಮಿ.ಮೀ. ಮಳೆಯಾಗಬೇಕು, ಆದರೆ ಇದುವರೆಗೆ 203.4 ಮಿ.ಮೀ. ಮಳೆಯಾಗಿದೆ.

ಮೇಲ್ನೋಟಕ್ಕೆ ವಾಡಿಕೆಗಿಂತ ಹೆಚ್ಚು ಪ್ರಮಾಣದ ಮಳೆಯಾಗಿದೆ ಎಂದೆನಿಸಿದರೂ ವಾಸ್ತವ ಹಾಗಿಲ್ಲ. ಮಾರ್ಚ್‌ನಲ್ಲಿ ವಾಡಿಕೆಯಂತೆ ಕೇವಲ 4 ಮಿ.ಮೀ. ಮಳೆಯಾಗಬೇಕಿತ್ತು, ಆದರೆ ಆ ತಿಂಗಳಲ್ಲೇ 115 ಮಿ.ಮೀ. ಮಳೆಯಾಗಿತ್ತು, ಆದರೆ ಬಿತ್ತನೆಯ ಈ ಕಾಲದಲ್ಲಿ ಮಾತ್ರ ಮಳೆಯಾಗಿಲ್ಲ.

ಜಿಲ್ಲೆಯಲ್ಲಿ 3,94,300 ಹೆ. ಬಿತ್ತನೆ ಗುರಿಯಿದ್ದು ಇದುವರೆಗೆ ಕೇವಲ 44,712 ಹೆ. (ಶೇ 11.3) ಬಿತ್ತನೆಯಾಗಿದೆ.

ಮುಂಚಿತವಾಗಿ ಬಿತ್ತಿದ ಬೆಳೆಗಳು ಮೊಳಕೆಯೊಡೆದು 35-40 ದಿನದವಾಗಿದ್ದರೆ ಇನ್ನೂ ಕೆಲವೆಡೆ ಕೇವಲ 10-15 ದಿನಗಳ ಬೆಳೆಯಿದೆ. ಮುಂಗಾರಿನ ಪ್ರಮುಖ ಬೆಳೆಗಳಾದ ಜೋಳ, ತೊಗರಿ, ಹೆಸರು, ಎಳ್ಳು ಮುಂತಾದ ಬೆಳೆಗಳು ಬಾಡುತ್ತಿದ್ದು ರೈತರು ಆತಂಕದಲ್ಲಿದ್ದಾರೆ.

'ಕಳೆದ ವರ್ಷ ಉತ್ತಮ ಮುಂಗಾರಿನಿಂದಾಗಿ ಒಳ್ಳೆಯ ಇಳುವರಿ ಬಂದಿತ್ತು. ಈ ಹಂತದಲ್ಲಿ 1.8 ಲಕ್ಷ(ಶೇ 28) ಹೆ. ಬಿತ್ತನೆ ಮುಗಿದಿತ್ತು, ಈ ಬಾರಿ ಬಿತ್ತನೆ ಕಡಿಮೆಯಾಗಿದೆ' ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಬಿ.ವೈ. ಶ್ರೀನಿವಾಸ್ ತಿಳಿಸಿದರು. ಕೂಡ್ಲಿಗಿ, ಹಡಗಲಿ, ಹಗರಿಬೊಮ್ಮನಹಳ್ಳಿ ತಾಲ್ಲೂಕುಗಳಲ್ಲಿ ಬೆಳೆಗಳು ಒಣಗುತ್ತಿವೆ.

ಮುಂಗಾರಿನಲ್ಲಿ ಜೂನ್, ಜುಲೈ ತಿಂಗಳೇ ಮಹತ್ವದ್ದಾಗಿದ್ದು ಇದುವರೆಗೆ ರೈತರಿಗೆ ನಿರಾಶಾದಾಯಕವಾಗಿದೆ. ಜೋಳ ಬಿತ್ತನೆಗೆ ಅವಧಿ ಮುಗಿದು ಹೋಗಿದೆ, ಇನ್ನು ಮುಂದೆ ಮಳೆ ಬಂದರೆ ಮೆಕ್ಕೆಜೋಳ, ಸೂರ್ಯಕಾಂತಿ ಬೆಳೆಯಬಹುದಷ್ಟೇ.



ಗದುಗಿನ ಬೆಟಗೇರಿಯ ಕುರಟ್ಟಿಪೇಟೆಯಲ್ಲಿರುವ ಮಲ್ಲಿಕಾರ್ಜುನ ದೇವಸ್ಥಾನದಲ್ಲಿರುವ ಶಿವಲಿಂಗಕ್ಕೆ ಜಲಮಜ್ಜನ ಮಾಡಿ ಮಳೆಗಾಗಿ ಪ್ರಾರ್ಥಿಸುತ್ತಿರುವುದು.

ಮಳೆಗಾಗಿ ಮಲ್ಲಿಕಾರ್ಜುನನಿಗೆ ಜಲಮಜ್ಜನದ ವೈಭವ

28-ಜೂನ್-2008

ಸಿದ್ದಯ್ಯ ಹಿರೇಮಠ

ಪ್ರಜಾವಾಣಿ ವಾರ್ತೆ

ಗದಗ: ಬರಗಾಲದ ಛಾಯೆ ಆವರಿಸಿದಾಗ ಮಳೆಗಾಗಿ ಪ್ರಾರ್ಥಿಸಿ, ದೇವರನ್ನು ವಿಶೇಷವಾಗಿ ಪೂಜಿಸುವುದು ವಾಡಿಕೆ. ವಿಶಿಷ್ಟ ಹರಕೆ ಹೊರುವುದು, ಕತ್ತೆಗಳಿಗೆ, ಕಪ್ಪೆಗಳಿಗೆ ಮದುವೆ ಮಾಡುವುದೂ ಉಂಟು.

ಉತ್ತರ ಕರ್ನಾಟಕದಲ್ಲಿ ಗುರ್ಜಿ ಪೂಜೆಯೂ ಮಳೆರಾಯನನ್ನು ಕರೆಯುವ ವಿಶೇಷ ಆಚರಣೆಯಾಗಿದೆ. ಅದೇ ರೀತಿ ಈ ಭಾಗದಲ್ಲಿ ಅಪರೂಪಕ್ಕೊಮ್ಮೆ ಇನ್ನೊಂದು ರೀತಿಯ ವಿಶೇಷ ಪೂಜೆಮಾಡಲಾಗುತ್ತದೆ. ಶಿವಲಿಂಗವನ್ನು (ಈಶ್ವರನಮೂರ್ತಿ) ಸಂಪೂರ್ಣವಾಗಿ ನೀರಿನಲ್ಲಿ ... ಗಿಸಿ ಜಲಮಜ್ಜನ ಮಾಡಿ, ರಾತ್ರಿಯಿಡೀ ಭಜನೆ ಮಾಡುತ್ತ ಮಳೆ ಕರುಣಿಸುವಂತೆ ಕೋರುವುದೇ ಆ ಪೂಜೆ.

ಜೂನ್ ಕಳೆಯುತ್ತ ಬಂದರೂ ಈ ಬಾರಿ ಸಮರ್ಪಕವಾಗಿ ಮುಂಗಾರು ಮಳೆ ಸುರಿಯದೇ ಬರಗಾಲದ ಛಾಯೆ ಆವರಿಸಿರುವ ಹಿನ್ನೆಲೆಯಲ್ಲಿ ಕಂಗೆಟ್ಟಿರುವ ರೈತ ಸಮೂಹ ಸ್ಥಳೀಯ ಬೆಟಗೇರಿಯ ಕುರಟ್ಟಿಪೇಟೆಯಲ್ಲಿರುವ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಅಂಥ ವಿಶೇಷ ಪೂಜೆ ಹಮ್ಮಿಕೊಂಡಿದೆ.

ಸಕಲ ಭಕ್ತರೂ ದೇವಸ್ಥಾನದ ಗರ್ಭಗುಡಿಯೆದುರು ನೀರು ಹೊರ ಹೋಗದಂತೆ ಮೂರಡಿ ಎತ್ತರದ ಗೋಡೆ ಕಟ್ಟಿ, ಈಶ್ವರನ ಮೂರ್ತಿ ಸಂಪೂರ್ಣ ಮುಳುಗುವಂತೆ ಪಕ್ಕದ ಬಾವಿಯಿಂದ ನೀರನ್ನು ಹೊತ್ತು ತಂದು ಸುರಿದು, ಪೂಜೆ ಸಲ್ಲಿ ರಾತ್ರಿಯಿಡೀ ಭಜನೆ ಮಾಡುವುದು ಆ ಪೂಜೆಯ ವೈಶಿಷ್ಟ್ಯ.

ವರುಣದೇವ ಸಂತುಷ್ಟನಾಗಿ ಮಳೆ ಸುರಿಸುವವರೆಗೂ ನಿತ್ಯ ಸಂಜೆ ನೀರನ್ನು ಖಾಲಿ ಮಾಡಿ ಮತ್ತೆ ಬಾವಿಯಿಂದ ನೀರನ್ನು ತಂದು ದೇವರಿಗೆ ಅರ್ಪಿಸಿ ಪೂಜೆ ಮಾಡಿ ಭಜನೆಯಲ್ಲಿ ನಿರತವಾಗುವ ಪ್ರಕ್ರಿಯೆ ಮುಂದುವರಿಯುತ್ತದೆ. ಕೆಲವು ವರ್ಷಗಳ ಹಿಂದೆ ಜಿಲ್ಲೆಯ ಕೆಲವೆಡೆ ಈ ರೀತಿಯ ಪೂಜೆಯನ್ನು ಮಾಡುತ್ತಿದ್ದುದಾಗಿ ನೆನಪಿಸಿಕೊಳ್ಳುವ ಹಿರಿಯ ಜೀವಗಳು, ಅನೇಕ ವರ್ಷಗಳ ನಂತರ ಇಂತಹ ಪೂಜೆಗೆ ಮತ್ತೆ ಚಾಲನೆ ದೊರೆತಿದೆ ಎಂದು 'ಪ್ರಜಾವಾಣಿ'ಗೆ ತಮ್ಮ ಅನುಭವ ಹಂಚಿಕೊಂಡರು.

ಮೊದಲು ದೇವರಿಗೆ ಸಂಪೂರ್ಣ 'ಜಲಮಜ್ಜನ' ಮಾಡಿದರೆ, ಆತ ಸಂತುಷ್ಟನಾಗಿ ಮಳೆ ಸುರಿಸುತ್ತಾನೆ ಎಂಬ ನಂಬಿಕೆ ಇದೆ. ಈ ರೀತಿ ಮಾಡಿದಾಗ ಮಳೆ ಸುರಿದ ಉದಾಹರಣೆಗಳು ಇರುವುದರಿಂದ ಭಕ್ತರು ನಂಬಿಕೆ, ಶ್ರದ್ಧಾಭಕ್ತಿಯಿಂದ ಪೂಜೆ ಸಲ್ಲಿಸುತ್ತಿದ್ದಾರೆ. ಪ್ರತಿಯೊಬ್ಬರೂ ಕೊಡ ಹಿಡಿದು ಬಾವಿಯಿಂದ ನೀರು ತಂದು ದೇವರಿಗೆ ಜಲಮಜ್ಜನ ಮಾಡಿ ತಮ್ಮ ಸೇವೆ ಸಲ್ಲಿಸುತ್ತಾರೆ ಎಂದೂ ಅವರು ಹೇಳಿದರು.

ಗುರುವಾರ ರಾತ್ರಿಯಿಂದ ಆರಂಭವಾಗಿರುವ ಈ ವಿಶಿಷ್ಟ ಪೂಜೆಯಲ್ಲಿ ಭಾಗವಹಿಸಲು ಮಹಿಳೆಯರು, ಮಕ್ಕಳು ಒಳಗೊಂಡಂತೆ ಅನೇಕ ಭಕ್ತರು ತಂಡೋಪತಂಡವಾಗಿ ಆಗಮಿಸುತ್ತಿದ್ದಾರೆ. ರಾತ್ರಿಯಿಡೀ ಶಿವನಾಮ ಸ್ಮರಿಸುತ್ತ, ಭಕ್ತಿಗೀತೆಗಳನ್ನು ಪ್ರಸ್ತುತಪಡಿಸುತ್ತ ಮಳೆ ಸುರಿಸುವಂತೆ ಕೋರುತ್ತಿರುವ ಇಲ್ಲಿನ ಭಕ್ತರ ಇಚ್ಛೆ ಕೊನೆಗೊಳ್ಳುವವರೆಗೂ ಮಲ್ಲಿಕಾರ್ಜುನನಿಗೆ ಜಲಮಜ್ಜನದ ವೈಭವ.

ಕೊಲ್ಲೂರು ಅಭಿವೃದ್ಧಿಗೆ ರೂ.30 ಕೋಟಿ

25-ಜೂನ್-2008 ಮಳೆಗಾಗಿ

ಮುಖ್ಯಮಂತ್ರಿಯಿಂದ ಚಂಡಿಕಾ ಯಾಗ

ಮಳೆಗಾಗಿ

ಪ್ರಜಾವಾಣಿ ವಾರ್ತೆ

ಬೈಂದೂರು: ಪ್ರಸಿದ್ಧ ಯಾತ್ರಾ ಸ್ಥಳವಾಗಿರುವ ಕೊಲ್ಲೂರಿನ ಸಮಗ್ರ ಅಭಿವೃದ್ಧಿಗೆ 30 ಕೋಟಿ ರೂಪಾಯಿಗಳನ್ನು ನೀಡುವುದಾಗಿ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಭಾನುವಾರ ಕೊಲ್ಲೂರಿನಲ್ಲಿ ಘೋಷಿಸಿದರು.

ರಾಜ್ಯದ ಕಲ್ಯಾಣಾರ್ಥ ಮೂಕಾಂಬಿಕೆಯ ಸನ್ನಿಧಿಯಲ್ಲಿ ಚಂಡಿಕಾ ಹೋಮದಲ್ಲಿ ಪಾಲ್ಗೊಂಡ ಅವರು ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು. ದೇಶದ ವಿವಿಧ ಕಡೆಗಳಿಂದ ಪ್ರತಿದಿನ ಅಸಂಖ್ಯ ಯಾತ್ರಾರ್ಥಿಗಳು ಇಲ್ಲಿಗೆ ಆಗಮಿಸುತ್ತಿದ್ದು, ಒಳಚರಂಡಿ, ನೈರ್ಮಲ್ಯ, ನೀರು ಪೂರೈಕೆಯಂತಹ ಮೂಲ ಸೌಕರ್ಯಗಳ ಕೊರತೆಯಿದೆ. ಅದನ್ನು ನೀಗಿಸಲು ಈ ಹಣವನ್ನು ಬಳಸಲಾಗುವುದು. ಇದರಲ್ಲಿ 10 ಕೋಟಿ ರೂಯನ್ನು ತತ್‌ಕ್ಷಣ ಬಿಡುಗಡೆಗೊಳಿಸಲಾಗುವುದು ಎಂದು ತಿಳಿಸಿದರು.



ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಭಾನುವಾರ ಕೊಲ್ಲೂರಿನ ಮೂಕಾಂಬಿಕಾ ದೇವಸ್ಥಾನದಲ್ಲಿ ರಾಜ್ಯದ ಕಲ್ಯಾಣಾರ್ಥ ಚಂಡಿಕಾಯಾಗ ನೆರವೇರಿಸಿ ಪೂರ್ಣಾಹುತಿಯಲ್ಲಿ ಪಾಲ್ಗೊಂಡರು. ಸಚಿವರಾದ ಡಾ. ವಿ.ಎಸ್ ಆಚಾರ್ಯ, ಶೋಭಾ ಕರಂದ್ಲಾಜೆ, ರಾಮಚಂದ್ರ ಗೌಡ, ಕೃಷ್ಣಯ್ಯ ಶೆಟ್ಟಿ, ಶಾಸಕ ಕೆ. ಲಕ್ಷ್ಮೀನಾರಾಯಣ, ಕೆ. ರಘುಪತಿ ಭಟ್ ಮತ್ತಿತರರು ಇದ್ದಾರೆ.

ಮೊನ್ನೆಯಷ್ಟೆ ಸಂಭವಿಸಿದ ಸೂರ್ಯಗ್ರಹಣದ ಹಿನ್ನೆಲೆಯಲ್ಲಿ ರಾಜ್ಯದ ಜನತೆಗೆ ಬರಬಹುದಾದ ಸಂಕಷ್ಟ ನಿವಾರಣೆ ಮಾಡುವಂತೆ, ದುಷ್ಟಶಕ್ತಿಗಳ ದಮನ ಮಾಡುವಂತೆ ಹಾಗೂ ಒಳ್ಳೆಯ ಮಳೆ ಬೆಳೆ ಕರುಣಿಸುವಂತೆ ಮೂಕಾಂಬಿಕೆಯನ್ನು ಪ್ರಾರ್ಥಿಸಲು ಶನಿವಾರ ರಾತ್ರಿಯೇ ಮುಖ್ಯಮಂತ್ರಿಗಳು ಕೊಲ್ಲೂರಿಗೆ ಆಗಮಿಸಿದ್ದು ಬೆಳಗ್ಗೆ ಚಂಡಿಕಾಹೋಮದಲ್ಲಿ ಪೂರ್ಣಾಹುತಿ ನೀಡಿದರು.

ಸಚಿವರುಗಳಾದ ಡಾ. ವಿ. ಎಸ್. ಆಚಾರ್ಯ, ಶೋಭಾ ಕರಂದ್ಲಾಜೆ, ಕೃಷ್ಣಯ್ಯ ಶೆಟ್ಟಿ, ರಾಮಚಂದ್ರ ಗೌಡ, ಹಣಕಾಸು ಆಯೋಗದ ಅಧ್ಯಕ್ಷ ಎ. ಜಿ. ಕೊಡ್ಗಿ, ಶಾಸಕರಾದ ಕೆ. ಲಕ್ಷ್ಮೀನಾರಾಯಣ, ಕೆ. ರಘುಪತಿ ಭಟ್, ಜಿಲ್ಲಾಧಿಕಾರಿ ಪಿ. ಹೇಮಲತಾ ಮತ್ತಿತರರು ಹಾಜರಿದ್ದರು.

15-ಜುಲೈ-2008


...ೋಡ ಬಿತ್ತನೆಗೆ ಸರ್ಕಾರ ನಿರ್ಧಾರ

...ಹವಾಮಾನ ಸಂಸ್ಥೆಯ ಸಹಕಾರ ಕೋರಿಕೆ: ಸಚಿವ ಬೊಮ್ಮಾಯಿ

...ತೇ, ಹಾವೇರಿ, ಜು.14
...ಕ್ಷೀಣಿಸಿರುವ ಹಿನ್ನೆಲೆಯಲ್ಲಿ ...ಡ ಬಿತ್ತನೆಗೆ ಮುಂದಾಗಲಿದೆ ...ಲಸಂಪನ್ಮೂಲ ಸಚಿವ ...ೊಮ್ಮಾಯಿ ತಿಳಿಸಿದರು.
...ಸೋಮವಾರ ಪತ್ರಿಕಾಗೋ... ...ತನಾಡಿದ ಅವರು, ರಾಜ್ಯದ ...ಲ್ಲೆಗಳಲ್ಲಿ ಮುಂಗಾರು ಕ್ಷೀಣ ... ಚಿಂತೆಗೆ ಒಳಗಾಗಿದ್ದಾರೆ. ಈ ...ರ್ಕಾರ ಹಲವು ಕ್ರಮಗಳನ್ನು ..., ಅದರಲ್ಲಿ ಮೋಡ ಬಿತ್ತ... ...ದು. ಈ ಕುರಿತು ಸಚಿವ ...ಯಲ್ಲಿ ನಿರ್ಧಾರ ತೆಗೆದುಕೊಳ್ಳ... ...ನೆಯ ಹವಾಮಾನ ಸಂಸ್ಥೆಯ ...ೇರಲಾಗಿದೆ ಎಂದರು.
... ಪುಣೆ ಸಂಸ್ಥೆ ಸಹಯೋಗ ...ದ ಬಿತ್ತನೆ ಮಾಡಲಾಗಿತ್ತು. ...ದೇಶಗಳಲ್ಲಿ ಮೋಡಬಿತ್ತನೆ ...ತವಾಗಿ ನಡೆದಿದೆ. ನದಿಯ ...ಟ್ಟು ಭಾಗದಲ್ಲಿ ಮೋಡಬಿತ್ತನೆ ... ಕುರಿತು ಮುಖ್ಯಮಂತ್ರಿಗಳು ...ಮಾಡಿದ್ದಾರೆ.
...ು ಇಲಾಖೆ ಎಲ್ಲ ರೀತಿಯಿಂ... ...ದ್ಧವಾಗಿದ್ದು, ಮಾಹಿತಿಯನ್ನು ...ತ್ರಿಗಳಿಗೆ ಸಲ್ಲಿಸಿ ಕ್ರಮ ಕೈಗೊಳ್ಳ...

ಮೋಡ ಬಿತ್ತನೆಗೆ ಟೆಂಡರ್ ಕರೆಯಲು ಸ್ವಲ್ಪ ಸಮಯದ ಅಗತ್ಯವಿದೆ. 2002ರಲ್ಲಿ ಮೋಡ ಬಿತ್ತನೆ ಮಾಡಿದಾಗ 9.5 ಕೋಟಿ ರು. ಖರ್ಚಾಗಿದೆ. ಈ ಬಾರಿ ಹಣಕಾಸಿನ ಸಾಧಕ ಬಾಧಕಗಳ ಕುರಿತು ಅಧಿಕಾರಿಗಳ ಜತೆ ಸಮಾಲೋಚಿಸಿ ನಿರ್ಧಾರ ತೆಗೆದುಕೊಳ್ಳಲಾಗುವುದು.

● ಸಚಿವ ಬೊಮ್ಮಾಯಿ




ಲಾಗುವುದು ಎಂದು ತಿಳಿಸಿದರು.

ಮೋಡ ಬಿತ್ತನೆಗೆ ಟೆಂಡರ್ ಕರೆಯಲು ಸ್ವಲ್ಪ ಸಮಯದ ಅಗತ್ಯವಿದೆ. 2002ರಲ್ಲಿ ಮೋಡ ಬಿತ್ತನೆ ಮಾಡಿದಾಗ 9.5 ಕೋಟಿ ರು. ಖರ್ಚಾಗಿದೆ. ಈ ಬಾರಿ ಹವಾಮಾನ ಇಲಾಖೆ ಜೊತೆ ಚರ್ಚಿಸಿ, ಹಣಕಾಸಿನ ಸಾಧಕ ಬಾಧಕಗಳ ಕುರಿತು ಅಧಿಕಾರಿಗಳ ಜತೆ ಸಮಾಲೋಚಿಸಿ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ವಿವರಿಸಿದರು.

ರಾಜ್ಯಪಾಲರ ಆಡಳಿತದಲ್ಲಿ ಜಲಸಂಪನ್ಮೂಲ ಇಲಾಖೆಗೆ 3,680 ಕೋಟಿ ರು. ನೀಡಿದೆ. ಆದರೆ ಇದರಿಂದ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಹೀಗಾಗಿ ಬಜೆಟ್‌ನ ನೆರವು ನೀಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗಿದ್ದು, ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದ ಸಚಿವರು, ಗುತ್ತಲ ಮಲ್ಲಾಪುರ ಯೋಜನೆ ಪೂರ್ಣಗೊಳಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಈ ಯೋಜನೆ ಪೂರ್ಣಗೊಂಡಲ್ಲಿ 22 ಸಾವಿರ ಎಕರೆ ಭೂಮಿ ನೀರಾವರಿಗೆ ಒಳಪಡಲಿದೆ ಎಂದರು.

ತುಂಗಭದ್ರಾ ಮೇಲ್ದಂಡೆ ಯೋಜನೆಯನ್ನು ಶೀಘ್ರ ಪೂರ್ಣಗೊಳಿಸಲಾಗುವುದು. ಎಲ್ಲ ಜಲಾಶಯಗಳಲ್ಲಿ ಹೂಳು ತುಂಬಿದೆ. ಶೀಘ್ರ ಇಲಾಖೆಯ ಅಧಿಕಾರಿಗಳ ಸಭೆ ಕರೆದು ಹೂಳೆತ್ತಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ನುಡಿದರು.

ಸಹ್ಯಾದ್ರಿ ಪ್ರತಿಕೆ: ಮನುಷ್ಯನಿಗೆ ಹಿಡಿದ ಹಡಿ



ಬೆಂಗಳೂರು ... 19-1-93

ಮಳೆಗಾಗಿ ಮಸಣಕ್ಕೆ ...ಾತ್ರೆ

ಮಳೆ ಇಲ್ಲದೆ ಬೆಳೆ ಹಾಳು: ಜನಜಾನುವಾರು ಕಂಗಾಲು

ಚಿಕ್ಕಮಗಳೂರು: ಅನಾವೃಷ್ಟಿ ಪ್ರದೇಶ ಸಮೀಕ್ಷೆಗೆ ಸೂಚನೆ

...ತ್ತನೆ ಬಿತ್ತನೆ

ಭಾನುವಾರ 10ನೇ ಆಗಸ್ಟ್ 2008

ಒಲಿಂಪಿಕ್ ಉದ್ಘಾಟನಾ ಸಮಾರಂಭ

ಮಳೆ ತಡೆಯಲು ರಾಕೆಟ್ ಉಡಾಯಿಸಿದ್ದ ಚೀನಾ!

ಬೀಜಿಂಗ್ (ಪಿಟಿಐ): ಇಲ್ಲಿ ಶುಕ್ರವಾರ ನಡೆದ ಒಲಿಂಪಿಕ್ ಕ್ರೀಡಾಕೂಟದ ವರ್ಣರಂಜಿತ ಉದ್ಘಾಟನಾ ಸಮಾರಂಭವನ್ನು ಮಳೆ 'ಹಾಳು' ಮಾಡದಂತೆ ನೋಡಿಕೊಳ್ಳಲು ಚೀನಾವು 1,104 ರಾಕೆಟ್‌ಗಳನ್ನು ಉಡಾಯಿಸಿ ಮೋಡ ಚದುರಿಸಿದ ವಿಲಕ್ಷಣ ಪ್ರಸಂಗ ತಡವಾಗಿ ವರದಿಯಾಗಿದೆ.

'ಚೀನಾದಲ್ಲಿ ನಡೆದ ಬಹುದೊಡ್ಡ ಮಳೆ ಓಡಿಸುವ ಕಾರ್ಯಾಚರಣೆ ಇದಾಗಿತ್ತು, ಒಲಿಂಪಿಕ್‌ನಲ್ಲಿ ಮಳೆ ಕಾಟ ತಡೆಯುವ ಸಲುವಾಗಿ ಬಳಸಿಕೊಳ್ಳಲಾದ ಇಂತಹ ಪ್ರಥಮ ತಂತ್ರಜ್ಞಾನ ಇದಾಗಿದೆ' ಎಂದು ಬೀಜಿಂಗ್ ಮುನಿಸಿಪಲ್ ಮೆಟೀರಿಯಲಾಜಿಕಲ್ ಬ್ಯೂರೋದ ಮುಖ್ಯಸ್ಥ ಗುಹು ಶನಿವಾರ ಇಲ್ಲಿ ತಿಳಿಸಿದ್ದಾರೆ.

ಉದ್ಘಾಟನಾ ಸಮಾರಂಭದಲ್ಲಿ ಬೇರಾವ ಭಯವೂ ಇರದಿದ್ದರೂ, ಸಂಘಟಕರು ಮಳೆಗೆ ತುಂಬ ಹೆದರಿದ್ದರು. ಸ್ಥಳೀಯ ಕಾಲಮಾನ ಸಂಜೆ 4 ಗಂಟೆಗೆ ಬೀಜಿಂಗ್‌ನ 21 ಕಡೆಗಳಿಂದ ರಾಕೆಟ್ ಉಡಾಯಿಸಲು ತೊಡಗಿದ ಸಿಬ್ಬಂದಿ, ರಾತ್ರಿ 11.39ರ ತನಕವೂ ಈ ಕಾರ್ಯಾಚರಣೆ ಮುಂದುವರಿಸಿದರು.

ಹಕ್ಕಿ ಗೂಡಿನಂತೆ ನಿರ್ಮಾಣಗೊಂಡ ಮುಖ್ಯ ಕ್ರೀಡಾಂಗಣದ ಮೇಲ್ಭಾಗ ಮೋಡ ಘನೀಕರಿಸಿ ಮಳೆ ಬೀಳಬಾರದು ಎಂಬ ಉದ್ದೇಶಕ್ಕೇ ತುಣುಕು ಮೋಡವನ್ನೂ ಚದುರಿಸುವ ಯತ್ನದಲ್ಲಿ ರಾಕೆಟ್‌ಗಳು ಸಫಲವಾದವು. ಉದ್ಘಾಟನಾ ಸಮಾರಂಭ ಅತ್ಯಂತ ವರ್ಣಮಯವಾಗಿ ನಡೆದುಹೋಯಿತು.

ಸಂಕ್ಷಿಪ್ತ ಸುದ್ದಿ

ಎಲ್ಲೋಯಿತು

ಮಳೆ

ಜುಲೈ ತಿಂಗಳಲ್ಲಿ ಕಣ್ಣು ಮುಚ್ಚಿ ಸುರಿಯಬೇಕಾದ ಮಳೆ ಮಾಯವಾಗಿದೆ. ಎಲ್ಲೋಯ್ತು ಮಳೆ?

ಜುಲೈ ತಿಂಗಳೆಂದರೆ ಮಳೆ ಬಿಟ್ಟು ಬೇರೇನೂ ಕಾಣದಂಥ ಪರಿಸ್ಥಿತಿ ಕರಾವಳಿ ಹಾಗೂ ಮಲೆನಾಡು ಪ್ರದೇಶದಲ್ಲಿರುತ್ತದೆ. ಆದರೆ ಈ ವರ್ಷ ಮಳೆ ಕಣ್ಮರೆಯಾಗಿ ಏಪ್ರಿಲ್-ಮೇ ತಿಂಗಳ ಬಿರುಬೇಸಿಗೆಯನ್ನೂ ಮೀರಿಸುವಂಥ ಒಣ ವಾತಾವರಣ ನಿರ್ಮಾಣವಾಗಿದೆ.

ಅಣ್ಣ-ತಮ್ಮನ ಮಳೆ ಎಂದೇ ಹೆಸರಾದ ಪುಷ್ಯ-ಪುನಾರಸು (ಪುನರ್ವಸು)ಗಳು ಜುಲೈ ತಿಂಗಳಲ್ಲಿ ತಪ್ಪದೆ ಸುರಿಯುತ್ತವೆ. ಎಲ್ಲ ನದಿ, ಕೊಳ್ಳಗಳೂ ತುಂಬಿ ಹರಿಯುತ್ತವೆ. ಅಣ್ಣನ ಮಳೆಯಿಂದ ಉಂಟಾಗುವ ಪ್ರವಾಹದಿಂದ ನದಿ, ಹೊಳೆಗಳಲ್ಲಿ ಕಟ್ಟಿಗೆ ತೇಲಿ ಹೋದರೆ, ತಮ್ಮನ ಮಳೆಯ ಪ್ರವಾಹದಲ್ಲಿ ಹೆಣಗಳು ತೇಲಿ ಹೋಗುತ್ತವೆ ಎಂಬ ಮಾತು ಕರಾವಳಿಯಲ್ಲಿ ಪ್ರಚಲಿತ. ಈ ಮಾತು ಜುಲೈ ತಿಂಗಳ ಮಳೆಯ ಭೀಕರ ಸ್ವರೂಪವನ್ನು ಧ್ವನಿಸುತ್ತದೆ.

ಮಳೆಯ ಅಬ್ಬರಕ್ಕೆ, ರಕ್ಕಸ ಅಲೆಗಳಿಗೆ ಹೆದರಿ ಮೀನುಗಾರರು ಸಮುದ್ರಕ್ಕೆ ಇಳಿಯಲು ಹಿಂಜರಿದು ಉಪವಾಸ ಇದ್ದರೂ ಪರವಾಗಿಲ್ಲ ಎಂದು ಮನೆಯಲ್ಲಿ ಉಳಿಯುತ್ತಿದ್ದರು. ಗದ್ದೆಗಳಲ್ಲಿ ಬತ್ತದ ನಾಟಿ ಬಿಡುವಿಲ್ಲದೆ ನಡೆಯುತ್ತಿತ್ತು. ಅಡಿಕೆ ತೋಟಗಳಿಗೆ ಎರಡೆರಡು ಬಾರಿ ಕೊಳೆಮದ್ದು ಹೊಡೆಯುವವರೆಗೆ ತೋಟಿಗರು ನಿದ್ದೆ ಮಾಡುತ್ತಿರಲಿಲ್ಲ.

ರಸ್ತೆಯಲ್ಲಿ ಯಾರ ಕೈಲಿ ನೋಡಿದರೂ ಛತ್ರಿ. ಪತ್ರಿಕೆಗಳಲ್ಲಿ ನೆರೆ ಅನಾಹುತಗಳು, ಮನುಷ್ಯರು, ರಸ್ತೆ, ಮನೆ ನೀರಿನಲ್ಲಿ ಕೊಚ್ಚಿಕೊಂಡು ಹೋದ ಪ್ರಕರಣಗಳ ಸುದ್ದಿ! ಇದು ಜುಲೈ ತಿಂಗಳಲ್ಲಿ ಕರಾವಳಿ ಪ್ರದೇಶದ ಚಿತ್ರಣ.

ಆದರೆ ಈ ವರ್ಷ ಎಲ್ಲ ತಿರುವು-ಮುರುವು. ಜುಲೈ ಮೂರನೇ ವಾರ ಮುಗಿದರೂ ಮಳೆಯ ಸುಳಿವಿಲ್ಲ! ಅಕ್ಕಿ ಮತ್ತಿತರ ದಿನಸಿಗಳ ಬೆಲೆ ಗಗನಕ್ಕೇರುತ್ತಲೇ ಇದೆ. ಬತ್ತ ಬೆಳೆದು ಹೇಗಾದರೂ ಜೀವನ ನಡೆಸುವ ರೈತರ ಕನಸು ಕನಸಾಗಿಯೇ ಉಳಿದೀತೇ ಎಂಬ ಚಿಂತೆ ಅವರಿಗೆ. ಜುಲೈ ಆರಂಭದಲ್ಲಿ ಎಲ್ಲಿ ನೋಡಿದರೂ ಹಸಿರು ನಳನಳಿಸುತ್ತಿತ್ತು. ಈ ತಿಂಗಳಲ್ಲಿ ಬಿತ್ತನೆ, ನಾಟಿ ಕಾರ್ಯ ಮುಗಿಯುತ್ತಿತ್ತು. ಆದರೆ ಮಳೆರಾಯನ ಮುನಿಸಿನಿಂದ ನಾಟಿ ಮಾಡಿದ ಗದ್ದೆಗಳಲ್ಲಿ ಬತ್ತದ ಎಳೆಪೈರು ಒಣಗುವ ಪರಿಸ್ಥಿತಿ ನಿರ್ಮಾಣವಾಗಿದೆ. ರೈತ ಅಕ್ಷರಶಃ ತಲೆ ಮೇಲೆ ಕೈಹೊತ್ತು ಕೂತಿದ್ದಾನೆ.

ಮಳೆಯಿಲ್ಲದೆ ನದಿ, ಸಮುದ್ರದ ನೀರೆಲ್ಲ ತಿಳಿಯಾಗಿದೆ. ಕೊರೆಗಳು ಬತ್ತುತ್ತಿವೆ. ಸಮುದ್ರ ಸೇರುವ ನದಿಗಳಿಗೆ ಮತ್ತೆ ನಿಧಾನವಾಗಿ ಉಪ್ಪು ನೀರು ಬರುತ್ತಿದೆ. ಈ ಪರಿಸ್ಥಿತಿ ಬಳಸಿಕೊಂಡು ನದಿ, ಸಮುದ್ರಗಳಲ್ಲಿ ಬೆಸ್ತರು ಮೀನು ಹಿಡಿಯಲು ಆರಂಭಿಸಿ ಭರಪೂರ ಮೀನು ಇಳುವರಿ ಪಡೆಯುತ್ತಿದ್ದಾರೆ. ನೊಣಗಳು ಮಾತ್ರ ಹಾರಾಡುತ್ತಿದ್ದ ಮೀನು ಮಾರುಕಟ್ಟೆಯಲ್ಲಿ ಈಗ ಜನ ಜಂಗುಳಿ. ಬೀದಿಗಳಲ್ಲಿ ನಡೆದಾಡುವ ಜನರ ಕೈಯಲ್ಲಿ ಛತ್ರಿಗಳಿಲ್ಲ.

'ಸದ್ಯದಲ್ಲಿ ಮಳೆ ಬರುವ ಲಕ್ಷಣಗಳಿಲ್ಲ' ಎಂಬ ಭಾವನೆ ಎಲ್ಲರದು. ಮಳೆಗಾಲ ಮುಗಿದರೆ ಸಾಕಪ್ಪ ಎನ್ನುತ್ತಿದ್ದವರು ಈ ಬಿಸಿಲು ಸಹಿಸುವುದು ಹೇಗಪ್ಪ ಎಂದು ಗೊಣಗುತ್ತಿದ್ದಾರೆ. ಐಸ್‌ಕ್ರೀಂ, ತಂಪು ಪಾನೀಯಗಳ ಮಾರಾಟ ಶುರುವಾಗಿದೆ. ವಾಹನಗಳು ಹಾದು ಹೋದರೆ ರಸ್ತೆಗಳಲ್ಲಿ ಧೂಳೇಳುತ್ತದೆ. ಕುಡಿಯುವ ನೀರಿನ ಸಮಸ್ಯೆ ಅಲ್ಲಲ್ಲಿ ತಲೆ ಎತ್ತಿದೆ. ಎಲ್ಲರೂ ಮಳೆಗಾಗಿ ಮುಗಿಲಿನತ್ತ ನೋಡುವಂತಾಗಿದೆ.

ಚಿತ್ರ-ಲೇಖನ:

■ ಎಂ.ಜಿ. ನಾಯಕ, ಕುಮಟಾ



ವರುಣನ ಅವಕೃಪೆಯಿಂದಾಗಿ ಕೊರೆಗಳೂ ಬತ್ತುತ್ತಿವೆ ಮತ್ತೊಂದೆಡೆ ಬತ್ತದ ಗದ್ದೆಗಳು ಒಣಗುತ್ತಿವೆ



ಗ್ರಂಥ ಋಣ

* ಆಕಾಶ ಜಾನಪದ - ಪ್ರೊ. ಹಂಪನಾ -ಕ. ಸಾ. ಪ. - 1985

* ಕನ್ನಡ ಜಾನಪದ ಗೀತೆಗಳು - ಬಿ.ಎಸ್. ಗದ್ದಗಿಮಠ - ಕರ್ನಾಟಕ ವಿ. ವಿ.

* ಕೆಲವು ಜನಪದ ಸಂಪ್ರದಾಯಗಳು - ತ.ಚಿ. ಚಲುವೇಗೌಡ -ಮೊದಲ ಮುದ್ರಣ - 1978

* ಜನಪದದಲ್ಲಿ ಮಳೆರಾಯನ ಮುನಿಸು - ಬಸವರಾಜ ಆಕಳವಾಡಿ - ಕ. ಸಾ. ಪ. - 1981

* ಜನಪದ ಜೀವನ ಮತ್ತು ಕಲೆ - ಡಾ. ಎಲ್.ಆರ್. ಹೆಗಡೆ - ಸಮಾಜ ಪುಸ್ತಕಾಲಯ - 1970

* ಜಾನಪದ ಗಂಗೋತ್ರಿ - ಕರ್ನಾಟಕ ಜಾನಪದ ಅಕಾಡೆಮಿ - 9ನೇ ಸಂಪುಟ - 1977

* ಜಾನಪದ ಸಮೀಕ್ಷ - ಡಿ.ಕೆ. ರಾಜೇಂದ್ರ - ಗೀತಾಬುಕ್ ಹೌಸ್ - 1970

* ಜನಪದ ಮಹಾಭಾರತ - ಪಿ.ಕೆ. ರಾಜಶೇಖರ್ - 2005

* ಜಾನಪದ ಪರಿಶೋಧನೆ - ಅಂಬಳಿಕೆ ಹಿರಿಯಣ್ಣ - ಪ್ರಜ್ವಲ ಪ್ರಕಾಶನ - ಮೈಸೂರು.

* ಮಳೆ ಒಂದು ಜಾನಪದೀಯ ಅಧ್ಯಯನ - ಡಾ. ಎಸ್.ಪಿ. ಪದ್ಮಪ್ರಸಾದ್ - 1994

* ಸುವರ್ಣ ಜಾನಪದ - ಡಾ. ಎಚ್.ಜೆ. ಲಕ್ಕಪ್ಪಗೌಡ - ಪ್ರಧಾನ ಸಂಪಾದಕರು - ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ - 1998

* * * * *

ವಕ್ತೃಗಳ ಪರಿಚಯ ಪಟ್ಟಿ

ನಂ.	ವಕ್ತೃಗಳು	ಜಾತಿ	ವಯಸ್ಸು	ಸ್ಥಳ	ಲಿಂಗ	ವೃತ್ತಿ
೧.	ನಿಂಗೇಗೌಡ	ಒಕ್ಕಲಿಗ	೮೬	ಬೇವಿನಹಳ್ಳಿ	ಗಂಡಸು	ವ್ಯವಸಾಯ
೨.	ಗೋಪಾಲ	ಉಪ್ಪಾರ	೪೦	ಭೇರ್ಯ	ಗಂಡಸು	ವ್ಯಾಪಾರ
೩.	ಕಂಪೇಗೌಡ	ಕುರುಬ	೫೨	ಎನ್. ಶೆಟ್ಟಹಳ್ಳಿ	ಗಂಡಸು	ವ್ಯವಸಾಯ
೪.	ಕೇಶವ ಮೂರ್ತಿ	ಶ್ರೀ ವೈಷ್ಣವ	೪೧	ಬೆಟ್ಟಹಳ್ಳಿ	ಗಂಡಸು	ಅರ್ಚಕ ವೃತ್ತಿ
೫.	ಸಿದ್ದಯ್ಯ	ದಲಿತ	೫೨	ಬೆಟ್ಟಹಳ್ಳಿ	ಗಂಡಸು	ವ್ಯವಸಾಯ
೬.	ಡಾ. ಪಿ.ಕೆ. ರಾಜಶೇಖರ	ಒಕ್ಕಲಿಗ	೬೫	ಮೈಸೂರು	ಗಂಡಸು	ನಿವೃತ್ತ ಪ್ರಾಧ್ಯಾಪಕರು
೭.	ಮಹದಿಮನೆ ತಿಮ್ಮಶೆಟ್ಟಿ	ದೇವಾಂಗ	೭೫	ಬುವನಹಳ್ಳಿ	ಗಂಡಸು	ವ್ಯವಸಾಯ